ಸೋಮವಾರ, ಜುಲೈ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 191 | ಪುಟ 12
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಪಿಯುಸಿ ಫೇಲಾಗಿದ್ದೀರಾ? ಚಿಂತಿಸಬೇಡಿ. ನಿಮ್ಮಂಥವರ ನೆರವಿಗಾಗಿಯೇ ವಿವಿಧ ಕೌಶಲಾಭಿವೃದ್ಧಿ ಕೋರ್ಸ್‌ಗಳಿವೆ. ಈ ಕೋರ್ಸ್‌ಗಳು ಉದ್ಯೋಗಕ್ಕೆ ಅಗತ್ಯವಾದ ಕೌಶಲ ಕಲಿಸುತ್ತವೆ.



ಚಿನಕುರಳಿ

ಪ್ರಕಾಶ್ ಶೆಟ್ಟಿ



ನದಿಗಳಲ್ಲಿ ಹರಿವು ಹೆಚ್ಚಳ • ಜಲಾಶಯಗಳ ನೀರಿನ ಮಟ್ಟ ಏರಿಕೆ

ಮಳೆ ತೀವ್ರ: ಭೂಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆ ಮತ್ತಷ್ಟು ತೀವ್ರಗೊಂಡಿದೆ. ನದಿಗಳಲ್ಲಿ ಹರಿವು ಹೆಚ್ಚಿದ್ದು, ಜಲಪಾತಗಳು ಭೋರ್ಗರೆಯುತ್ತಿವೆ. ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಕೆಲವೆಡೆ ರಸ್ತೆಯಲ್ಲಿ ಭೂಕುಸಿತವಾಗಿ ಸಂಚಾರ ಅಸ್ತವ್ಯಸ್ತಗೊಂಡಿದೆ.

ಆಗುಂಬೆ ಘಾಟಿ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಬಳಿ ರಾಷ್ಟ್ರೀಯ ಹೆದ್ದಾರಿ ಬಳಿ ಭೂಕುಸಿತವಾಗಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ–ಮಂಗಳೂರು, ಮಡಿಕೇರಿ–ಕುಟ್ಟ ರಸ್ತೆಯಲ್ಲಿ ಮಣ್ಣುಕುಸಿದಿದೆ.

ಹಾಸನ ಜಿಲ್ಲೆ ಸಕಲೇಶಪುರದ ತಾಲ್ಲೂಕಿನ ಶಿರಾಡಿ ಘಾಟಿಯ ದೋಣಿಗಲ್ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತದಿಂದ ಸಂಚಾರ ಬಂದ್ ಆಗುವ ಸಾಧ್ಯತೆ ಇದೆ. ಇಲ್ಲಿ ಚತುಷ್ಪಥ ರಸ್ತೆಗೆ ತಡೆಗೋಡೆ ನಿರ್ಮಾಣವಾಗಿಲ್ಲ. ಮಳೆಗಾಲದಲ್ಲಿ ಭೂಕುಸಿತ ಸಾಮಾನ್ಯವಾಗಿದ್ದು, ರಸ್ತೆಯಲ್ಲಿ 6 ಅಡಿ ಅಗಲ, 15 ಅಡಿ ಉದ್ದ ಹಾಗೂ 120 ಅಡಿ ಆಳಕ್ಕೆ ಮಣ್ಣು ಕುಸಿದಿದೆ.



ಸಕಲೇಶಪುರ ತಾಲ್ಲೂಕಿನ ದೋಣಿಗಲ್‌ನಲ್ಲಿ ಭೂ ಕುಸಿತ ತಡೆಯಲು ಪ್ಲಾಸ್ಟಿಕ್ ಹೊದಿಕೆ, ಮರಳಿನ ಮೂಟೆಗಳನ್ನು ಇಡಲಾಗಿದೆ
–ಪ್ರಜಾವಾಣಿ ಚಿತ್ರ/ಜಾನೇಕೆರೆ ಆರ್. ಪರಮೇಶ್

ಕೊಡಗು ಜಿಲ್ಲೆಯ ಕಿಂಡಿ ಅಣೆಕಟ್ಟು ಭರ್ತಿಯಾಗಿ ಸಂಪಾಜೆಯಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಮಂಗಳೂರು–ಮಡಿಕೇರಿ ರಸ್ತೆ ಜಲಾವೃತವಾಗಿದ್ದು, ಭಾಗಮಂಡಲ–ತ್ರಿವೇಣಿ ಸಂಗಮ, ಭಾಗಮಂಡಲ–ಮಡಿಕೇರಿ ರಸ್ತೆಯಲ್ಲಿ ಒಂದು ಅಡಿವರೆಗೂ ನೀರು ನಿಂತಿದೆ. ಜನಸಂಚಾರಕ್ಕೆ ಯಾಂತ್ರಿಕ ದೋಣಿ ವ್ಯವಸ್ಥೆ ಕಲ್ಪಿಸಲಾಗಿದೆ. ಮುಕ್ಕೋಡ್ಲು, ಹೊದಕಾನ–ಹೆಮ್ಮತಾಳು ಸೇತುವೆ ಮುಳುಗಡೆಯಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಆಗುಂಬೆ ಸಮೀಪ ರಾಷ್ಟ್ರೀಯ ಹೆದ್ದಾರಿ 169ರ ಬಳಿ ಗುಡ್ಡ ಕುಸಿದಿದ್ದು, ಮಲೆನಾಡು–ಕರಾವಳಿ ನಡುವಿನ ಸಂಪರ್ಕ ಬಹುತೇಕ ಕಡಿತವಾಗಿದೆ. ಆಗುಂಬೆಯಲ್ಲಿ 24 ಗಂಟೆಗಳಲ್ಲಿ 20.5 ಸೆಂ.ಮೀ ಮಳೆ ಸುರಿದಿದೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಕೇರಳ, ತೆಲಂಗಾಣ: ಭಾರಿ ಮಳೆ

ತಿರುವನಂತಪುರ/ಹೈದರಾಬಾದ್ (ಪಿಟಿಐ): ಕೇರಳದ ವಿವಿಧೆಡೆ ಭಾರಿ ಮಳೆಯಾಗುತ್ತಿದ್ದು, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ತಿರುವನಂತಪುರ, ಕೊಲ್ಲಂ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ತೆಲಂಗಾಣದಲ್ಲಿ ಭಾರಿ ಮಳೆಯಾಗುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಜುಲೈ 11ರಿಂದ ಮೂರು ದಿನಗಳ ಕಾಲ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮಹಾರಾಷ್ಟ್ರದಲ್ಲಿ ಶನಿವಾರ–ಭಾನುವಾರ ಮಳೆ ಸಂಬಂಧಿತ ಅನಾಹುತಗಳಿಂದ 9 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀಲಂಕಾ: ಸರ್ವಪಕ್ಷ ಸರ್ಕಾರಕ್ಕೆ ಸಮ್ಮತಿ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಸರ್ವಪಕ್ಷ ಮಧ್ಯಂತರ ಸರ್ಕಾರ ರಚಿಸಲು ಅಲ್ಲಿನ ಪ್ರಮುಖ ವಿರೋಧ ಪಕ್ಷಗಳು ಭಾನುವಾರ ನಿರ್ಧರಿಸಿವೆ. ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಬಗ್ಗೆ ಜನರಲ್ಲಿ ಭಾರಿ ಆಕ್ರೋಶ ಸೃಷ್ಟಿಯಾಗಿದೆ. ಹಾಗಾಗಿ, ಗೊಟಬಯ ಅವರು ಬುಧವಾರ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಈಗ ದೇಶದ ಮುಂದೆ ಇರುವ ಆರ್ಥಿಕ ಬಿಕ್ಕಟ್ಟು ಮತ್ತು ಗೊಟಬಯ ರಾಜೀನಾಮೆಯಿಂದ ಸೃಷ್ಟಿಯಾಗುವ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವುದು ಎಂಬ ಕುರಿತು ಚರ್ಚಿಸಲು ವಿರೋಧ ಪಕ್ಷಗಳ ಮುಖಂಡರು ಸಭೆ ನಡೆಸಿದ್ದರು.



ಗೊಟಬಯ ರಾಜಪಕ್ಸ

‘ಎಲ್ಲ ಪಕ್ಷಗಳಿಗೂ ಪ್ರಾತಿನಿಧ್ಯ ಇರುವ ಮಧ್ಯಂತರ ಸರ್ಕಾರ ರಚಿಸಲು ತಾತ್ವಿಕವಾಗಿ ನಾವು ಸಮ್ಮತಿಸಿದ್ದೇವೆ’ ಎಂದು ಆಡಳಿತಾರೂಢ ಶ್ರೀಲಂಕಾ ಪೊದುಜನ ಪೆರಮುನ ಪಕ್ಷದಿಂದ ಸಿಡಿದು ಬೇರೆಯಾಗಿರುವ ಬಣದ ನಾಯಕ ವಿಮಲ್ ವೀರವಂಶ ಹೇಳಿದ್ದಾರೆ.

ರಾಜಪಕ್ಸ ಅವರ ರಾಜೀನಾಮೆಯ ವರೆಗೆ ಕಾಯುವ ಅಗತ್ಯವೇನೂ ಇಲ್ಲ ಎಂದು ಇದೇ ಬಣದ ಇನ್ನೊಬ್ಬ ನಾಯಕ ವಾಸುದೇವ ನನಯಕ್ಕರ ಹೇಳಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬುಧವಾರ ರಾಜೀನಾಮೆ ನೀಡುವುದಾಗಿ ಸಂಸತ್ತಿನ ಸ್ಪೀಕರ್ ಮಹಿಂದಾ ಯಪ ಅಭಯವರ್ಧನ ಅವರಿಗೆ ಗೊಟಬಯ ಅವರು ಶನಿವಾರ ತಿಳಿಸಿದ್ದಾರೆ. ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರೂ ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ. ಅಧ್ಯಕ್ಷರು ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಬಯಸಿವೆ ಎಂದು ಸ್ಪೀಕರ್ ಅವರು ಗೊಟಬಯ ಅವರಿಗೆ ಶನಿವಾರ ತಿಳಿಸಿದ್ದರು.

ರಾಜಕೀಯ ಪಕ್ಷಗಳ ಮುಖಂಡರು ಸೋಮವಾರ ಸಭೆ ಸೇರಿ, ಸಂಸತ್ ಅಧಿವೇಶನ ನಡೆಸುವುದು ಮತ್ತು ರಾಜಪಕ್ಸ ಅವರಿಂದ ಅಧಿಕಾರ ಹಸ್ತಾಂತರ ಪ್ರಕ್ರಿಯೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಇನ್ನೊಂದು ಸುದ್ದಿ 8

ಸಂಕ್ಷಿಪ್ತ ಸುದ್ದಿ

ಬಿಎಸ್‌ವೈ ಭೇಟಿಯಾದ ಕಟೀಲ್

ಬೆಂಗಳೂರು: ಯೂರೋಪ್ ಪ್ರವಾಸದಿಂದ ಹಿಂದಿರುಗಿರುವ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರನ್ನು ಭಾನುವಾರ ಭೇಟಿಮಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೆಲ ಕಾಲ ಚರ್ಚೆ ನಡೆಸಿದರು.

ಯಡಿಯೂರಪ್ಪ ಅವರ ಮಗ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ವೇಳೆ ಇದ್ದರು.

ಬಂಜೆತನ ಸಮಸ್ಯೆ: ತಪಾಸಣೆ ಶಿಬಿರ 16ಕ್ಕೆ

ಬೆಂಗಳೂರು: ನಗರದ ಕೋರ-ಮಂಗಲದಲ್ಲಿರುವ ಗುಣಶೀಲ ಫರ್ಟಿಲಿಟಿ ಸೆಂಟರ್ ಇದೇ 16 ರಂದು ಸಂತಾನಹೀನತೆ ಸಮಸ್ಯೆ ಹೊಂದಿರುವ ದಂಪತಿಗಳಿಗೆ ಉಚಿತ ಸ್ಕ್ಯಾನಿಂಗ್ ಮತ್ತು ತಪಾಸಣೆ ಶಿಬಿರ ಹಮ್ಮಿಕೊಂಡಿದೆ.

ಬೆಳಿಗ್ಗೆ 8.30 ರಿಂದ ಮಧ್ಯಾಹ್ನ 2.30 ರವರೆಗೆ ಶಿಬಿರ ನಡೆಯಲಿದೆ. ಸಂತಾನಫಲ ತಜ್ಞೆ ಡಾ. ದೇವಿಕಾ ಗುಣಶೀಲ ಮತ್ತು ವೈದ್ಯರ ತಂಡವು ಅಗತ್ಯ ಸಲಹೆಗಳನ್ನು ನೀಡಲಿದ್ದಾರೆ. ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ. **ಸಂಪರ್ಕಕ್ಕೆ:** 080 46462600 ಅಥವಾ 26673585

13ಕ್ಕೆ ಕಾರ್ಯಾಗಾರ

ಬೆಂಗಳೂರು:'ದೇಶಿ ಔಷಧೀಯ ಸಸ್ಯಗಳ ಸಂರಕ್ಷಣೆ' ಕುರಿತ ಕಾರ್ಯಾಗಾರವನ್ನು ಜುಲೈ 13ರಂದು ಆಯೋಜಿಸಲಾಗಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಸ್ಯವಿಜ್ಞಾನ ವಿಭಾಗ ಹಾಗೂ ಕರ್ನಾಟಕ ರಾಜ್ಯ ಔಷಧಿ ಗಿಡಮೂಲಿಕಾ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಜೀವವೈವಿಧ್ಯ ಮಂಡಳಿ ಸಹಯೋಗದಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿದ್ದು, ಜ್ಞಾನ ಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್‌ನಲ್ಲಿ ನಡೆಯಲಿದೆ ಎಂದು ತಿಳಿಸಿದ್ದಾರೆ.

ಜನ್ಮಶತಾಬ್ದಿ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್

'ದಿಟ್ಟ ಧ್ವನಿಯ ಚಿಂತನಾಶೀಲ ವ್ಯಕ್ತಿ ಕೋ. ಚೆನ್ನಬಸಪ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿಟ್ಟ ನಿರ್ಧಾರ, ಗಟ್ಟಿ ಧ್ವನಿ, ಬಹುಮುಖ ವ್ಯಕ್ತಿತ್ವ, ಚಿಂತನಾಶೀಲ ವ್ಯಕ್ತಿತ್ವ ಹೊಂದಿದ್ದ ಕೋ. ಚೆನ್ನಬಸಪ್ಪ ಅವರು, ಮಹಾತ್ಮ ಗಾಂಧೀಜಿ, ಅರವಿಂದ ಅವರ ವಿಚಾರಗಳ ಪ್ರಭಾವಕ್ಕೆ ಒಳಗಾಗಿದ್ದರು' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್ ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು, ಕೋಚೆ ಸಾಹಿತ್ಯ ಮತ್ತು ಶಿಕ್ಷಣ ಟ್ರಸ್ಟ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಭಾರತೀಯ ವಿದ್ಯಾಭವನ ಸಹಭಾಗಿತ್ವದಲ್ಲಿ ಭಾನುವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಾಹಿತಿ ಕೋ. ಚೆನ್ನಬಸಪ್ಪ ಅವರ ಜನ್ಮಶತಾಬ್ದಿ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸೈದ್ಧಾಂತಿಕ ಬದುಕು ನಡೆಸಿದ್ದ ಕೋ. ಚೆನ್ನಬಸಪ್ಪ ಅವರು, ನ್ಯಾಯ ನಿಷ್ಠೆಗಳಲ್ಲಿ ಎಂದಿಗೂ ರಾಜಿ ಮಾಡಿಕೊಂಡವರಲ್ಲ. ಯಾರ ಹಂಗಿಲ್ಲದೆ ಕನ್ನಡಕ್ಕಾಗಿ ಬದುಕಿದವರು' ಎಂದು ನೆನಪಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಮಾತನಾಡಿ, 'ಕರ್ನಾಟಕ ಏಕೀಕರಣಕ್ಕೆ ಕೋ. ಚೆನ್ನಬಸಪ್ಪ ಶ್ರಮಿಸಿದ್ದರು. ಬಳ್ಳಾರಿ ಕರ್ನಾಟಕದಲ್ಲೇ ಉಳಿಯಲು ಕೋ. ಚೆನ್ನಬಸಪ್ಪನವರೇ ಕಾರಣ. ಅವರ ಹೋರಾಟ ಇಲ್ಲದಿದ್ದರೆ ಬಳ್ಳಾರಿಯ ನೆಲ ಕರ್ನಾಟಕದಲ್ಲಿ ಇರುತ್ತಿರಲಿಲ್ಲ. ಬಳ್ಳಾರಿ ಆಂಧ್ರಪ್ರದೇಶದ ಪಾಲಾಗುತ್ತಿತ್ತು' ಎಂದರು.

ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ ಅವರು ಕೋಚೆ ಅವರ ಜತೆಗಿನ ಒಡನಾಟ ಮತ್ತು ಅವರ ಸರಳ ಜೀವನವನ್ನು ವಿವರಿಸಿದರು.



ನಗರದಲ್ಲಿ ಭಾನುವಾರ ನಡೆದ ಕೋ. ಚೆನ್ನಬಸಪ್ಪ ಅವರ ಜನ್ಮಶತಾಬ್ದಿ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಅಮೆರಿಕದ ಮೇರಿಲ್ಯಾಂಡ್ ಯುನಿವರ್ಸಿಟಿ ಡೀನ್ ಪ್ರಭುದೇವ್ ಕೋಣನ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಕಳಸದ ಅವರು ಕೋ. ಚೆನ್ನಬಸಪ್ಪ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಕೋಚೆ ಅವರ ಮಗ, ಮೇರಿಲ್ಯಾಂಡ್ ಯೂನಿವರ್ಸಿಟಿಯ ಡೀನ್ ಡಾ. ಪ್ರಭುದೇವ ಕೋಣನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಇದ್ದರು.

ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ. ಬಸವರಾಜ ಸಾದರ ಅವರು, ಕೋಚೆ ಮತ್ತು ಪ್ರಗತಿಶೀಲ ಸಾಹಿತ್ಯ ಚಳವಳಿ ಕುರಿತು ವಿಷಯ ಮಂಡಿಸಿದರು. ಸಾಹಿತಿ ಪ್ರೊ. ಕೆ.ಎಸ್. ಮಧುಸೂಧನ ಅವರು ಕೋಚೆ ಅವರ ಅರವಿಂದ ಸಾಹಿತ್ಯ ಅನುವಾದಗಳು ವಿಷಯದ ಕುರಿತು ಉಪನ್ಯಾಸ ಮಾಡಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಪತ್ರಕರ್ತ ಲಕ್ಷ್ಮಣ ಕೊಡಸೆ ವಹಿಸಿದ್ದರು.

'ನಾನು ಕಂಡಂತೆ ಕೋಚೆ' ಕುರಿತಗೋಷ್ಠಿಯಲ್ಲಿ ಸಂಶೋಧಕ ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ, ಸಾಹಿತಿಗಳಾದ ಪ್ರಕಾಶ ಗಿರಿಮಲ್ಲನವರ, ಕೋಚೆ ಅವರ ಮಗಳಾದ ಶಾಂತ ಜಯಪ್ರಸಾದ್, ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ಅಧ್ಯಕ್ಷ ಡಾ. ಕೆ.ಸಿ. ಗುರುದೇವ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಂಟಿ ನಿರ್ದೇಶಕ ಕೆ.ಬಿ. ಗುದಗಿ ಅವರು ಕೋಚೆ ಅವರೊಂದಿಗಿನ ಒಡನಾಟವನ್ನು ಹಂಚಿಕೊಂಡರು.

'ಬೇಡ ಜಂಗಮ ಪ್ರಮಾಣಪತ್ರ ನೀಡುವವರೆಗೂ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಮ್ಮ ಸಮುದಾಯಕ್ಕೆ ಬೇಡ ಜಂಗಮ ಪ್ರಮಾಣಪತ್ರ ನೀಡುವವರೆಗೂ ಹೋರಾಟ ಮುಂದುವರಿಯಲಿದೆ'ಎಂದು ಅಖಿಲ ಕರ್ನಾಟಕ ಬೇಡಜಂಗಮರ ಸಂಘಟನೆಗಳ ಒಕ್ಕೂಟ ಎಚ್ಚರಿಸಿದೆ.

'ಬೇಡಿಕೆ ಈಡೇರಿಕೆಗೆ ಆಗ್ರಹಿಸಿ, ಕಳೆದ ಹನ್ನೊಂದು ದಿನಗಳಿಂದ ಅಹೋರಾತ್ರಿ ಧರಣಿ ನಡೆಯುತ್ತಿದೆ. ಆದರೆ, ಸರ್ಕಾರ ಸ್ಪಂದಿಸಿಲ್ಲ. ನಾವು ಬೇರೆಯವರ ಹಕ್ಕು ಕಿತ್ತುಕೊಳ್ಳುತ್ತಿಲ್ಲ. ಸರ್ಕಾರ ಇದೇ ರೀತಿ ಧೋರಣೆ ಮುಂದುವರಿಸಿದರೆ, ಹೋರಾಟ ಉಗ್ರ ಸ್ವರೂಪ ಪಡೆದುಕೊಳ್ಳಲಿದೆ' ಎಂದು ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸಂವಿಧಾನ ಬದ್ಧವಾಗಿ ಸಿಗಬೇಕಾದ ಹಕ್ಕನ್ನು ಕೇಳುತ್ತಿದೆ. ಬೇರೆ ಸಮುದಾಯಗಳ ಪಾಲು ಕೇಳುತ್ತಿಲ್ಲ. ಅದನ್ನು ನೀಡಬೇಕಾದ್ದು ಸರ್ಕಾರದ ಕರ್ತವ್ಯ. ಮುಂಬರುವ ದಿನಗಳಲ್ಲಿ ಕಾನೂನಾತ್ಮಕ ಹೋರಾಟವೂ ನಡೆಯಲಿದೆ' ಎಂದು ಹೇಳಿದರು.

'ನ್ಯಾಯ ಸಿಗುವವರೆಗೂ ಪ್ರಸ್ತುತ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ನಿರಂತರವಾಗಿ ನಡೆಯಲಿದೆ. ಸರ್ಕಾರದ ಸ್ಪಷ್ಟ ಭರವಸೆ ಸಿಗುವ ವರೆಗೂ ಜಾಗ ಬಿಟ್ಟು ಕದಲುವುದಿಲ್ಲ. ಸೋಮವಾರದಿಂದ ಪ್ರತಿ ಜಿಲ್ಲೆಯಿಂದ ಸರದಿಯಂತೆ ಸಮುದಾಯದ ಬಂಧುಗಳು ಈ ಸತ್ಯಾಗ್ರಹದಲ್ಲಿ ಕನಿಷ್ಠ 50ರಿಂದ 100 ಜನ ಭಾಗವಹಿಸಲಿದ್ದಾರೆ. ಹಂತ ಹಂತವಾಗಿ ಹೋರಾಟದ ಸ್ವರೂಪ ತೀವ್ರಗೊಳ್ಳಲಿದೆ' ಎಂದು ತಿಳಿಸಿದರು.

ನಗರದಲ್ಲಿ ಇಂದು


ಎಂ.ಪಿ. ಪ್ರಕಾಶ್

ಎಂ.ಪಿ. ಪ್ರಕಾಶ್ 82: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಗೌರವ ಉಪಸ್ಥಿತಿ: ರುದ್ರಾಂಬ ಎಂ.ಪಿ. ಪ್ರಕಾಶ್, ಮುಖ್ಯ ಅತಿಥಿಗಳು: ವಿ. ಸೋಮಣ್ಣ, ಅಮರೇಗೌಡ ಬಯ್ಯಾಪುರ, ಕೆ.ಎ. ತಿಪ್ಪೇಸ್ವಾಮಿ, ಕೆ.ವಿ. ನಾಗರಾಜಮೂರ್ತಿ, ಶ್ರೀನಿವಾಸ ಜಿ. ಕಪ್ಪಣ್ಣ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ವಿಶ್ವ ಜನಸಂಖ್ಯಾ ದಿನಾಚರಣೆ: ಉದ್ಘಾಟನೆ: ಡಾ.ಕೆ. ಸುಧಾಕರ್, ಅಧ್ಯಕ್ಷತೆ: ಜಮೀರ್ ಅಹಮದ್ ಖಾನ್, ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ತೇಜಸ್ವಿಸೂರ್ಯ, ಉದಯ್ ಗರುಡಾಚಾರ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಕೆ.ಆರ್. ರಸ್ತೆ, ಬೆಳಿಗ್ಗೆ 11

ಪುಷ್ಕರ ಸಂಗೀತ ಮತ್ತು ನೃತ್ಯ ಉತ್ಸವ: ಗೌರವ ಅತಿಥಿಗಳು: ಜಯಂತಿ ರಾಜಗೋಪಾಲ್, ಭರತನಾಟ್ಯ ಪ್ರಸ್ತುತಿ: ಸತ್ಯವತಿ ಕೆ.ಆರ್., ಶರ್ಮಿಳಾ ಮತ್ತು ತಂಡ, ಆಯೋಜನೆ: ಪುಷ್ಕರ ಕಲಾ ಕೇಂದ್ರ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 11

'ಪಥ್ಯ ಮರು ಪರಿಷ್ಕರಣೆ: ಒಂದು ಚಿಂತನೆ' ವಿಚಾರಗೋಷ್ಠಿ: 'ಪಥ್ಯ ಮರು ಪರಿಷ್ಕರಣೆ: ಹಿನ್ನೆಲೆ–ಮುನ್ನೆಲೆ' ಕೃತಿ ಬಿಡುಗಡೆ: ಎಲ್. ಹನುಮಂತಯ್ಯ, ರಾಜಪ್ಪ ದಳವಾಯಿ, ಕೆ. ಷರೀಫಾ, ಅಧ್ಯಕ್ಷತೆ: ನಾಗರಾಜ್ ಎನ್., ಪ್ರಸ್ತಾವನೆ: ಬಿ. ರಾಜಶೇಖರಮೂರ್ತಿ, ಆಯೋಜನೆ: ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ಸ್ಥಳ: ಕಸ್ತೂರ್ ಬಾ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4





ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಭಾನುವಾರ ಬಕ್ರೀದ್ ಹಬ್ಬದ ಪ್ರಯುಕ್ತ ಮುಸಲ್ಮಾನರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು (ಎಡಚಿತ್ರ), ಪುಟಾಣಿಗಳು ಪರಸ್ಪರ ಹಬ್ಬದ ಶುಭಾಶಯ ಕೋರಿದ ಕ್ಷಣ. –ಪ್ರಜಾವಾಣಿ ಚಿತ್ರಗಳು ರಂಜು ಪಿ.

ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಿದ್ದರಾಮಯ್ಯ ಭಾಗಿ


ನಗರದಲ್ಲಿ ಶ್ರದ್ಧಾ, ಭಕ್ತಿಯ ಬಕ್ರೀದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗ ಹಾಗೂ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮುಸ್ಲಿಮರು ನಗರದಲ್ಲಿ ಭಾನುವಾರ ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು.

ಮೋಡ ಕವಿದ ವಾತಾವರಣ, ತುಂತುರು ಮಳೆಯ ನಡುವೆ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಹಲವು ನಿರ್ಬಂಧಗಳನ್ನು ವಿಧಿಸಿದ್ದರಿಂದ ಸರಳವಾಗಿ ಆಚರಿಸಲಾಗಿತ್ತು.

ಈ ಬಾರಿ ಮಸೀದಿಗಳಿಗೆ ತೆರಳಿ ಪ್ರಾರ್ಥಿಸಿದ್ದು ಕಂಡುಬಂತು. ಹೊಸಬಟ್ಟೆ ತೊಟ್ಟು ಬಂದಿದ್ದ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಧರ್ಮ ಗುರುಗಳು ಸಂದೇಶ ನೀಡಿದರು.



ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಭಾನುವಾರ ಬಕ್ರೀದ್ ಪ್ರಯುಕ್ತ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಇದೇ ವೇಳೆ ಅಲ್ಲಾಹುವನ್ನು ಸ್ಮರಿಸಲಾಯಿತು. ಕಲಾಸಿಪಾಳ್ಯ, ಚಾಮರಾಜಪೇಟೆ, ಶಿವಾಜಿನಗರ, ಬಿಟಿಎಂ ಲೇಔಟ್, ಪಾದರಾಯನಪುರ,

ಎಲ್ಲರೂ ಪ್ರೀತಿ ಹಾಗೂ ವಿಶ್ವಾಸದಿಂದ ಬಾಳಬೇಕು. ದೇಶದಲ್ಲಿ ಶಾಂತಿ ಹಾಗೂ ಸೌಹಾರ್ದ ವಾತಾವರಣ ನೆಲೆಸುವಂತೆ ಪ್ರಾರ್ಥಿಸಿದ್ದೇನೆ

ಸಿದ್ದರಾಮಯ್ಯ,
ವಿಧಾನಸಭೆ ವಿರೋಧ ಪಕ್ಷದ ನಾಯಕ

ಹೆಬ್ಬಾಳ, ಆರ್.ಟಿ. ನಗರ, ಶಾಂತಿನಗರ, ಮೈಸೂರು ರಸ್ತೆ, ಜಯನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ ಮತ್ತು ಕಮ್ಮಗೊಂಡನಹಳ್ಳಿ ಸೇರಿದಂತೆ ನಗರದ ವಿವಿಧೆಡೆಯ ಪ್ರಮುಖ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು.

ಮಸೀದಿಗಳ ಎದುರು ಗುಲಾಬಿ ಹೂವಿನ ಮಾರಾಟದ ವ್ಯವಸ್ಥೆ ಇತ್ತು. ಪುಟ್ಟ ಮಕ್ಕಳು, ದೊಡ್ಡವರು ಹೊಸ ಬಟ್ಟೆ, ಟೋಪಿಯೊಂದಿಗೆ ಕಂಗೊಳಿಸಿದರು. ಮಕ್ಕಳು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಹಬ್ಬದ ಅಂಗವಾಗಿ ಮನೆಗಳಲ್ಲೂ ವಿಶೇಷ ಖಾದ್ಯ ತಯಾರಿಸಲಾಗಿತ್ತು.

ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾಗವಹಿಸಿ, ಮುಸ್ಲಿಮರಿಗೆ ಶುಭಾಶಯ ಕೋರಿದರು.

ಶಾಸಕ ಜಮೀರ್ ಅಹಮದ್ ಹಾಗೂ ಅವರ ಪುತ್ರ ಜಾಯೇದ್ ಖಾನ್ ಪಾಲ್ಗೊಂಡಿದ್ದರು.

ನಂತರ, ಸಿದ್ದರಾಮಯ್ಯ ಅವರು ಮಲೆಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥಿಸಿದರು. ಪಾಲಿಕೆ ಮಾಜಿ ಸದಸ್ಯ ಚಂದ್ರಶೇಖರ್ ಹಾಜರಿದ್ದರು. ನಗರದ ಪ್ರಮುಖ ಮಸೀದಿಗಳ ಬಳಿ ಭದ್ರತೆಗೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ಕೃತಿ ಬಿಡುಗಡೆ ಸಮಾರಂಭದಲ್ಲಿ ಪ್ರೊ.ಚೆನ್ನಿ ಆತಂಕ

ಹೆಚ್ಚಿದ ದ್ವೇಷ ವಾತಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸ್ತುತ ಸನ್ನಿವೇಶದಲ್ಲಿ ದ್ವೇಷಮಯ ವಾತಾವರಣವೇ ಹೆಚ್ಚಿದ್ದು, ವ್ಯವಸ್ಥೆಯನ್ನು ಪ್ರಶ್ನಿಸಲು ಸಾಧ್ಯವಾಗದ ಸ್ಥಿತಿ ಸೃಷ್ಟಿಯಾಗಿದೆ' ಎಂದು ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ ಹಾಗೂ ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಎನ್.ಗಾಯತ್ರಿ ಅವರ ಅನುವಾದಿತ 'ನಾ ಅಲೆಯ ಉಬ್ಬರವಾದೆ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ದಲಿತ ಸಮುದಾಯವನ್ನು ಅವಮಾನಿಸುವ ಹಾಗೂ ಪ್ರತಿಭೆಗಳಿಗೆ ಮನ್ನಣೆ ಸಿಗದಂತೆ ಮಾಡುವ ವ್ಯವಸ್ಥಿತ ಹುನ್ನಾರಗಳು ನಡೆಯುತ್ತಿವೆ. ದಲಿತ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪ್ರವೇಶಿಸಿದ್ದರೆ ಅಲ್ಲಿಯೂ ಅವಮಾನ ಮಾಡಲಾಗುತ್ತಿದೆ. ದಲಿತ ಅಸ್ತಿತ್ವವನ್ನು ಒಪ್ಪುತ್ತಿಲ್ಲ. ಈ ಕಾದಂಬರಿಯು ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡಿದೆ' ಎಂದರು.

'ಪ್ರಶ್ನಿಸುವವರನ್ನೇ ಮುಗಿಸುವ ಕೆಲಸ ವ್ಯವಸ್ಥಿತವಾಗಿ ಸಾಗುತ್ತಿದೆ. ಇದು ಕೀಳು ರಾಜಕಾರಣ. ಈ ದುರಿತ ಕಾಲವನ್ನು ಕಾದಂಬರಿಯು ಎಚ್ಚರಿಸುತ್ತಿದೆ. ನಮ್ಮ ಭಾವನೆಗಳು ಒಣಗುತ್ತಿವೆ.



ಸಮಾರಂಭದಲ್ಲಿ ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ಅವರು (ಎಡದಿಂದ ಎರಡನೆಯವರು) ಲೇಖಕಿ ಡಾ.ಎನ್.ಗಾಯತ್ರಿ ಅನುವಾದಿಸಿರುವ 'ನಾ ಅಲೆಯ ಉಬ್ಬರವಾದೆ' ಕೃತಿ ಲೋಕಾರ್ಪಣೆ ಮಾಡಿ ಪ್ರತಿಯನ್ನು ಗೀತಾ ಹರಿಹರನ್ ಅವರಿಗೆ ನೀಡಿದರು. (ಎಡದಿಂದ) ಡಾ.ದು. ಸರಸ್ವತಿ, ಡಾ.ಸಿದ್ದನಗೌಡ ಪಾಟೀಲ್ ಇದ್ದರು

ಪ್ರತಿಭಟಿಸುವ ಮತ್ತು ಪ್ರತಿರೋಧ ವ್ಯಕ್ತಪಡಿಸುವ ಗುಣವನ್ನು ಕಳೆದುಕೊಂಡಿದ್ದೇವೆ' ಎಂದು ಹೇಳಿದರು.

ಲೇಖಕಿ ಡಾ.ದು.ಸರಸ್ವತಿ ಮಾತನಾಡಿ, 'ಜಾತಿ ದೌರ್ಜನ್ಯ ಮತ್ತು ತಾರತಮ್ಯ ಹೆಚ್ಚಿರುವ ಕಾಲದಲ್ಲಿ ಕೃತಿಯೊಂದು ಸೃಜನಾತ್ಮಕವಾಗಿ ಮೂಡಿಬಂದಿದೆ. ಹಿಂದಿನ ದಿನಗಳಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯಿತ್ತು. ನಗರೀಕರಣದಿಂದ ಇಂದು ಆಧುನಿಕ ಶೈಲಿಯಲ್ಲಿ ಜೀವಂತವಾಗಿದೆ' ಎಂದು ವಿಷಾದಿಸಿದರು.

ಲೇಖಕಿ ಗೀತಾ ಹರಿಹರನ್ ಮಾತನಾಡಿ, 'ಕರ್ನಾಟಕವು ಉತ್ತರ ಪ್ರದೇಶ, ಬಿಹಾರದಂತೆ ಆಗದಿರಲಿ. ಅಸಮಾನತೆ ಹೆಚ್ಚಿದ್ದು ಸಾಂಸ್ಕೃತಿಕ ಕ್ಷೇತ್ರದವರು ಹಾಗೂ ಬರಹಗಾರರು ಒಂದಾಗಿ ಹೋರಾಟ ನಡೆಸಬೇಕು' ಎಂದು ಸಲಹೆ ನೀಡಿದರು.

ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಡಾ.ಬಿ.ಆರ್. ಮಂಜುನಾಥ್ ಮಾತನಾಡಿ, 'ಎಲ್ಲರೂ ವಿಷಮ ಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ. ಲೇಖಕರು ಪ್ರತಿಭಟಿಸಬೇಕಿತ್ತು. ಕೆಲವರು ಮೌನವಾಗಿಯೇ ವ್ಯವಸ್ಥೆಗೆ ಒಗ್ಗಿಕೊಂಡಿದ್ದಾರೆ' ಎಂದರು.

'ಹೊಸತು' ಪತ್ರಿಕೆ ಸಂಪಾದಕ ಡಾ.ಸಿದ್ದನಗೌಡ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಎನ್.ಗಾಯತ್ರಿ ಹಾಜರಿದ್ದರು.


ಇಸ್ಕಾನ್‌ನಲ್ಲಿ 'ಸಿಂಗ್, ಡಾನ್ಸ್ ಆ್ಯಂಡ್ ಪ್ರೇ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕ ಡಾ.ಹಿಂಡೋಲ್ ಸೇನ್ ಗುಪ್ತಾ ಅವರು ಇಸ್ಕಾನ್‌ನ ಶ್ರೀಲ ಪ್ರಭುಪಾದರ ಕುರಿತು ಬರೆದಿರುವ 'ಸಿಂಗ್, ಡಾನ್ಸ್ ಆ್ಯಂಡ್ ಪ್ರೇ' ಕೃತಿಯನ್ನು ಭಾನುವಾರ ಇಸ್ಕಾನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಮಾತನಾಡಿ, 'ಸನ್ಯಾಸಿಯೊಬ್ಬರ ಕಷ್ಟ ಹಾಗೂ ಅವರ ಯಶಸ್ಸಿನ ಕುರಿತು ಹಿಂಡೋಲ್ ಅವರು ಬರೆದಿದ್ದಾರೆ. ಪುಸ್ತಕ ಓದಿದಾಗ ಶ್ರೀಲ ಪ್ರಭುಪಾದರು ಒಬ್ಬ ವ್ಯಕ್ತಿಯಾಗಿ ಯಾರು ಎಂದು ಸ್ಪಷ್ಟವಾಯಿತು' ಎಂದರು.

ಖ್ಯಾತ ಸಂಗೀತ ನಿರ್ದೇಶಕ ರಿಕಿ ಕೇಜ್ ಮಾತನಾಡಿ, ಶ್ರೀಲ ಪ್ರಭುಪಾದರು ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ



ಇಸ್ಕಾನ್‌ನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಸಿಂಗ್ ಡಾನ್ಸ್ ಅಂಡ್ ಪ್ರೇ' ಕೃತಿ ಬಿಡುಗಡೆ ಮಾಡಲಾಯಿತು. ಚಂಚಲಪತಿ ದಾಸ, ಮಿಲೀ ಐಶ್ವರ್ಯಾ, ಸುಧಾ ಮೂರ್ತಿ, ಮಧು ಪಂಡಿತ್ ದಾಸ, ಡಾ.ಹಿಂಡೋಲ್ ಸೇನ್ ಗುಪ್ತಾ, ರಿಕಿ ಕೇಜ್ ಹಾಜರಿದ್ದರು

ರಾಯಭಾರಿ ಆಗಿದ್ದರು. ಭಾರತೀಯ ಸಂಸ್ಕೃತಿಯನ್ನು ಮುಖ್ಯವಾಹಿನಿಗೆ ತಂದವರು ಅವರು ಎಂದರು.

ಲೇಖಕ ಡಾ.ಹಿಂಡೋಲ್ ಸೇನ್ ಗುಪ್ತಾ ಮಾತನಾಡಿ, ಪ್ರಭುಪಾದರದ್ದು ಶ್ರೇಷ್ಠ ವ್ಯಕ್ತಿತ್ವ ಎಂದು ಹೇಳಿದರು.

ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಇಸ್ಕಾನ್ ಅಕ್ಷಯ ಪಾತ್ರದ ಅಧ್ಯಕ್ಷ ಮಧು ಪಂಡಿತ ದಾಸ್, ಉಪಾಧ್ಯಕ್ಷ ಚಂಚಲಪತಿ ದಾಸ ಹಾಜರಿದ್ದರು.



ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಭಾನುವಾರ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಪಾದಯಾತ್ರೆ ನಡೆಸಿ ಜನರ ಸಮಸ್ಯೆ ಆಲಿಸಿದರು

ಮಲ್ಲೇಶ್ವರದಲ್ಲಿ ಸಚಿವರ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಕ್ಷೇತ್ರದ ಗಾಯತ್ರಿನಗರ, ಹೊಂಬೇಗೌಡ ಕಾಲೇಜು, ಎಂಕೆಕೆ ರಸ್ತೆ ಸೇರಿದಂತೆ ವಿವಿಧೆಡೆಗಳಲ್ಲಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಪಾದಯಾತ್ರೆ ನಡೆಸಿ ಕುಂದುಕೊರತೆ ಆಲಿಸಿದರು.

ರಸ್ತೆ ವ್ಯವಸ್ಥೆ, ಕುಡಿಯುವ ನೀರಿನ ಪೂರೈಕೆ, ಬೀದಿ ದೀಪ ಸೌಕರ್ಯ, ಮಕ್ಕಳ ಶಾಲೆ ವ್ಯವಸ್ಥೆ ಬಗ್ಗೆ ಕೇಳಿ ಮಾಹಿತಿ ಪಡೆದುಕೊಂಡರು.

'ಜಲಮಂಡಳಿ ಕೊಳವೆಗಳನ್ನು ಬದಲಾಯಿಸಿ ನೀರು ಸೋರಿಕೆ ತಡೆಯಲು ಕಾಮಗಾರಿ ನಡೆಯುತ್ತಿದೆ. ಜತೆಗೆ, ಬಡಾವಣೆಯ ಎಲ್ಲ ಮನೆಗಳಿಗೂ ಕಾವೇರಿ ನೀರನ್ನು ಒದಗಿಸಲು ಇದರಿಂದ ಸಾಧ್ಯವಾಗುತ್ತದೆ. ಈ ಕೆಲಸ ಆದಷ್ಟು ಬೇಗ ಮುಗಿಯಲಿದ್ದು ಕೊಳವೆ ಬಾವಿ ನೀರಿನ ಅವಲಂಬನೆ ತಪ್ಪಿಸುತ್ತದೆ' ಎಂದು ಸಚಿವರು ತಿಳಿಸಿದರು.

'ಕ್ಷೇತ್ರದಲ್ಲಿ ಮುಂದಿನ 30 ವರ್ಷಗಳನ್ನು ಗಮನದಲ್ಲಿರಿಸಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಶಿಥಿಲ ಮ್ಯಾನ್ ಹೋಲ್ ಬದಲಾವಣೆಯನ್ನೂ ಕೈಗೊಳ್ಳಲಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗುವಂತೆ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಒತ್ತು ಕೊಡಲಾಗಿದೆ' ಎಂದು ಹೇಳಿದರು.

'ಅಗೆದಿದ್ದ ಕೆಲವು ರಸ್ತೆಗಳನ್ನು ಅಭಿವೃದ್ಧಿಪಡಿಸಿ ಈಗಾಗಲೇ ಓಡಾಟಕ್ಕೆ ಮುಕ್ತಗೊಳಿಸಲಾಗಿದೆ. ಇನ್ನು ಕೆಲವೆಡೆ ಕಾಮಗಾರಿಗಳು ನಡೆಯುತ್ತಿದ್ದು, ಅಲ್ಲಲ್ಲ ಶೀಘ್ರವೇ ಕೆಲಸ ಮುಗಿಸಿ ಡಾಂಬರೀಕರಣ ಮಾಡಲಾಗುತ್ತಿದೆ' ಎಂದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ರಸ್ತೆಗೆ ಡಾಂಬರು ಹಾಕಿ'

ಬನಶಂಕರಿ 3ನೇ ಹಂತದ ಇಟ್ಟಮಡುವಿನ ಕೆಇಬಿ ರಸ್ತೆ ಸಂಪೂರ್ಣ ಹಾಳಾಗಿದ್ದು, ಗುಂಡಿಗಳ ಕೂಪವಾಗಿದೆ. ಮಳೆ ಬಂದರೆ ಈ ರಸ್ತೆಯ ಬದಿಗಳಲ್ಲಿ ನೀರು ಸರಾಗವಾಗಿ ಹರಿಯುವುದಿಲ್ಲ. ಕೆಲ ತಿಂಗಳ ಹಿಂದೆ ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಸಂಬಂಧ ಸುಸ್ಥಿತಿಯಲ್ಲಿದ್ದ ಡಾಂಬರ್ ರಸ್ತೆಯನ್ನು ಅಗೆದು, ಮುಚ್ಚಲಾಗಿದೆ. ರಸ್ತೆಗೆ ಮೊದಲು ಹಾಕಲಾಗಿದ್ದ ಡಾಂಬರು ಈಗ ಕಿತ್ತುಹೋಗಿದೆ. ಇದರಿಂದ ಕಿರಿದಾದ ರಸ್ತೆಯುದ್ದಕ್ಕೂ ದೊಡ್ಡ ಗುಂಡಿಗಳು ಬಿದ್ದು, ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಆದಷ್ಟು ಬೇಗ ಗುಂಡಿಗಳನ್ನು ಮುಚ್ಚಿ, ರಸ್ತೆ ಅಗೆದ ಜಾಗಗಳಲ್ಲಿ ಡಾಂಬರು ಹಾಕಬೇಕು.

ನಾಗೇಂದ್ರ, ಇಟ್ಟಮಡು



ಇಟ್ಟಮಡುವಿನ ಕೆಇಬಿ ರಸ್ತೆ



ಸಂಪಂಗಿರಾಮನಗರದ 4ನೇ ಮುಖ್ಯ ರಸ್ತೆಯಲ್ಲಿ ಚರಂಡಿ ತ್ಯಾಜ್ಯ ಹಾಕಿರುವುದು

'ತ್ಯಾಜ್ಯ ವಿಲೇವಾರಿ ಮಾಡಿ'

ನಗರದ ಹೃದಯ ಭಾಗದಲ್ಲಿರುವ ಸಂಪಂಗಿ ರಾಮನಗರದ 4ನೇ ಮುಖ್ಯ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ಚರಂಡಿಯನ್ನು ಸ್ವಚ್ಛಗೊಳಿಸಲಾಗಿದೆ. ಆದರೆ, ಮುಖ್ಯರಸ್ತೆಯಲ್ಲೇ ತ್ಯಾಜ್ಯವನ್ನು ಬಿಟ್ಟು ಹೋಗಿದ್ದರಿಂದ ಪಾದಚಾರಿಗಳು ಮತ್ತು ವಾಹನ ಸವಾರರು ಸಮಸ್ಯೆ ಎದುರಿಸುತ್ತಿದ್ದಾರೆ. ಕೆಲ ದಿನಗಳಿಂದ ಮಳೆ ಸುರಿಯುತ್ತಿರುವುದರಿಂದ ತ್ಯಾಜ್ಯ ನೀರು ರಸ್ತೆಯನ್ನು ಆವರಿಸಿಕೊಳ್ಳುತ್ತಿದೆ. ಶಾಲಾ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ವಾಹನ ಸವಾರರು, ಪ್ರತಿನಿತ್ಯವೂ ಕಸ, ಕೊಳಕು ಹಾಗೂ ಕೊಳಚೆ ನೀರಿನ ದುರ್ನಾತದ ಜೊತೆಗೆ ಸಂಚರಿಸುವುದು ಅನಿವಾರ್ಯವಾಗಿದೆ. ಸಾಂಕ್ರಾಮಿಕ ರೋಗ ಹರಡುವ ಆತಂಕವೂ ಎದುರಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ತ್ಯಾಜ್ಯ ವಿಲೇವಾರಿ ಮಾಡಿ, ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ಸಿ.ಗಣೇಶ್ ಬಾಬು, ಸ್ಥಳೀಯ ನಿವಾಸಿ



ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದ 6ನೇ ಅಡ್ಡರಸ್ತೆಯಲ್ಲಿ ನೀರು ನಿಂತಿರುವುದು

'ಮನೆಗಳಿಗೆ ನುಗ್ಗುತ್ತಿದೆ ನೀರು'

ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿ ನಗರದ 6ನೇ ಅಡ್ಡರಸ್ತೆಯು ಮಳೆ ಬಂದರೆ ಹೊಳೆಯಾಗುತ್ತದೆ. ಚರಂಡಿಗಳಲ್ಲಿನ ನೀರು ಮನೆಗಳಿಗೆ ನುಗ್ಗುತ್ತದೆ. ಸಂಬಂಧಪಟ್ಟವರ ಗಮನಕ್ಕೆ ತಂದರೂ ಪರಿಸ್ಥಿತಿ ಬದಲಾಗಲಿಲ್ಲ. ಮಳೆಗಾಲದಲ್ಲಿ ಇಲ್ಲಿನ ನಿವಾಸಿಗಳು ನರಕಯಾತನೆ ಅನುಭವಿಸಬೇಕಾಗಿದೆ. ವಾಹನ ಸಂಚಾರವು ದುಸ್ತರವಾಗಿದೆ. ಕಸ ತ್ಯಾಜ್ಯವೂ ನೀರಿನಲ್ಲಿ ತೇಲಿ ಬಂದು, ಮನೆ ಸೇರುತ್ತಿದೆ. ಕೆಲವು ವೇಳೆ ಮನೆಯಿಂದ ಹೊರಬರದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಲ್ಲುವುದರಿಂದ ವಾಹನ ಸವಾರರು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ನಿವಾರಿಸಲು ಕ್ರಮವಹಿಸಬೇಕು.

ಹಿಮಾಂಶು ಕುಮಾರ್, ಎಲೆಕ್ಟ್ರಾನಿಕ್ ಸಿಟಿ

'ಗುಂಡಿ ಬಿದ್ದ ರಸ್ತೆ'



ಪೀಣ್ಯ ಪೊಲೀಸ್ ಠಾಣೆಯ ಪಕ್ಕದ ಮುಖ್ಯರಸ್ತೆಯಲ್ಲಿ ಹಲವು ಗುಂಡಿಗಳು ಬಿದ್ದಿವೆ. ವಾಹನ ಸವಾರರ ರಕ್ಷಣೆಗಾಗಿ ಗುಂಡಿಗಳಲ್ಲಿ ಗಿಡಗಳನ್ನು ಇರಿಸಲಾಗಿದೆ. ಗುಂಡಿಮಯ ರಸ್ತೆಗಳಿಂದ ವಾಹನ ಸವಾರರಿಗೆ ವಿಪರೀತ ತೊಂದರೆಯಾಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ. ಚಾಲಕರು ಗುಂಡಿಗಳನ್ನು ತಪ್ಪಿಸಲು ಅಡ್ಡಾದಿಡ್ಡಿಯಾಗಿ ವಾಹನ ಚಲಾಯಿಸುವುದರಿಂದ ವೃದ್ಧರು, ಮಕ್ಕಳು ಈ ರಸ್ತೆಯ ಮೂಲಕ ಓಡಾಡುವುದು ಕಷ್ಟ. ಮಳೆ ಬಂದರೆ ಗುಂಡಿಗಳು ನೀರಿನಿಂದ ಆವೃತವಾಗಿ, ಜೀವಕ್ಕೆ ಕುತ್ತು ತರಲಿವೆ. ಸಂಬಂಧಪಟ್ಟವರು ಕೂಡಲೇ ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಪೀಣ್ಯ ನಿವಾಸಿಗಳು


ರಾಜ್ಯದಲ್ಲಿ ಮಳೆ ಅಬ್ಬರ




ಮಂಡ್ಯ ಜಿಲ್ಲೆಯ ಗಗನಚುಕ್ಕಿ ಜಲಪಾತದ ವೈಭವ



ಕೊಡಗು ಜಿಲ್ಲೆ ಅಬ್ಬಿ ಜಲಪಾತ ವೀಕ್ಷಣೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. –ಪ್ರಜಾವಾಣಿ ಚಿತ್ರ/ರಂಗಸ್ವಾಮಿ



ಚಿಕ್ಕಮಗಳೂರು ತಾಲ್ಲೂಕಿನ ಹೊನ್ನಮ್ಮನ ಹಳ್ಳದ ಜಲ ಸೊಬಗು



ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದ ನೋಟ

ತುಂಗಾ, ಹೇಮಾವತಿ ಜಲಾಶಯ ಭರ್ತಿ • ಕೆಆರ್‌ಎಸ್ ಭರ್ತಿಗೆ ಒಂದು ಅಡಿಯಷ್ಟೇ ಬಾಕಿ

ಸತತ ಮಳೆ, ಭೋರ್ಗರೆವ ಜಲಪಾತಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆಯ ಬಿರುಸು ಮುಂದುವರಿದಿದ್ದು, ಜಲಾಶಯಗಳಿಗೆ ಒಳಹರಿವು ಗಣನೀಯವಾಗಿ ಹೆಚ್ಚುತ್ತಿದೆ. ನದಿಗೆ ಹೆಚ್ಚಿನ ನೀರು ಹರಿಸಲಾಗುತ್ತಿದ್ದು, ವಿವಿಧ ಜಲಪಾತಗಳು ಮೈದುಂಬಿದ್ದು, ಜೀವಕಳೆ ಪಡೆದುಕೊಂಡಿವೆ.

ಮಂಡ್ಯ ವರದಿ: ಜಿಲ್ಲೆಯ ಕೆಆರ್‌ಎಸ್ ಜಲಾಶಯದಿಂದ ಭಾನುವಾರ ಸಂಜೆ 26,143 ಕ್ಯುಸೆಕ್ ನೀರು ಹೊರಬಿಡಲಾಗಿದೆ. ನದಿ ಪಾತ್ರದ ಜನರಿಗೆ ಸುರಕ್ಷಿತ ಪ್ರದೇಶಕ್ಕೆ ತೆರಳಲು ಸೂಚಿಸಲಾಗಿದೆ.

ಜಲಾಶಯದ ನೀರಿನ ಮಟ್ಟ ಸಂಜೆ ವೇಳೆಗೆ 123 ಅಡಿ ಗಡಿ ದಾಟಿದ್ದು, ಭರ್ತಿಗೆ ಒಂದು ಅಡಿಯಷ್ಟೇ ಬಾಕಿ ಇದೆ. 26 ಸಾವಿನ ಕ್ಯುಸೆಕ್ ನೀರು ಬಿಡಲಾಗುತ್ತಿದೆ. ಜಿಲ್ಲೆಯ ಗಗನಚುಕ್ಕಿ ಜಲಪಾತದಲ್ಲಿ ನೀರು ಭೋರ್ಗರೆಯುತ್ತಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದಲ್ಲಿ ಮುಂಜಾಗ್ರತೆಯಾಗಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ನದಿಯಲ್ಲಿ ನೀರಿನ ಮಟ್ಟ ಇಳಿಯುವವರೆಗೆ ದೋಣಿ ವಿಹಾರ ಇರುವುದಿಲ್ಲ. ಪಕ್ಷಿಗಳು ಸುರಕ್ಷಿತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಆರ್‌ಎಸ್ ಮತ್ತು ಕಬಿನಿ ಎರಡು ಜಲಾಶಯದಿಂದ ನೀರು ಹರಿಸಲಾಗಿದೆ. ಗಗನಚುಕ್ಕಿಯಲ್ಲಿ 419 ಅಡಿ ಆಳದ ಪ್ರಪಾತಕ್ಕೆ ಧುಮ್ಮಿಕ್ಕುತ್ತಿದ್ದ ಜಲ ವೈಭವ ವೀಕ್ಷಣೆಗೆ ಬೆಂಗಳೂರು, ಮೈಸೂರು, ಚಾಮರಾಜನಗರ, ರಾಮನಗರ ಕಡೆಯಿಂದ ಪ್ರವಾಸಿಗರ ಭೇಟಿ ಹೆಚ್ಚುತ್ತಿದೆ.

ಶಿವಮೊಗ್ಗ ವರದಿ: ಮಲೆನಾಡಿನಲ್ಲಿ ತುಂಗಾ, ಭದ್ರಾ, ಶರಾವತಿ, ಕುಮದ್ವತಿ ನದಿಗಳು ಭೋರ್ಗರೆಯುತ್ತಿವೆ. ಲಕ್ಕವಳ್ಳಿಯ ಭದ್ರಾ ಜಲಾಶಯದಲ್ಲಿ ಭಾನುವಾರ ನೀರಿನ ಮಟ್ಟ 171.3 ಅಡಿಗೆ (ಗರಿಷ್ಠ ಮಟ್ಟ 186 ಅಡಿ) ಏರಿದೆ.

ಲಿಂಗನಮಕ್ಕಿ ಜಲಾಶಯಕ್ಕೆ ಒಳಹರಿವು ಇಳಿಕೆಯಾಗಿದ್ದು, ಜಲಾಶಯ ಭರ್ತಿಗೆ ಇನ್ನೂ 43.65 ಅಡಿ ನೀರು ಬರಬೇಕಿದೆ.

ಗಾಜನೂರಿನಲ್ಲಿರುವ ತುಂಗಾ ಜಲಾಶಯ ಭರ್ತಿಯಾಗಿದೆ. 51,386 ಕ್ಯುಸೆಕ್ ನೀರು ನದಿಗೆ ಹರಿಸಲಾಗಿದೆ. ಮಾಣಿ ಜಲಾಶಯಕ್ಕೆ 7,366 ಕ್ಯುಸೆಕ್ ನೀರು ಹರಿದುಬರುತ್ತಿದೆ. ಭರ್ತಿಗೆ 17.30 ಅಡಿ ನೀರು ಅಗತ್ಯವಿದೆ.

ಹೇಮಾವತಿ ಜಲಾಶಯ ಭರ್ತಿ

ಹಾಸನ ವರದಿ: ತಾಲ್ಲೂಕಿನ ಗೊರೂರು ಬಳಿಯ ಹೇಮಾವತಿ ಜಲಾಶಯದಿಂದ 29ಸಾವಿರ ಕ್ಯುಸೆಕ್ ಹಾಗೂ ಆಲೂರು ತಾಲ್ಲೂಕಿನ ವಾಟೆಹೊಳೆ ಜಲಾಶಯದಿಂದ 360 ಕ್ಯುಸೆಕ್ ನೀರನ್ನು ಹೊರಗೆ ಬಿಡಲಾಗಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಮಳೆ ಅಬ್ಬರ ಹೆಚ್ಚಾಗಿದ್ದು, ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಶನಿವಾರ ಲಾರಿ ಮೇಲೆ ಮರ ಬಿದಿದೆ. ಕೊಣನೂರು ಸಮೀಪದ ಹಿರೇಹಳ್ಳಿಯಲ್ಲಿ 3 ಮನೆಗಳ ಗೋಡೆ ಕುಸಿದು ಬಿದ್ದಿದ್ದು, ಗೋಡೆಗಳ ಅಡಿಯಲ್ಲಿ ಸಿಲುಕಿ ಹಸುವೊಂದು ಮೃತಪಟ್ಟಿದೆ. ಅರಕಲಗೂಡಿನಲ್ಲಿ 2 ಮನೆಗಳು ಕುಸಿದಿವೆ.

ಅಪಾಯದ ಮಟ್ಟ ತಲುಪಿದ ನೇತ್ರಾವತಿ: ಮಂಗಳೂರು ವರದಿ: ಬಂಟ್ವಾಳದ ಸಮೀಪ ನೇತ್ರಾನತಿ ನದಿ ಈ ಮುಂಗಾರಿನಲ್ಲಿ ಮೊದಲ ಬಾರಿಗೆ ಭಾನುವಾರ ಅಪಾಯದ ಮಟ್ಟ (8.6 ಮೀ.) ತಲುಪಿದೆ. ನೇತ್ರಾವತಿಯಲ್ಲಿ ನೀರು ಹರಿವಿನ ಮಟ್ಟ 9 ಮೀ. ಮೀರಿದೆ. ಅಜಿಲಮೊಗರು ಜುಮ್ಮಾ ಮಸೀದಿ ಬಳಿ ನದಿ ನೀರು ಉಕ್ಕಿ ಹರಿದಿದ್ದು, ರಸ್ತೆ ಜಲಾವೃತಗೊಂಡಿತ್ತು. ಸುಳ್ಯ ತಾಲ್ಲೂಕಿನ ಸುಬ್ರಹ್ಮಣ್ಯ ಹಾಗೂ ಕುಮಾರ ಪರ್ವತದ ಸುತ್ತ ಭಾರಿ ಮಳೆಯಾಗಿದ್ದರಿಂದ ಕುಮಾರಧಾರಾ ನದಿ ತುಂಬಿ ಹರಿಯುತ್ತಿದೆ.

14ರವರೆಗೆ 'ರೆಡ್ ಅಲರ್ಟ್'

ಕಾರವಾರ: ಭಾರಿ ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜುಲೈ 14ರವರೆಗೆ ಸಾಧ್ಯತೆಯಿದೆ. ನಾಲ್ಕು ದಿನ 'ರೆಡ್ ಅಲರ್ಟ್' ಘೋಷಿಸಲಾಗಿದೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚೆಂಬು: ಮತ್ತೆ ಭೂಕಂಪನ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆಯ ನಡುವೆ ಭಾನುವಾರ ಬೆಳಿಗ್ಗೆ ಮತ್ತೆ ಭೂಮಿ ಕಂಪಿಸಿದೆ.

ಬೆಳಿಗ್ಗೆ 6.22ಕ್ಕೆ ಇಲ್ಲಿನ ಚೆಂಬು ಗ್ರಾಮದಲ್ಲಿ ಭೂಮಿಯಿಂದ ಭಾರಿ ಪ್ರಮಾಣದ ಶಬ್ದ ಕೇಳಿ ಬಂದಿದೆ. ಅದರ ಹಿಂದೆಯೇ ಭೂಮಿ ಕಂಪಿಸಿದೆ. ಇದು ಗ್ರಾಮಸ್ಥರಲ್ಲಿ ಆತಂಕ ಹೆಚ್ಚಿಸಿದೆ.

'1.8 ತೀವ್ರತೆಯ ಭೂಕಂಪನ ಸಂಭವಿಸಿದ್ದು, ಅದರ ಕೇಂದ್ರ ಬಿಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಅರಂತೋಡು ಗ್ರಾಮದಲ್ಲಿ ಪತ್ತೆಯಾಗಿದೆ' ಎಂದು ರಾಜ್ಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರ ತಿಳಿಸಿದೆ.

ಅಪಾಯದ ಸ್ಥಳದಲ್ಲಿ ನಿರ್ಬಂಧ

ಗೋಕಾಕ (ಬೆಳಗಾವಿ ಜಿಲ್ಲೆ): ರುದ್ರ ರಮಣೀಯವಾಗಿ ಧುಮ್ಮಿಕ್ಕುತ್ತಿರುವ ಗೋಕಾಕ ಜಲಪಾತ ಕಣ್ತುಂಬಿಕೊಳ್ಳಲು ಪ್ರವಾಸಿಗರ ದಂಡೇ ಬರುತ್ತಿದೆ. ಸುರಕ್ಷೆಗಾಗಿ ಪೊಲೀಸರು ಅಪಾಯಕಾರಿ ಸ್ಥಳಗಳಲ್ಲಿ ಪ್ರವೇಶ ನಿರ್ಬಂಧಿಸಿದ್ದಾರೆ.

180 ಅಡಿ ಎತ್ತರದಿಂದ ನೀರು ಧುಮ್ಮಿಕ್ಕುತ್ತಿದೆ. ಕೆಲವು ಯುವಜನರು ಅಪಾಯ ಲೆಕ್ಕಿಸದೆ ಸೆಲ್ಫಿ, ಫೋಟೊಗಾಗಿ ಜಲಪಾತದ ಅಂಚಿನಲ್ಲಿ ನಿಲ್ಲುವುದು, ಬೃಹತ್ ಬಂಡೆಗಳ ಕಂದರಕ್ಕೆ ಇಳಿದು ನೀರಿನ ಫೋಟೊ ತೆಗೆಯುವ ಸಾಹಸ ಮಾಡುತ್ತಿದ್ದರು.

ಈ ಬಗ್ಗೆ 'ಪ್ರಜಾವಾಣಿ' ವೆಬ್‌ಸೈಟ್‌ನಲ್ಲಿ ಸುದ್ದಿ, ಚಿತ್ರ ಹಾಗೂ ವಿಡಿಯೊ ಪ್ರಸಾರ ಮಾಡುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ಸ್ಥಳಕ್ಕೆ ಧಾವಿಸಿದರು.

ಜಲಪಾತದ ತುದಿಗೆ ಹೋಗಿದ್ದ ಹಾಗೂ ನೀರಿಗೆ ಇಳಿದು ಚೆಲ್ಲಾಟ ಮಾಡುತ್ತಿದ್ದವರನ್ನು ಸ್ಥಳದಿಂದ ಓಡಿಸಿದರು. ಅಪಾಯಕಾರಿಯಾದ ಮಾರ್ಗಗಳಲ್ಲಿ ಬ್ಯಾರಿಕೇಡ್ ಇಟ್ಟು, ಹಗ್ಗ ಕಟ್ಟಿ ಪ್ರವೇಶ ನಿರ್ಬಂಧಿಸಿದರು.

ಕಳೆದ ಅಕ್ಟೋಬರ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳಲು ಹೋಗಿದ್ದ ಯುವಕನೊಬ್ಬ ಬಂಡೆಗಳ ಮಧ್ಯದ ಕಂದಕಕ್ಕೆ ಬಿದ್ದಿದ್ದ. ಆತನನ್ನು ರಕ್ಷಿಸಲು ತಾಲ್ಲೂಕು ಆಡಳಿತ ಹರಸಾಹಸ ಪಟ್ಟಿತ್ತು. ಎರಡು ವರ್ಷಗಳ ಹಿಂದೆ ಇಬ್ಬರು ಪ್ರವಾಸಿಗರು ಪ್ರಾಣ ಕಳೆದುಕೊಂಡಿದ್ದರು.



ಗೋಕಾಕ ಜಲಪಾತದ ಅಪಾಯಕಾರಿ ಸ್ಥಳದಲ್ಲಿ ಫೋಟೊ ತೆಗೆಯುತ್ತಿರುವುದು

ಮಳೆ: ಎಲ್ಲಿ, ಏನಾಯಿತು?

ಕಲಬುರಗಿ, ಬೀದರ್: ಮನೆ ಕುಸಿತ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ವಿವಿಧೆಡೆ ಮಳೆ ಮುಂದುವರಿದಿದ್ದು, ಹಲವು ಮನೆಗಳು ಕುಸಿದಿವೆ. ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಶಾಲಾ, ಕಾಲೇಜುಗಳಿಗೆ 11ರಂದು ರಜೆ ಘೋಷಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿ 24 ಗಂಟೆ ಅವಧಿಯಲ್ಲಿ ಸರಾಸರಿ 32.7 ಮಿ.ಮೀ. ಮಳೆಯಾಗಿದೆ. ಕಮಠಾಣಾ ಹೋಬಳಿಯಲ್ಲಿ ಅತಿ ಹೆಚ್ಚು 74 ಮಿ.ಮೀ ಮಳೆಯಾಗಿದೆ. ಮಳೆಗೆ 21 ಮನೆಗಳು ಭಾಗಶಃ ಕುಸಿದಿವೆ. ಔರಾದ್, ಭಾಲ್ಕಿ ತಾಲ್ಲೂಕಿನಲ್ಲಿ ತಲಾ ನಾಲ್ಕು, ಬೀದರ್, ಹುಮನಾಬಾದ್ ಹಾಗೂ ಚಿಟಗುಪ್ಪ ತಾಲ್ಲೂಕಿನಲ್ಲಿ ತಲಾ ಮೂರು ಬಸವಕಲ್ಯಾಣ, ಕಮಲನಗರದಲ್ಲಿ ತಲಾ ಎರಡು ಮನೆಗಳು ಭಾಗಶಃ ಕುಸಿದಿವೆ.

ಮಳೆ ಆರ್ಭಟ: ಮಲೆನಾಡು ತತ್ತರ

ಶಿವಮೊಗ್ಗ: ಜಿಲ್ಲೆಯಲ್ಲಿ ಭಾನುವಾರ ಮಳೆಯ ಆರ್ಭಟ ಮುಂದುವರೆದಿದ್ದು, ಆಗುಂಬೆಯಲ್ಲಿ ರಾಷ್ಟ್ರೀಯ ಹೆದ್ದಾರಿ– 169 'ಎ' ಮೇಲೆ ಗುಡ್ಡ ಕುಸಿದ ಪರಿಣಾಮ ಮಲೆನಾಡು– ಕರಾವಳಿ ನಡುವಿನ ಪ್ರಮುಖ ಕಡಿತಗೊಂಡಿದೆ.

ಸಾಗರ ತಾಲ್ಲೂಕಿನ ಅಂಬಾರಗುಡ್ಡದ ಹಳ್ಳದ ಒಡ್ಡು ಒಡೆದು ಆಡಗಳಲೆ ಗ್ರಾಮದ ನೂರಾರು ಎಕರೆ ಭತ್ತದ ಗದ್ದೆ ಹಾಗೂ ಅಡಿಕೆ ತೋಟಗಳಿಗೆ ನೀರು ನುಗ್ಗಿದೆ. ಕಾರ್ಗಲ್‌ನಲ್ಲಿ ರೈಸ್‌ಮಿಲ್‌ನ ಗೋಡೆ ಕುಸಿದಿದೆ. ಮಳೆಯ ರಭಸಕ್ಕೆ ಆಗುಂಬೆ ಘಾಟಿಯ 11ನೇ ತಿರುವಿನಲ್ಲಿ ಹೆದ್ದಾರಿ ಮೇಲೆ ಗುಡ್ಡ, ಭಾರಿ ಮರಗಳು ಧರೆಗುರುಳಿವೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಸಂಪರ್ಕ ಮರುಸ್ಥಾಪನೆಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಕಲೇಶಪುರ: ಮಳೆ ಬಿರುಸು

ಹಾಸನ: ಸಕಲೇಶಪುರ ತಾಲ್ಲೂಕಿನಲ್ಲಿ ಮಳೆ ಅಬ್ಬರ ಹೆಚ್ಚಾಗಿದ್ದು, ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ಬಾಳ್ಳುಪೇಟೆ, ಶಿರಾಡಿ ಘಾಟಿಯ ದೋಣಿಗಾಲ್ ಬಳಿ ಭೂಕುಸಿತ ಉಂಟಾಗಿದೆ. ಮತ್ತಷ್ಟು ಭೂ ಕುಸಿತ ತಡೆಯಲು ಹೆದ್ದಾರಿ ಕಾಮಗಾರಿ ಗುತ್ತಿಗೆ ವಹಿಸಿರುವ ಕಂಪನಿಯವರು ಮರಳಿನ ಚೀಲ ಜೋಡಿಸುತ್ತಿದ್ದಾರೆ. ಕೊಣನೂರು ಸಮೀಪದ ಹಿರೇಹಳ್ಳಿಯಲ್ಲಿ 3 ಮನೆಗಳ ಗೋಡೆ ಕುಸಿದು ಬಿದ್ದಿದ್ದು, ಗೋಡೆಗಳ ಅಡಿಯಲ್ಲಿ ಸಿಲುಕಿ ಹಸುವೊಂದು ಮೃತಪಟ್ಟಿದೆ. ಅರಕಲಗೂಡಿನಲ್ಲಿ 2 ಮನೆಗಳು ಕುಸಿದಿವೆ.

ಕರಾವಳಿ ಭಾಗದಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿಯ ಎಲ್ಲ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳ ಅವಧಿಯಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಹಲವೆಡೆ ಉತ್ತಮ ಮಳೆಯಾಗಲಿದೆ.

ಕರಾವಳಿ ಭಾಗದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 45 ರಿಂದ 55 ಕಿ.ಮೀ ಇರಲಿದ್ದು 65 ಕಿ.ಮೀ ವರೆಗೂ ತಲುಪುವ ಸಾಧ್ಯತೆಯಿದೆ. ಈ ಅವಧಿಯಲ್ಲಿ ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಎಚ್ಚರಿಕೆ ನೀಡಲಾಗಿದೆ.

ಮಳೆಗೆ ಪ್ರಾರ್ಥಿಸಿ ಶವದ ಬಾಯಿಗೆ ನೀರು

ವಿಜಯಪುರ: ಮಳೆಗಾಗಿ ಕಪ್ಪೆ, ಕತ್ತೆ ಮದುವೆ ಮಾಡುವ ಸಂಪ್ರದಾಯ ಕೇಳಿದ್ದೇವೆ. ಆದರೆ, ಜಿಲ್ಲೆಯ ತಾಳಿಕೋಟೆ ತಾಲ್ಲೂಕು ಕಲಕೇರಿ ಗ್ರಾಮದ ಜನರು ಹೂತಿದ್ದ ಶವದ ಬಾಯಿಗೆ ನೀರು ಬಿಟ್ಟು, ಮಳೆಗಾಗಿ ದೇವರಲ್ಲಿ ಪ್ರಾರ್ಥಿಸಿರುವ ಮೌಢ್ಯ ಆಚರಣೆ ಇತ್ತೀಚೆಗೆ ನಡೆದಿದೆ. ಮಳೆಗಾಲ ಆರಂಭವಾಗಿ ತಿಂಗಳಿಗೂ ಅಧಿಕ ಸಮಯವಾದರೂ ಜಿಲ್ಲೆಯಲ್ಲಿ ಈ ವರ್ಷ ಸಮರ್ಪಕ ಮಳೆಯಾಗಿಲ್ಲ. ಬಿತ್ತನೆಗೆ ತೀವ್ರ ಹಿನ್ನಡೆಯಾಗಿದೆ. ಇದರಿಂದ ಜಿಲ್ಲೆಯ ರೈತರು ಕಂಗಾಲಾಗಿದ್ದಾರೆ.

ಗ್ರಾಮಸ್ಥರು ಶವದ ಬಾಯಿಗೆ ನೀರು ಬಿಟ್ಟು ಬಂದ ಬಳಿಕ ಕಾಕತಾಳೀಯ ಎಂಬಂತೆ ಎರಡು–ಮೂರು ದಿನಗಳಿಂದ ಜಿಲ್ಲೆಯಲ್ಲಿ ಜಿಟಿಜಿಟಿ ಮಳೆಯಾಗಿದೆ!

ಮಳೆ: ಸುರಕ್ಷಿತ ಸ್ಥಳಕ್ಕೆ ಜನರ ಸ್ಥಳಾಂತರ

ಮುಂಬೈ/ಅಹಮದಾಬಾದ್ (ಪಿಟಿಐ): ಮಹಾರಾಷ್ಟ್ರದಲ್ಲಿ ಸತತ ಮಳೆ ಕಾರಣ 4,916 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದು 35 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ.

ಈ ವರ್ಷ ಜೂನ್ 1ರಿಂದ ಜುಲೈ 10ರವರೆಗೆ ಮಳೆ ಸಂಬಂಧಿತ ಅನಾಹುತಗಳಿಂದ 76 ಮಂದಿ ಮೃತಪಟ್ಟಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣೆ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ಮಳೆಯಿಂದಾಗಿ ಜೂನ್ 1ರಿಂದ 125 ಪ್ರಾಣಿಗಳು ಮೃತಪಟ್ಟವೆ ಎಂದು ತಿಳಿಸಿದ್ದಾರೆ.

ಶನಿವಾರ ವಾರ್ಧಾ ಜಿಲ್ಲೆಯಲ್ಲಿ ನಾಲ್ವರು, ಗಡ್‌ಚಿರೋಲಿಯಲ್ಲಿ 3 ಮತ್ತು ನಾಂದೇಡ್‌ನಲ್ಲಿ ಒಬ್ಬರು ಸೇರಿ ಒಟ್ಟು 9ಮಂದಿ ಸಾವಿಗೀಡಾಗಿದ್ದಾರೆ. ಈ ಮಧ್ಯೆ ಕರಾವಳಿ ಕೊಂಕಣ ಪ್ರದೇಶದಲ್ಲಿ ಮುಂದಿನ ಐದು ದಿನಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ

ದಕ್ಷಿಣ ಗುಜರಾತ್‌ನ ಹಲವೆಡೆ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ, ಕೆಲವು ನದಿಗಳ ನೀರಿನ ಮಟ್ಟ ಏರಿಕೆಯಾಗುತ್ತಿದ್ದು ವಿವಿಧ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದೆ. ರಾಜ್ಯದ ನವಸಾರಿ ಮತ್ತು ವಲ್ಸಾಡ್ ಜಿಲ್ಲೆಗಳ 700ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ತೆಲಂಗಾಣ ರಾಜ್ಯದ ಹಲವು ಜಿಲ್ಲೆಗಳಲ್ಲಿ ವರುಣನ ಆರ್ಭಟ ಜೋರಾಗಿದೆ. ಮುಖ್ಯಮಂತ್ರಿ ರಾವ್ ಅವರು ಸಭೆ ನಡೆಸಿ, ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.10	42,633	26,143
ಹಾರಂಗಿ	2,859	2854.19	12,500	20,000
ಕಬಿನಿ	2,284.00	2282.65	24,500	30,000
ಹೇಮಾವತಿ	2,922	2,919.27	24,509	29,000
ಲಿಂಗನಮಕ್ಕಿ	1,819	1,777	36,086	00
ಸೂಪಾ (ಮೀ)	564	529.30	34,742	-
ಮಾಣಿ	595	577.70	7,366	-
ತುಂಗಭದ್ರಾ	1,633	1,626.22	82,270	221
ಮಲಪ್ರಭಾ	2079.5	2,056.40	6,791	194
ಘಟಪ್ರಭಾ	2175	2,108.98	28,247	100
ಭದ್ರಾ	186	171.3	31,989	149
ಆಲಮಟ್ಟಿ (ಮೀ)	519.6	516.37	77,032	451
ನಾರಾಯಣಪುರ (ಮೀ)	492.25	491.07	616.91	86.36

* ನೆಲಮಟ್ಟದಿಂದ

ಮಳೆ ತೀವ್ರ: ವಿವಿಧೆಡೆ ಭೂಕುಸಿತ

ಒಂದನೇ ಪುಟದಿಂದ

ಸಾಗರ ತಾಲ್ಲೂಕಿನ ಅಂಬಾರಗುಡ್ಡದ ಬಳಿ ಭೂಕುಸಿತದಿಂದ ಹಳ್ಳದ ಒಡ್ಡು ಒಡೆದಿದೆ. ಇದರಿಂದಾಗಿ ಅಡಗಳಲೆ ಗ್ರಾಮದಲ್ಲಿ ನೂರಾರು ಎಕರೆ ಭತ್ತದ ಗದ್ದೆ, ಅಡಿಕೆ ತೋಟಗಳಿಗೆ ನೀರು ನುಗ್ಗಿದೆ. ಮಳೆಯಿಂದಾಗಿ ಕಲಬುರಗಿ ಜಿಲ್ಲೆಯ ವಿವಿಧೆಡೆ 21 ಮನೆಗಳು, ಬೀದರ್ ಜಿಲ್ಲೆಯಲ್ಲಿ 21 ಮನೆಗಳು, ಹಾಸನ ಜಿಲೆಯಲ್ಲಿ ಐದು ಮನೆಗಳು ಭಾಗಶಃ ಕುಸಿದಿವೆ.

ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯ ಭರ್ತಿಗೆ 1 ಅಡಿಯಷ್ಟೇ ಬಾಕಿ ಇದೆ. ಜಲಾಶಯದಿಂದ ನದಿಗೆ 26,163 ಕ್ಯುಸೆಕ್ ನೀರು ಹರಿಸುತ್ತಿದ್ದು, ಮುಂಜಾಗ್ರತೆಯಾಗಿ, ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿವಿಹಾರವನ್ನು ಸ್ಥಗಿತಗೊಳಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ತುಂಗಾ ಜಲಾಶಯ ಭರ್ತಿಯಾಗಿದೆ. ಭದ್ರಾ ಜಲಾಶಯದ ಮಟ್ಟ ಒಂದೇ ದಿನ ಮೂರು ಅಡಿಯಷ್ಟು ಹೆಚ್ಚಿದೆ. ಮಂಡ್ಯ ಜಿಲ್ಲೆಯ ಗಗನಚುಕ್ಕಿ ಜಲಪಾತ, ಚಿಕ್ಕಮಗಳೂರು ತಾಲ್ಲೂಕು ಹೊನ್ನಮ್ಮನ ಹಳ್ಳದ ಜಲಪಾತ, ಬೆಳಗಾವಿ ಜಿಲ್ಲೆಯ ಗೋಕಾಕ ಜಲಪಾತದಲ್ಲಿ ನೀರಿನ ರಭಸ ಹೆಚ್ಚಿದ್ದು, ಪ್ರವಾಸಿಗರನ್ನು ಸೆಳೆಯುತ್ತಿದೆ.

ಆರ್‌.ಡಿ. ಪಾಟೀಲ ಸಲಹೆ ಆಧರಿಸಿ ಮೇಳಕುಂದಿ, ಕಾಶಿನಾಥಗೆ ಕರೆ ಮಾಡಿದ್ದ ಸಾಲಿ

ಹೆದರಿಸಿ ₹10 ಲಕ್ಷ ವಸೂಲಿ ಮಾಡಿದ್ದ ಡಿವೈಎಸ್ಪಿ!

• ಮನೋಜಕುಮಾರ್ ಗುದ್ದಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಶಾಮೀಲಾದವರ ಮಾಹಿತಿ ಇದ್ದರೂ ಬಂಧಿಸುವುದನ್ನು ಬಿಟ್ಟು ₹80 ಲಕ್ಷಕ್ಕೆ ಬೇಡಿಕೆ ಇಟ್ಟು ಸಂಧಾನದ ಬಳಿಕ ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ₹10 ಲಕ್ಷ ಪಡೆದಿದ್ದಾರೆ ಎಂದು ಸಿಐಡಿ ಅಧಿಕಾರಿಗಳು ಕೋರ್ಟ್‌ಗೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ದಾಖಲಿಸಿದ್ದಾರೆ.



ಮಲ್ಲಿಕಾರ್ಜುನ ಸಾಲಿ

'ಅಕ್ರಮದ ಕಿಂಗ್‌ಪಿನ್ ಅಫಜಲಪುರದ ಆರ್‌.ಡಿ.ಪಾಟೀಲ ಸೂಚನೆ ಆಧರಿಸಿ ಇನ್ನಿಬ್ಬರು ಪ್ರಮುಖ ಆರೋಪಿಗಳಾದ ಮಂಜುನಾಥ ಮೇಳಕುಂದಿ ಹಾಗೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಕಾಶಿನಾಥ ಚಿಳ್ಳ ಅವರಿಗೆ ಕರೆ ಮಾಡಿ ಸಾಲಿ ಬೆದರಿಕೆ ಹಾಕಿದ್ದಾರೆ. ಅಕ್ರಮವನ್ನು ಬಹಿರಂಗಪಡಿಸಬಾರದು ಎಂದಿದ್ದರೆ ಹಣ ನೀಡಬೇಕು. ಅಲ್ಲದೇ, ಆರ್‌.ಡಿ.ಪಾಟೀಲ ಹೇಳಿದಂತೆ ಕೇಳಬೇಕು' ಎಂದೂ ತಾಕೀತು ಮಾಡಿದ್ದ ಬಗ್ಗೆ ಆರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಕರೆ ಮಾಡಿ ಬೆದರಿಕೆ ಹಾಕುವುದಕ್ಕೂ ಮುನ್ನ ಆರ್‌.ಡಿ.ಪಾಟೀಲ ಭೇಟಿ ಮಾಡಿದ್ದ ಸಾಲಿ ತಮಗೆ ₹10 ಲಕ್ಷ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದರು. ನಾನು ಮನೆ ಕಟ್ಟಿಸುತ್ತಿದ್ದು, ಅಷ್ಟು ಹಣ ಕೊಡಲಾಗದು. ಮೇಳಕುಂದಿ, ಕಾಶಿನಾಥರನ್ನು ಹೆದರಿಸಿದರೆ ಹಣ ಸಿಗಬಹುದು ಎಂದು ಪಾಟೀಲ ಸಲಹೆ ಕೊಟ್ಟಿದ್ದರು.

ಪಿಎಸ್‌ಐ ನೇಮಕಾತಿ ಪರೀಕ್ಷೆ ಮುಗಿದ ಒಂದು ವಾರದ ಬಳಿಕ ಇಬ್ಬರಿಗೂ ಕರೆ ಮಾಡಿದ್ದ ಸಾಲಿ, 'ನೀವು ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಬಗ್ಗೆ ದೂರು ಬಂದಿದೆ. ಇಬ್ಬರೂ ನನ್ನನ್ನು ಭೇಟಿ ಮಾಡಬೇಕು ಎಂದು ತಾಕೀತು ಮಾಡಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಕಂಗಾಲಾದ ಮೇಳಕುಂದಿ, ಕಾಶಿನಾಥ ಇಬ್ಬರೂ ಆರ್‌.ಡಿ.ಪಾಟೀಲ ಮನೆಗೆ ಸಂಧಾನಕ್ಕೆ ತೆರಳುತ್ತಾರೆ. ಅಲ್ಲಿಂದಲೇ ಸಾಲಿ ಅವರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿದ ಪಾಟೀಲ ಇಬ್ಬರೂ ಮನೆಗೆ ಬಂದಿದ್ದನ್ನು ತಿಳಿಸುತ್ತಾರೆ. ಅದೇ ಫೋನ್‌ನಲ್ಲಿ ಮೇಳಕುಂದಿ, ಕಾಶೀನಾಥ ಅವರೊಂದಿಗೆ ಮಾತನಾಡಿದ ಸಾಲಿ, 'ಪ್ರಕರಣ ಮುಚ್ಚಿಹಾಕಲು ₹80 ಲಕ್ಷ ಕೊಡಬೇಕು' ಎಂದು ಬೇಡಿಕೆ ಇಡುತ್ತಾರೆ. ಆದರೆ, ಅಷ್ಟು ಕೊಡಲು ಆಗುವುದಿಲ್ಲ. ₹10 ಲಕ್ಷ ಕೊಡುತ್ತೇವೆ ಎಂದು ಹೇಳಿದ್ದಕ್ಕೆ ಒಪ್ಪುತ್ತಾರೆ. ಅದಾದ ಎರಡು ದಿನದ ಬಳಿಕ ₹500 ಮುಖಬೆಲೆಯ ₹10 ಲಕ್ಷ ಮೊತ್ತದ 20 ಬಂಡಲ್ ನೋಟುಗಳನ್ನು ಪಾಟೀಲಗೆ ತಲುಪಿಸುತ್ತಾರೆ. ಅದೇ ದಿನ ರಾತ್ರಿ ಈ ಹಣವನ್ನು ಕಲಬುರಗಿಯ ಉದನೂರ ರಸ್ತೆಯಲ್ಲಿ ಸಾಲಿ ಅವರಿಗೆ ತಲುಪಿಸಿದ್ದಾಗಿ ಪಾಟೀಲ ಒಪ್ಪಿಕೊಂಡಿದ್ದಾರೆ ಎಂದು ಸಿಐಡಿ ಅಧಿಕಾರಿಗಳು ಚಾರ್ಜ್‌ಶೀಟ್‌ನಲ್ಲಿ ದಾಖಲಿಸಿದ್ದಾರೆ.

ಆರ್‌.ಡಿ.ಪಾಟೀಲ, ಕಾಶಿನಾಥ ಮತ್ತೆ ಸಿಐಡಿ ವಶಕ್ಕೆ

ಕಲಬುರಗಿಯ ನೊಬೆಲ್ ಶಾಲೆಯ ಪಿಎಸ್‌ಐ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ಎಸಗಿದ ಆರೋಪದಡಿ ಸಿಐಡಿ ಅಧಿಕಾರಿಗಳು ಆರ್‌.ಡಿ. ಪಾಟೀಲ ಹಾಗೂ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಚಿಳ್ಳ ಅವರನ್ನು ವಶಕ್ಕೆ ಪಡೆದಿದ್ದಾರೆ.

ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆ ಕೇಂದ್ರದಲ್ಲಿ ಬ್ಲೂಟೂತ್ ಬಳಸಿ ಅಕ್ರಮ ಎಸಗಿದ್ದಕ್ಕಾಗಿ ಈ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದರು. ನೊಬೆಲ್ ಶಾಲೆ ಕೇಂದ್ರದ ಪ್ರಕರಣ ಸಂಬಂಧ ಇಬ್ಬರನ್ನು ಅಧಿಕಾರಿಗಳು ಎಂಟು ದಿನಗಳಿಗೆ ತಮ್ಮ ವಶಕ್ಕೆ ಪಡೆದಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ: ಇತಿಹಾಸ ಪಠ್ಯಕ್ಕೆ ತಜ್ಞರ ಸಮಿತಿ ಶಿಫಾರಸು

‘ಹಿಂದೂ ಹತ್ಯಾಕಾಂಡ ಸೇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಭಾಗವಾಗಿ ಇತಿಹಾಸ ವಿಷಯದ ತಜ್ಞರು ಸಲ್ಲಿಸಿರುವ ವರದಿಯ ಶಿಫಾರಸಿನಲ್ಲಿ, ‘ಸದ್ಯ ಬೋಧಿಸುವ ಇತಿಹಾಸ ಪಠ್ಯವನ್ನು ಬದಲಿಸಿ, ಭಾರತದ ಇತಿಹಾಸದಲ್ಲಿ ನಡೆದ ಹಿಂದೂ ಹತ್ಯಾಕಾಂಡಗಳು, ಭಾರತೀಯ ವಿಜ್ಞಾನ ಮತ್ತು ಗಣಿತವನ್ನೂ ಸೇರಿಸಬೇಕು’ ಎಂಬ ವಾದವನ್ನು ಮಂಡಿಸಲಾಗಿದೆ.

‘ಯುರೋಪ್ ದೇಶಗಳಲ್ಲೂ ಹತ್ಯಾಕಾಂಡಗಳು ನಡೆದಿದ್ದು, ಅಲ್ಲಿ ಆ ಹತ್ಯಾಕಾಂಡಗಳ ನಿರಾಕರಣೆಯನ್ನು ಅಪರಾಧೀಕರಣಗೊಳಿಸಲಾಗಿದೆ. ನಮ್ಮಲ್ಲೂ ಹತ್ಯಾಕಾಂಡಗಳು ನಡೆದಿದ್ದು, ಅವುಗಳ ವಸ್ತುನಿಷ್ಠ ಅಧ್ಯಯನ ನಡೆಸಬೇಕಿದೆ’ ಎಂದು ಶಿಫಾರಸು ತಿಳಿಸಿದೆ.

ಐಐಟಿ ವಾರಾಣಸಿಯ ಪ್ರಾಧ್ಯಾಪಕ ವಿ.ರಾಮನಾಥನ್ ಅವರ ನೇತೃತ್ವದ ಒಂಬತ್ತು ಸದಸ್ಯರನ್ನು ಒಳಗೊಂಡ ಸಮಿತಿ ಈ ವರದಿ ಸಿದ್ಧಪಡಿಸಿದೆ. ಶಾಲಾ ಮಕ್ಕಳಿಗೆ ‘ಭಾರತೀಯ ಜ್ಞಾನ’ ವಿಷಯದ ಪಠ್ಯದಲ್ಲಿ ಈ ಅಂಶವನ್ನು ಸೇರಿಸುವಂತೆ ಸಮಿತಿ ಹೇಳಿದೆ.

‘ಸತ್ಯ ಎದುರಿಸಲು ಧೈರ್ಯ ಇಲ್ಲದಿರುವುದು ನಮ್ಮ ದೇಶದ ಅತಿ ದೊಡ್ಡ ದುರಂತ. ದೇಶದಲ್ಲಿ ಹಿಂದೂಗಳ ಹತ್ಯಾಕಾಂಡದ ಬಗ್ಗೆ ವಿವಾದರಹಿತವಾಗಿ ಚರ್ಚಿಸಲು ಸಾಧ್ಯವೇ ಇಲ್ಲ. ಈಗಾಗಲೇ ಮಲಬಾರಿನಲ್ಲಿ ನಡೆದ ಮಾಪಿಳಾ ದಂಗೆಯಲ್ಲಿ ಹಿಂದೂಗಳ ಹತ್ಯೆ, ಮಹಾರಾಷ್ಟ್ರದಲ್ಲಿ ಬ್ರಾಹ್ಮಣರ ಹತ್ಯೆ, ಕಾಶ್ಮೀರದಲ್ಲಿ ಹಿಂದೂಗಳ ಹತ್ಯೆಯ ವಿಷಯ ಪಠ್ಯ ಪುಸ್ತಕದಲ್ಲಿ ಇಲ್ಲ’ ಎಂದೂ ವರದಿ ಉಲ್ಲೇಖಿಸಿದೆ.

‘ಇತಿಹಾಸದಲ್ಲಿ ನಡೆದ ಹಿಂದೂಗಳ ಹತ್ಯಾಕಾಂಡಗಳ ವಿಷಯ ಕಲಿಕೆಯನ್ನು ಒಂದು ಸಮುದಾಯವನ್ನು ಪ್ರಚೋದಿಸುವ ಯತ್ನವಾಗಿ ನೋಡಬಾರದು. ನಮ್ಮ ಉದ್ದೇಶ ಚರಿತ್ರೆಯನ್ನು ಸ್ಥಳೀಯ ಸಮುದಾಯಗಳ ದೃಷ್ಟಿಯಿಂದ ನೋಡಬೇಕಿದೆ. ಈಗ ಇರುವ ಪಠ್ಯ ಪದ್ಧತಿಯಲ್ಲಿ ಸ್ಥಳೀಯ ಸಮುದಾಯದ ದೃಷ್ಟಿಯಿಂದ ನೋಡುವ ಪ್ರಯತ್ನ ಆಗಿಲ್ಲ. ಹೀಗಾಗಿ, ನಾವು ಹೀಗೆ ಶಿಫಾರಸು ಮಾಡಿದ್ದೇವೆ’ ಎಂದು ಸಮಿತಿ ಸಮರ್ಥಿಸಿಕೊಂಡಿದೆ.

‘ಇತಿಹಾಸ ಪಠ್ಯ ಆಕ್ರಮಣಕಾರರ, ವಸಾಹತುಶಾಹಿಗಳ ದೃಷ್ಟಿಯಿಂದ ಹೊರತಾಗಿ, ಸದೃಢ ರಾಷ್ಟ್ರೀಯತೆಯನ್ನು ಗುರುತಿಸಿ, ಬೆಳೆಸಬೇಕು. ಮರಾಠ, ಚೋಳ, ವಿಜಯನಗರ, ಕಾಶ್ಮೀರ, ಕಳಿಂಗ ಸೇರಿಂತೆ ಪ್ರಾಚೀನ ಭಾರತದ ರಾಜರ ಬಗ್ಗೆ ನಮ್ಮ ಇತಿಹಾಸ ಪಠ್ಯಗಳು ಇರಬೇಕು. ನಮ್ಮ ಇತಿಹಾಸ ಪಠ್ಯಗಳಲ್ಲಿ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮದ ಬಗ್ಗೆ ಪ್ರತ್ಯೇಕ ಅಧ್ಯಾಯಗಳಿವೆ. ಆದರೆ, ಭಾರತೀಯ ಧರ್ಮ ಪರಂಪರೆಯನ್ನು ಸಮಗ್ರವಾಗಿ ಮತ್ತು ಸರಿಯಾಗಿ ಪರಿಚಯಿಸಿಲ್ಲ. ಕರ್ನಾಟಕದ ರಾಜರ ಕುರಿತಾದ ಹಲವು ಚಾರಿತ್ರಿಕ ಅಂಶಗಳು, ಸಾಮ್ರಾಜ್ಯಗಳು, ಬರಹಗಾರರ ವಿವರ ಕೈಬಿಡಲಾಗಿದೆ ಅಥವಾ ಅಲ್ಪಸ್ವಲ್ಪ ಮಾಹಿತಿ ನೀಡಲಾಗಿದೆ’ ಎಂದೂ ವರದಿಯಲ್ಲಿದೆ.

ಭಾರತೀಯ ಗಣಿತ ಅಧ್ಯಯನಕ್ಕೆ ಸಲಹೆ

ಈಗ ಬೋಧಿಸುತ್ತಿರುವ ಗಣಿತ ಮತ್ತು ವಿಜ್ಞಾನ ಪಠ್ಯಗಳ ಬಗ್ಗೆ ಸಮಿತಿಯ ವರದಿಯಲ್ಲಿ ಆಕ್ಷೇಪ ವ್ಯಕ್ತಪಡಿಸಲಾಗಿದೆ. ನ್ಯೂಟನ್‌ನ ತಲೆಯ ಮೇಲೆ ಸೇಬು ಹಣ್ಣು ಬಿದ್ದ ಕಾರಣ ಗುರುತ್ವಾಕರ್ಷಣ ತತ್ವ ಹೊಳೆಯಿತು ಮತ್ತು ಆರ್ಕಿಮಿಡೀಸ್‌ಗೆ ತೇಲುವಿಕೆಯ ಬಲದ ತತ್ವದ ಬಗ್ಗೆ ಸ್ನಾನದ ಮನೆಯಲ್ಲಿ ಹೊಳೆಯಿತು ಎಂಬ ಬಗ್ಗೆ ಪುರಾವೆಗಳೇ ಇಲ್ಲ. ಅಂಥ ಕಥನಗಳು ಪ್ರಸಿದ್ಧಿ ಪಡೆದಿವೆ ಮತ್ತು ಅವುಗಳನ್ನು ಮತ್ತೆ ಮತ್ತೆ ಬೋಧಿಸುತ್ತಿದ್ದೇವೆ’ ಎಂದು ಹೇಳಿರುವ ಸಮಿತಿ, ಪೈಥೋಗರಸ್ ಸಿದ್ಧಾಂತವನ್ನು ‘ತಥಾಕಥಿತ’ ಎಂದು ವ್ಯಾಖ್ಯಾನಿಸಿದೆ.

ಗ್ರೀಕ್ ಗಣಿತ ಮಾದರಿಯನ್ನು ಕಡಿಮೆ ಮಾಡಿ, ಭಾರತೀಯ ಗಣಿತ ತಜ್ಞರು ಮತ್ತು ಅವರ ಪರಿಕಲ್ಪನೆಗಳನ್ನು ಮಕ್ಕಳು ಅಧ್ಯಯನ ಮಾಡಬೇಕು. ಅಮಾವಾಸ್ಯೆ, ಪೌರ್ಣಿಮೆ, ಶುಕ್ಲ ಪಕ್ಷ, ಕೃಷ್ಣ ಪಕ್ಷ ಮುಂತಾದ ಪದಗಳು ಹಾಗೂ ಸಂಸ್ಕೃತ ಪದಗಳನ್ನು ಮಕ್ಕಳು ಕಲಿಯಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ.

ವಿಜ್ಞಾನದಲ್ಲಿಯೂ ಭಾರತೀಯ ಪಠ್ಯದ ಬಗ್ಗೆ ವಿದ್ಯಾರ್ಥಿಗಳು ಬ್ರಹ್ಮಾಂಡ (ನಾಸದೀಯ ಸೂಕ್ತ), ವಸ್ತು ವಿಕಾಸ (ಶತಪಥ ಬ್ರಾಹ್ಮಣ). ಅಣು ಮತ್ತು ಪರಮಾಣು (ಕಥಾ ಉಪನಿಷದ್), ಪದಾರ್ಥಗಳ ವಿಂಗಡನೆ (ವೈಶೇಷಿಕ) ಹೀಗೆ ಪಠ್ಯಗಳನ್ನು ಅಳವಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.



ಸಮ್ಮಿಲನೋತ್ಸವ ಕುವೈತ್ ಕನ್ನಡ ಕೂಟ ಕ್ಷೇಮಾಭ್ಯುದಯ ಸಂಘ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಸಮ್ಮಿಲನೋತ್ಸವ-2022’ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಜನಪದ ನೃತ್ಯ ಪ್ರದರ್ಶಿಸಿದರು

ಜೂಜು ಅಡ್ಡೆಗಳಿಗೆ ರಕ್ಷಣೆ: ಆರೋಪ

ನೆಲಮಂಗಲ: ಪಟ್ಟಣದ ತ್ಯಾಮಗೊಂಡ್ಲು, ದಾಬಸ್‌ಪೇಟೆಯಲ್ಲಿ ಇಸ್ಪೀಟ್ ದಂಧೆ ನಡೆಯುತ್ತಿದೆ. ಇದಕ್ಕೆ ಶಾಸಕ ಡಾ.ಕೆ.ಶ್ರೀನಿವಾಸಮೂರ್ತಿ ಹಾಗೂ ಅವರ ಬೆಂಬಲಿಗರ ರಕ್ಷಣೆ ಇದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಎಂ.ಎನ್.ರಾಮು ಆರೋಪಿಸಿದರು.

ಬಿಜೆಪಿ ಯುವ ಮೋರ್ಚಾ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿ, ’ಇನ್ನು 15 ದಿನಗಳಲ್ಲಿ ತಾಲ್ಲೂಕಿನಾದ್ಯಂತ ಇರುವ ಇಸ್ಪೀಟ್ ಅಡ್ಡೆಗಳನ್ನು ಮುಚ್ಚಬೇಕು. ಇಲ್ಲವಾದಲ್ಲಿ ತೀವ್ರ ಹೋರಾಟ ಮಾಡುತ್ತೇವೆ‘ ಎಂದರು.

ಬಳಿಕ ತಹಶೀಲ್ದಾರ್‌ಗೆ ಈ ಸಂಬಂಧ ಮನವಿ ಸಲ್ಲಿಸಿದರು. ಒಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ರಾಹುಲ್ ಗೌಡ, ತಾಲ್ಲೂಕು ಅಧ್ಯಕ್ಷ ವಿಜಯಕುಮಾರ್, ಮುಖಂಡರಾದ ಡಿ.ಸಿದ್ದರಾಜು, ಗಿರಿಧರ್ ಹಾಜರಿದ್ದರು.

ಅಮರನಾಥ ಯಾತ್ರೆ ರದ್ದು

ಜಮ್ಮು (ಪಿಟಿಐ): ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದಾಗಿ ಅಮರನಾಥ ಕ್ಷೇತ್ರಕ್ಕೆ ಜಮ್ಮುವಿನಿಂದ ಯಾತ್ರೆ ಕೈಗೊಳ್ಳುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಹಿಮಾಲಯದಲ್ಲಿನ 3,880 ಮೀಟರ್ ಎತ್ತರದಲ್ಲಿರುವ ಅಮರನಾಥ ಗುಹಾ ದೇಗುಲಕ್ಕೆ ಕಾಶ್ಮೀರದ ಎರಡು ಬೇಸ್ ಕ್ಯಾಂಪ್‌ಗಳಿಂದ ಯಾತ್ರಿಕರ ಹೊಸ ತಂಡಗಳು ಯಾತ್ರೆ ಕೈಗೊಳ್ಳುವಂತಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪವಿತ್ರ ಗುಹೆಯ ಸಮೀಪ ಶುಕ್ರವಾರ ಉಂಟಾದ ದಿಢೀರ್ ಪ್ರವಾಹದಿಂದಾಗಿ ಶಿಬಿರಗಳಲ್ಲಿ ತಂಗಿದ್ದ ಯಾತ್ರಿಕರಲ್ಲಿ 16 ಜನರು ಮೃತಪಟ್ಟು, ಸುಮಾರು 40 ಮಂದಿ ನಾಪತ್ತೆಯಾಗಿದ್ದಾರೆ. ಈ ಯಾತ್ರೆಯು ಜೂನ್ 30ರಿಂದ ಕಾಶ್ಮೀರ ಕೇಂದ್ರ ಭಾಗದ ಗಾಂದರ್‌ಬಲ್‌ನಲ್ಲಿರುವ ಬಾಲ್‌ಟಾಲ್ ಮತ್ತು ದಕ್ಷಿಣ ಕಾಶ್ಮೀರದ ಅನಂತ್‌ನಾಗ್‌ನ ನುನ್‌ವಾನ್-ಪಹಲ್‌ಗಾಮ್ ಬೇಸ್ ಕ್ಯಾಂಪ್‌ಗಳಿಂದ ಆರಂಭವಾಗಿತ್ತು. ಸುಮಾರು ಒಂದು ಲಕ್ಷ ಯಾತ್ರಾರ್ಥಿಗಳು ಗುಹೆಗೆ ಭೇಟಿ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

‘ಪ್ರವಾಹ: ಕಣ್ಮರೆಯಾದವರು ಬದುಕಿರುವ ಸಾಧ್ಯತೆ ಕ್ಷೀಣ’

ಅಮರನಾಥ ಕ್ಷೇತ್ರದಲ್ಲಿ ಹಠಾತ್ ಉಂಟಾದ ಪ್ರವಾಹದಲ್ಲಿ ಕಣ್ಮರೆಯಾದವರುನ ಜೀವಂತವಾಗಿ ಉಳಿದಿರುವ ಭರವಸೆ ಕ್ಷೀಣಗೊಂಡಿದೆ. ಹಾಗಿದ್ದರೂ ಸೇನೆ ಮತ್ತು ವಿವಿಧ ಇಲಾಖೆಗಳ ರಕ್ಷಣಾ ತಂಡಗಳು ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ.

‘ಪ್ರವಾಹದ ರಭಸದಿಂದ ಸ್ಥಳದಲ್ಲಿ ಸಂಗ್ರಹವಾಗಿರುವ ಅವಶೇಷಗಳನ್ನು ಸಿಬ್ಬಂದಿ ತೆರವುಗೊಳಿಸುತ್ತಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಶ್ವಾನದಳ ಗುರುತಿಸಿದ ಸ್ಥಳಗಳಲ್ಲಿ ಅವಶೇಷಗಳನ್ನು ತೆರವು ಮಾಡಲಾಗಿದೆ. ಬದುಕುಳಿದವರನ್ನು ರಕ್ಷಿಸುವ ವಿಶ್ವಾಸವಿದೆ. ಆದರೆ, ಅವಶೇಷಗಳಡಿ ಬದುಕುಳಿದಿದ್ದರೆ ಅದು ಪವಾಡವೇ ಸರಿ. ಕಾಣೆಯಾದವರು ಜೀವಂತವಿರುವ ಸುಳಿವು ಈವರೆಗೆ ಸಿಕ್ಕಿಲ್ಲ. ಘಟನಾ ಸ್ಥಳದಲ್ಲಿ ಹೊಸದಾಗಿ ಯಾವುದೇ ಮೃತದೇಹವೂ ಪತ್ತೆಯಾಗಿಲ್ಲ’ ಎಂದು ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರ್‌ಎಫ್) ಅಧಿಕಾರಿಗಳು ಹೇಳಿದ್ದಾರೆ.

ಗೂಡ್ಸ್ ಶೆಡ್ ರಸ್ತೆ ವಾಹನ ಸಂಚಾರಕ್ಕೆ ಮುಕ್ತ

ಬೆಂಗಳೂರು: ಟಿ.ಸಿ.ಎಂ. ರಾಯನ್ ರಸ್ತೆಯಲ್ಲಿ (ಗೂಡ್ಸ್ ಶೆಡ್ ರಸ್ತೆ) ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಕಳೆದ ಆಗಸ್ಟ್‌ನಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿತ್ತು. ಮೂರು ತಿಂಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿ, 10 ತಿಂಗಳ ನಂತರ ಮುಗಿದಿದೆ. 1.3 ಕಿ.ಮೀ ಉದ್ದ ರಸ್ತೆಯನ್ನು ₹12 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡಲಾಗಿದೆ. ಪಾದಚಾರಿ ಮಾರ್ಗದ ಕಾಮಗಾರಿ ಇನ್ನೂ ನಡೆಯುತ್ತಿದೆ.

‘ಬೇಲಿ ಮಠದಿಂದ ಶಾಂತಲಾ ಸಿಲ್ಕ್ ಹೌಸ್‌ವರೆಗಿನ 2 ನೇ ಹಂತದ ಕಾಮಗಾರಿ 30 ದಿನಗಳಲ್ಲಿ ಮುಗಿಸಿದ್ದೇವೆ’ ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

‘ಕೃಷ್ಣ ಮಾಸಡಿ ಸಮಗ್ರ ಕತೆಗಳು’ ಪುಸ್ತಕ ಬಿಡುಗಡೆ

‘ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದೌರ್ಜನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ಕಾಲಘಟ್ಟದಲ್ಲಿ ಸಾಹಿತಿಗಳು, ಲೇಖಕರು ಮತ್ತು ಪತ್ರಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇದು ಸವಾಲಿನ ಕಾಲಘಟ್ಟವಾಗಿದೆ’ ಎಂದು ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಕಳವಳ ವ್ಯಕ್ತಪಡಿಸಿದರು.

ಜಾಣಗೆರೆ ಪತ್ರಿಕೆ ಪ್ರಕಾಶನ ಹಾಗೂ ಸಾಹಿತ್ಯ ಸಂಗಮ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಕೃಷ್ಣ ಮಾಸಡಿ ಸಮಗ್ರ ಕತೆಗಳು’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘ಬದಲಾದ ಸನ್ನಿವೇಶದಲ್ಲಿ ಮೂಲ ಟಿಪ್ಪಣಿ ಬರೆದವರಿಗೆ ಜೈಲು ಶಿಕ್ಷೆ ಆಗುತ್ತಿಲ್ಲ. ಬದಲಾಗಿ, ಆ ಟಿಪ್ಪಣಿಯನ್ನು ಫೇಸ್‌ಬುಕ್, ಟ್ವಿಟರ್, ವಾಟ್ಸ್ ಆ್ಯಪ್‌ನಲ್ಲಿ ಹಂಚಿಕೊಂಡ ವ್ಯಕ್ತಿಗಳು ಜೈಲು ಪಾಲಾಗುತ್ತಿದ್ದಾರೆ. ಇಂತಹ ಸೂಕ್ಷ್ಮ ಸನ್ನಿವೇಶವನ್ನು ಹೇಗೆ ನಿಭಾಯಿಸುವುದು ಎಂಬ ಗೊಂದಲ ಹಲವರನ್ನು ಕಾಡತೊಡಗಿದೆ’ ಎಂದು ಹೇಳಿದರು.

‘ಕಾಲದ ಮೌಲ್ಯಗಳ ಜೊತೆಗಿನ ಸಂಘರ್ಷದಿಂದ ಬರಹಗಾರ ವಿಮುಖನಾದರೆ ಆತ ಮಹತ್ವದ ಬರಹಗಾರನಾಗಿ ಉಳಿಯಲು ಸಾಧ್ಯವಿಲ್ಲ. ಪ್ರಮುಖ ಬರಹಗಾರರೆಲ್ಲರೂ ತಮ್ಮ ಕಾಲದ ವಿದ್ಯಮಾನಗಳಿಗೆ ಸ್ಪಂದಿಸಿದ್ದರು. ಭಾಷೀಯ ಸಮುದಾಯದ ಓದುವ ಅಭಿರುಚಿ ಹೆಚ್ಚಿಸುವ ಕಾರ್ಯ ಮಾಡುವ ವ್ಯಕ್ತಿ ಪೂಜನೀಯ’ ಎಂದರು.

ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ‘ಸುತ್ತಲಿನ ವಿದ್ಯಮಾನಗಳಿಗೆ ಸ್ಪಂದಿಸುವ ಹೊಣೆ ಬರಹಗಾರನಿಗೆ ಇರುತ್ತದೆ. ಸುತ್ತಲು ತಲ್ಲಣ, ಆತಂಕ ಸೃಷ್ಟಿ ಆಗಿರುವಾಗಲೂ ಅದಕ್ಕೆ ಬರಹಗಾರ ಸ್ಪಂದಿಸದಿದ್ದರೆ ಈ ಆತಂಕಕ್ಕೆ ಕಾರಣವಾದ ಶಕ್ತಿಗಳೊಂದಿಗೆ ಆತ ಕೈ ಜೋಡಿಸಿದಂತಾಗುತ್ತದೆ. ತಾನು ಬರೆದ ನಾಟಕದ ಪ್ರದರ್ಶನಕ್ಕೆ ಅಡ್ಡಿ ಉಂಟು ಮಾಡಿದಾಗಲೂ ಬರಹಗಾರ ಮೌನವಾಗಿರುವುದು ಸರಿಯಲ್ಲ’ ಎಂದು ಹೇಳಿದರು.

‘ಕೃಷ್ಣ ಮಾಸಡಿ ಅವರ ಬರಹಗಳು ಮಲೆನಾಡಿನ ಗ್ರಾಮ ಜೀವನದ ಬಹುತ್ವದ ಸಂವೇದನೆಯನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಕಾಮಕೇಂದ್ರಿತ ಬರಹಗಳಿದ್ದರೂ, ಮನುಷ್ಯನ ವ್ಯಕ್ತಿತ್ವವನ್ನು ಸಮರ್ಥವಾಗಿ ಬಿಚ್ಚಿಡುತ್ತವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಪ್ರೊ.ಎಸ್‌.ಜಿ.ಸಿದ್ಧರಾಮಯ್ಯ ಅವರು ‘ಕೃಷ್ಣ ಮಾಸಡಿ ಸಮಗ್ರ ಕತೆಗಳು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಕೃಷ್ಣ ಮಾಸಡಿ, ವಿಧಾನಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ, ಎಲ್. ಹನುಮಂತಯ್ಯ, ಚಿಂತಕ ನಟರಾಜ್ ಹುಳಿಯಾರ್, ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಇದ್ದಾರೆ. ಪ್ರಜಾವಾಣಿ ಚಿತ್ರ

2021–22ನೇ ಸಾಲಿನಲ್ಲಿ 2.20 ಲಕ್ಷ ಮಹಿಳೆಯರಿಗೆ ಶಸ್ತ್ರಚಿಕಿತ್ಸೆ

ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ: ಪುರುಷರ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಪುರುಷರು ನಿರಾಸಕ್ತಿ ತಾಳಿದ್ದು, 2021–22ನೇ ಸಾಲಿನಲ್ಲಿ 643 ಪುರುಷರು ಮಾತ್ರ ಈ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇದೇ ಅವಧಿಯಲ್ಲಿ 2.20 ಲಕ್ಷ ಮಹಿಳೆಯರು ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ಕಳೆದ ಸಾಲಿನಲ್ಲಿ 1.13 ಲಕ್ಷ ಮಂದಿಗೆ ಪಿಪಿಐಯುಸಿಡಿ (ವಂಕಿ) ಅಳವಡಿಸಲಾಗಿದೆ. 1.04 ಲಕ್ಷ ಮಂದಿ ಐಯುಸಿಡಿ ಸಾಧನ ಅಳವಡಿಸಿಕೊಂಡಿದ್ದಾರೆ. 2.20 ಲಕ್ಷ ಮಂದಿ ನಿರೋಧ್ ಬಳಸಿದ್ದಾರೆ. 1.54 ಲಕ್ಷ ಮಂದಿ ಮಾಲಾ–ಡಿ ಹಾಗೂ 34,770 ಮಂದಿ ಗರ್ಭ ನಿರೋಧಕ ಮಾತ್ರೆ ಬಳಸಿದ್ದಾರೆ. 74,513 ಮಂದಿ ಗರ್ಭನಿರೋಧಕ ಅಂತರ ಚುಚ್ಚುಮದ್ದು ಪಡೆದಿದ್ದಾರೆ’ ಎಂದು ಇಲಾಖೆ ಪ್ರಕಟಣೆಯಲ್ಲಿ ಹೇಳಿದೆ.

‘ಕುಟುಂಬ ಕಲ್ಯಾಣ ಯೋಜನೆಗಳಡಿ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. ಶಸ್ತ್ರಚಿಕಿತ್ಸೆ ವಿಫಲವಾದರೆ ₹ 60 ಸಾವಿರ, ತೊಂದರೆಯಾದರೆ ಗರಿಷ್ಠ ₹ 50 ಸಾವಿರ ಹಾಗೂ ಮರಣ ಹೊಂದಿದರೆ ₹ 4 ಲಕ್ಷ ಪರಿಹಾರವನ್ನೂ ನೀಡಲಾಗುತ್ತದೆ. 2021–22ನೇ ಸಾಲಿನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದವರಲ್ಲಿ ಮೂರು ಮಂದಿ ಮೃತಪಟ್ಟಿದ್ದರು. 82 ಮಂದಿಗೆ ವಿಫಲವಾದರೆ, ಒಬ್ಬರಿಗೆ ಮಾತ್ರ ತೊಂದರೆಯಾಗಿತ್ತು’ ಎಂದು ತಿಳಿಸಿದೆ.

ಸಮೀಕ್ಷೆ: ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ 4.5ರ ಅಡಿ ರಾಜ್ಯದಲ್ಲಿ 20 ರಿಂದ 24 ವರ್ಷದ ಮಹಿಳೆಯರನ್ನು ಸಮೀಕ್ಷೆ ಮಾಡಲಾಗಿದ್ದು, ಅವರಲ್ಲಿ ಶೇ 23.3 ರಷ್ಟು ಮಹಿಳೆಯರು 18 ವರ್ಷದೊಳಗೆ ಮದುವೆಯಾಗಿದ್ದಾರೆ. 15 ರಿಂದ 19 ವರ್ಷದೊಳಗಿನವರಲ್ಲಿ ಶೇ 6.8 ರಷ್ಟು ಮಂದಿ ಸಮೀಕ್ಷೆ ವೇಳೆ ಗರ್ಭಿಣಿಯಾಗಿದ್ದರು. ಸಮೀಕ್ಷೆಗೆ ಒಳಪಟ್ಟ 25 ರಿಂದ 29 ವರ್ಷದ ಪುರುಷರಲ್ಲಿ ಶೇ 6.1 ರಷ್ಟು ಮಂದಿ 21 ವರ್ಷದೊಳಗೆ ವಿವಾಹವಾಗಿದ್ದಾರೆ ಎಂದು ವಿವರಿಸಿದೆ.

ಇಲಾಖೆಯು ವಿಶ್ವ ಜನಸಂಖ್ಯಾ ದಿನದ ಪ್ರಯುಕ್ತ ಸೋಮವಾರ ರಾಜ್ಯದಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ‘ಕುಟುಂಬ ಯೋಜನೆ ಉಪಾಯಗಳನ್ನು ನಮ್ಮದಾಗಿಸಿ, ಉನ್ನತಿಯ ಹೊಸ ಅಧ್ಯಾಯ ಬರೆಯೋಣ’ ಈ ವರ್ಷದ ಘೋಷ ವಾಕ್ಯವಾಗಿದೆ ಎಂದು ಹೇಳಿದೆ.

ಕೃತ್ಯವೆಸಗಿದ್ದ ಇಬ್ಬರು ಅಪಾರ್ಟ್‌ಮೆಂಟ್ ಭದ್ರತಾ ಸಿಬ್ಬಂದಿ ಬಂಧನ

ಕಳ್ಳನೆಂದು ಭಾವಿಸಿ ಬ್ಯಾಂಕ್ ವ್ಯವಸ್ಥಾಪಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛತ್ತೀಸಗಡದ ಇಸಾಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ವ್ಯವಸ್ಥಾಪಕ ಅಬಿನಾಶ್ ಪತಿ (27) ಎಂಬುವವರನ್ನು ಕಳ್ಳನೆಂದು ಭಾವಿಸಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾದ ಅಬಿನಾಶ್, ಎಂಬಿಎ ಪದವೀಧರ. ಇಸಾಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ವ್ಯವಸ್ಥಾಪಕರಾಗಿ ಕೆಲಸಕ್ಕೆ ಸೇರಿದ್ದರು. ಬ್ಯಾಂಕ್ ವ್ಯವಹಾರದ ತರಬೇತಿಗೆಂದು ಜುಲೈ 4ರಂದು ನಗರಕ್ಕೆ ಬಂದಿದ್ದರು. ಇವರ ಕೊಲೆ ಪ್ರಕರಣದಲ್ಲಿ ಶ್ಯಾಮನಾಥ್ ರೀ ಹಾಗೂ ಅಜಿತ್ ಮುರಾ ಎಂಬುವವರನ್ನು ಬಂಧಿಸಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಗಿರೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಸ್ನೇಹಿತರ ಜೊತೆ ವಾಸ: ‘ಬೆಂಗಳೂರಿಗೆ ಹೊಸಬರಾಗಿದ್ದ ಅಬಿನಾಶ್, ಮಾರತ್ತಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿರುವ ಸ್ನೇಹಿತರೊಬ್ಬರ ಫ್ಲ್ಯಾಟ್‌ನಲ್ಲಿ ಉಳಿದುಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಅಬಿನಾಶ್ ಹಾಗೂ ಸ್ನೇಹಿತ, ಜುಲೈ 4ರಂದು ರಾತ್ರಿ ಮಾರತ್ತಹಳ್ಳಿ ಬಳಿಯ ಬಾರೊಂದಕ್ಕೆ ಹೋಗಿ ಮದ್ಯ ಕುಡಿದಿದ್ದರು. ವೈಯಕ್ತಿಕ ಕೆಲಸ ಇರುವುದಾಗಿ ಹೇಳಿದ್ದ ಸ್ನೇಹಿತ, ಬಾರ್‌ನಿಂದ ಅರ್ಧಕ್ಕೆ ಹೊರಟು ಹೋಗಿದ್ದರು. ಅಭಿನಾಶ್, ತಡರಾತ್ರಿ ಬಾರ್‌ನಿಂದ ಹೊರಬಂದು ಒಬ್ಬರೇ ಫ್ಲ್ಯಾಟ್‌ನತ್ತ ಹೊರಟಿದ್ದರು.’

ಅಪರಾಧ ಸುದ್ದಿ



ಅಬಿನಾಶ್



ಅಜಿತ್ ಮುರಾ



ಶ್ಯಾಮನಾಥ್

‘ಮದ್ಯದ ಅಮಲಿನಲ್ಲಿದ್ದ ಅಬಿನಾಶ್ ಅವರಿಗೆ ಫ್ಲ್ಯಾಟ್‌ಗೆ ಹೋಗುವ ದಾರಿ ಗೊತ್ತಾಗಿರಲಿಲ್ಲ. ದಾರಿ ತಪ್ಪಿ ಆನಂದನಗರದಲ್ಲಿರುವ ವಂಶಿ ಸಿಟಾಡೆಲ್ ಅಪಾರ್ಟ್‌ಮೆಂಟ್ ಸಮುಚ್ಚಯದ ಬಳಿ ಹೋಗಿದ್ದರು. ತಮ್ಮದೇ ಅಪಾರ್ಟ್‌ಮೆಂಟ್ ಸಮುಚ್ಚಯ ಇರಬಹುದೆಂದು ತಿಳಿದು, ಒಳಹೋಗಲು ಮುಂದಾಗಿದ್ದರು. ಆದರೆ, ಗೇಟ್ ಮುಚ್ಚಿತ್ತು. ಕಾಂಪೌಂಡ್ ಹತ್ತಿ ಜಿಗಿಯಲು ಯತ್ನಿಸಿದ್ದರು’ ಎಂದೂ ಪೊಲೀಸರು ಹೇಳಿದರು.

‘ವಂಶಿ ಸಿಟಾಡೆಲ್ ಅಪಾರ್ಟ್‌ಮೆಂಟ್ ಸಮುಚ್ಚಯದ ಭದ್ರತಾ ಸಿಬ್ಬಂದಿ ಶ್ಯಾಮನಾಥ್ ಹಾಗೂ ಸ್ನೇಹಿತ ಅಜಿತ್, ಅಬಿನಾಶ್ ಅವರನ್ನು ತಡೆದು ಪ್ರಶ್ನಿಸಿದ್ದರು. ಪ್ಯಾಂಟ್ ಇಲ್ಲದೇ ಚಡ್ಡಿ ಮಾತ್ರ ಧರಿಸಿದ್ದರಿಂದ ಅನುಮಾನಗೊಂಡು ಗುರುತಿನ ಚೀಟಿ ತೋರಿಸುವಂತೆ ಹೇಳಿದ್ದರು. ಆದರೆ, ಅಭಿನಾಶ್ ಸಮರ್ಪಕ ಉತ್ತರ ನೀಡಿರಲಿಲ್ಲ.’

‘ಕಳ್ಳನಿರಬೇಕೆಂದು ತಿಳಿದ ಭದ್ರತಾ ಸಿಬ್ಬಂದಿ, ಅಭಿನಾಶ್ ಅವರ ತಲೆಗೆ ರಾಡ್‌ನಿಂದ ಹೊಡೆದಿದ್ದರು. ತೀವ್ರ ರಕ್ತಸ್ರಾವವಾಗಿ ಅಭಿನಾಶ್ ಮೃತಪಟ್ಟಿದ್ದರು. ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಭದ್ರತಾ ಸಿಬ್ಬಂದಿಯನ್ನು ವಶಕ್ಕೆ ಪಡೆದು, ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರಂಭದಲ್ಲಿ ಮೃತನ ಹೆಸರು ಗೊತ್ತಾಗಿರಲಿಲ್ಲ. ತನಿಖೆ ಕೈಗೊಂಡಾಗ, ಅಬಿನಾಶ್ ಹೆಸರು ತಿಳಿಯಿತು’ ಎಂದೂ ಪೊಲೀಸರು ತಿಳಿಸಿದರು.

ಲಾರಿಯಲ್ಲಿ ಮಲಗಿದ್ದ ಚಾಲಕನ ಸುಲಿಗೆ

ಬೆಂಗಳೂರು: ಲಾರಿಯಲ್ಲಿ ಮಲಗಿದ್ದ ಚಾಲಕನ ಮೇಲೆ ಹಲ್ಲೆ ಮಾಡಿ ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ಯಲಹಂಕ ನ್ಯೂಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪುಟ್ಟೇನಹಳ್ಳಿಯ ಸೂರ್ಯ ಅಲಿಯಾಸ್ ಸೂರಿ ಹಾಗೂ ಮಧು ಬಂಧಿತರು. ಕೃತ್ಯದಲ್ಲಿ ಬಾಲಕ ಭಾಗಿಯಾಗಿದ್ದು, ಆತನನ್ನು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಚಾಲಕ, ಜುಲೈ 6ರಂದು ರಾತ್ರಿ ಯಲಹಂಕ ನ್ಯೂಟೌನ್ ಠಾಣೆ ವ್ಯಾಪ್ತಿಯಲ್ಲಿ ಲಾರಿ ನಿಲ್ಲಿಸಿ ಮಲಗಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಚಾಲಕನನ್ನು ಎಬ್ಬಿಸಿ ಹಲ್ಲೆ ಮಾಡಿದ್ದರು. ₹18,000 ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು’ ಎಂದೂ ತಿಳಿಸಿದರು.

ಸ್ಪರ್ಶ ಆಸ್ಪತ್ರೆ ಸರ್ವರ್ ಹ್ಯಾಕ್: ಹಣಕ್ಕೆ ಬೇಡಿಕೆ

ಬೆಂಗಳೂರು: ಯಶವಂತಪುರದ ಸ್ಪರ್ಶ ಆಸ್ಪತ್ರೆಯ ಸರ್ವರ್ ಹ್ಯಾಕ್ ಮಾಡಿ ದತ್ತಾಂಶ ಕದಿಯಲಾಗಿದ್ದು ಈ ಸಂಬಂಧ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜುಲೈ 2ರಂದು ಅಪರಿಚಿತರು ಸರ್ವರ್ ಹ್ಯಾಕ್ ಮಾಡಿದ್ದಾರೆಂದು ಆಸ್ಪತ್ರೆಯ ತಾಂತ್ರಿಕ ವಿಭಾಗದ ಅಧಿಕಾರಿ ದೂರು ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾಹಿತಿಯನ್ನು ಮರಳಿಸಲು ಬಿಟ್ ಕಾಯಿನ್ ರೂಪದಲ್ಲಿ ಹಣಕ್ಕೆ ಬೇಡಿಕೆಯಿಟ್ಟಿದ್ದಾರೆ. ಸರ್ವರ್‌ನಲ್ಲಿ ಆಸ್ಪತ್ರೆಯ ಒಳ ಹಾಗೂ ಹೊರ ರೋಗಿಗಳ ಮಾಹಿತಿ, ಚಿಕಿತ್ಸೆಗೆ ಸಂಬಂಧಿಸಿದ ವಿವರ ಸಂಗ್ರಹಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಸಿಬಿಐ ಹೆಸರಿನಲ್ಲಿ ವ್ಯಕ್ತಿಗೆ ಬೆದರಿಕೆ: ₹5 ಲಕ್ಷ ವಸೂಲಿ

ಫೇಸ್‌ಬುಕ್‌ನಲ್ಲಿ ಆರೋಪಿ ಪರಿಚಯ: ಲೈಂಗಿಕ ಪ್ರಚೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮದ ಮೂಲಕ ನಗರದ ನಿವಾಸಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ ಯುವತಿ ಹಾಗೂ ಆಕೆಯ ಸಹಚರರು, ಸಿಬಿಐ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್ ಮಾಡಿ ₹ 5 ಲಕ್ಷ ವಸೂಲಿ ಮಾಡಿದ್ದಾರೆ.

ಹಣ ಕಳೆದುಕೊಂಡಿರುವ ವ್ಯಕ್ತಿ, ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಯುವತಿ ಹಾಗೂ ಸಹಚರರ ಮಾಹಿತಿ ಕಲೆಹಾಕುತ್ತಿದ್ದಾರೆ.

‘ದೂರುದಾರರಿಗೆ ಫೇಸ್‌ಬುಕ್‌ನಲ್ಲಿ ಯುವತಿ ಪರಿಚಯವಾಗಿತ್ತು. ಚಾಟಿಂಗ್ ಮಾಡಲಾರಂಭಿಸಿದ್ದ ಇಬ್ಬರೂ ಮೊಬೈಲ್ ನಂಬರ್ ಬದಲಾಯಿಸಿಕೊಂಡಿದ್ದರು. ನಂತರ, ವಾಟ್ಸ್‌ಆ್ಯಪ್‌ನಲ್ಲಿ ಮಾತುಕತೆ ಮುಂದುವರಿದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾತ್ರಿಯಿಡೀ ವಿಡಿಯೊ ಕರೆ ಮಾಡುತ್ತಿದ್ದ ಯುವತಿ, ದೂರುದಾರರನ್ನು ಲೈಂಗಿಕವಾಗಿ ಪ್ರಚೋದಿಸಿ ನಗ್ನವಾಗುವಂತೆ ಮಾಡುತ್ತಿದ್ದಳು. ಅದೇ ವಿಡಿಯೊವನ್ನು ಚಿತ್ರೀಕರಿಸಿಕೊಳ್ಳುತ್ತಿದ್ದಳು. ಕೆಲ ದಿನ ಬಿಟ್ಟು ವಿಡಿಯೊ ಕಳುಹಿಸಿದ್ದ ಯುವತಿ, ಹಣಕ್ಕೆ ಬೇಡಿಕೆ ಇರಿಸಿದ್ದಳು’ ಎಂದೂ ತಿಳಿಸಿವೆ.

‘ದೂರುದಾರ ಹಣ ನೀಡಿರಲಿಲ್ಲ. ಕೆಲದಿನ ಬಿಟ್ಟು ದೂರುದಾರರಿಗೆ ಕರೆ ಮಾಡಿದ್ದ ಅಪರಿಚಿತರು, ಸಿಬಿಐ ಅಧಿಕಾರಿಯೆಂದು ಹೇಳಿಕೊಂಡಿದ್ದರು. ‘ನಿಮ್ಮ ಹೆಸರು ಬರೆದಿಟ್ಟು ಯುವತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಮೊಬೈಲ್‌ನಲ್ಲಿ ನಿಮ್ಮ ನಗ್ನ ವಿಡಿಯೊ ಸಿಕ್ಕಿದೆ. ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಸದ್ಯದಲ್ಲೇ ಮನೆ ಮೇಲೆ ದಾಳಿ ಮಾಡಲಿದ್ದೇವೆ. ₹5 ಲಕ್ಷ ನೀಡಿದರೆ ನಿಮ್ಮನ್ನು ಪ್ರಕರಣದಿಂದ ಖುಲಾಸೆ ಮಾಡುತ್ತೇವೆ’ ಎಂದಿದ್ದರು. ಹೆದರಿದ್ದ ದೂರುದಾರ, ₹5 ಲಕ್ಷ ನೀಡಿದ್ದರು. ಅದಾದ ನಂತರವೂ ಆರೋಪಿಗಳು ಹಣ ಕೇಳಿದ್ದರಿಂದ ದೂರುದಾರ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಪೊಲೀಸ್ ಹೇಳಿವೆ.

ಬಾಲಕಿ ಮೇಲೆ ಅತ್ಯಾಚಾರ: 20 ವರ್ಷ ಜೈಲು

ಬೆಂಗಳೂರು: ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದ ಅಪರಾಧಿ ಕೆ.ಜಿ. ಮಂಜುನಾಥ್ ಎಂಬಾತನಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ ₹ 5 ಸಾವಿರ ದಂಡ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

‘ಮಂಡ್ಯ ಜಿಲ್ಲೆಯ ಮಂಜುನಾಥ್, ಬೆಂಗಳೂರಿಗೆ ಬಂದು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಆಗಾಗ ತನ್ನೂರಿಗೆ ಹೋಗಿ ಬರುತ್ತಿದ್ದ. 2017ರಲ್ಲಿ ತನ್ನದೇ ಊರಿನ ಬಾಲಕಿಯನ್ನು ಪುಸಲಾಯಿಸಿ ಅಪಹರಿಸಿಕೊಂಡು ಬೆಂಗಳೂರಿಗೆ ಬಂದಿದ್ದ. ನಂತರ, ಅಕ್ಕನ ಮನೆಗೆ ಕರೆದೊಯ್ದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಾಫಿಯಲ್ಲಿ ಮತ್ತು ಬರುವ ವಸ್ತು ಮಿಶ್ರಣ ಮಾಡಿ ಬಾಲಕಿಗೆ ಕುಡಿಸಿ ಪ್ರಜ್ಞೆ ತಪ್ಪಿಸಿದ್ದ. ನಂತರ, ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ನಂತರ, ಬಾಲಕಿಯನ್ನು ಊರಿಗೆ ಬಿಟ್ಟು ಬಂದಿದ್ದ. ಕೆಲ ತಿಂಗಳ ನಂತರ ಬಾಲಕಿ ಗರ್ಭ ಧರಿಸಿದ್ದಳು. ವಿಷಯ ಗೊತ್ತಾಗುತ್ತಿದ್ದಂತೆ ಪೋಷಕರು ಹನುಮಂತನಗರ ಠಾಣೆಗೆ ದೂರು ನೀಡಿದ್ದರು.’

‘ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಕೆ.ಎಚ್. ದಿಲೀಪ್‌ಕುಮಾರ್, ಮಂಜುನಾಥ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಗೀತಾ ರಾಮಕೃಷ್ಣ ಗೊರವರ ವಾದಿಸಿದ್ದರು’ ಎಂದೂ ತಿಳಿಸಿವೆ.

ಬಿ.ಎಲ್. ವೇಣುಗೆ ಮತ್ತೊಂದು ಬೆದರಿಕೆ ಪತ್ರ

ಚಿತ್ರದುರ್ಗ: ಸಾವರ್ಕರ್ ಕುರಿತು ನೀಡಿದ ಹೇಳಿಕೆಗೆ ಬಹಿರಂಗ ಕ್ಷಮೆ ಕೇಳುವಂತೆ ತಾಕೀತು ಮಾಡಿ ಕಾದಂಬರಿಕಾರ ಬಿ.ಎಲ್. ವೇಣು ಅವರಿಗೆ ಬೆದರಿಕೆ ಧಾಟಿಯ ಮತ್ತೊಂದು ಅನಾಮಧೇಯ ಪತ್ರ ಬಂದಿದೆ.



ಬಿ.ಎಲ್. ವೇಣು

ಕೈ ಬರಹದಲ್ಲಿರುವ ಎರಡು ಪುಟಗಳ ಪತ್ರದ ಕೊನೆಯಲ್ಲಿ ‘ಸಹಿಷ್ಣು ಹಿಂದೂ’ ಎಂಬ ಉಲ್ಲೇಖವಿದೆ. ಆದರೆ, ಇದಕ್ಕೆ ವಿಳಾಸವಿಲ್ಲ. ‘61 ಸಾಹಿತಿಗಳಿಗೆ ಬುದ್ಧಿ ಹೇಳಿ ಹಾಗೂ ಕ್ಷಮೆ ಕೇಳಿ. ಇಲ್ಲವಾದರೆ ಕಾಲನ ಉಪಚಾರಕ್ಕೆ ಸಿದ್ಧರಾಗಿ’ ಎಂಬ ಬೆದರಿಕೆಯನ್ನೂ ಹಾಕಲಾಗಿದೆ.



ಡಿಜಿಟಲ್ ಅಕ್ವೇರಿಯಂ

ನೆಕ್ಸಸ್ ಶಾಂತಿನಿಕೇತನ ಮಾಲ್‌ನಲ್ಲಿ ‘ಡಿಜಿಟಲ್ ಅಕ್ವೇರಿಯಂ’

ಬೆಂಗಳೂರು: ನೆಕ್ಸಸ್ ಮರುಬ್ರ್ಯಾಂಡಿಂಗ್ ಅಂಗವಾಗಿ ಶಾಂತಿನಿಕೇತನ ಮಾಲ್‌ನಲ್ಲಿ ಡಿಜಿಟಲ್ ಅಕ್ವೇರಿಯಂ ಅಳವಡಿಸಲಾಗಿದೆ.

ಇದು ಮಕ್ಕಳಿಗೆ ವಿನೋದದ ಜೊತೆಗೆ ಸಮುದ್ರ ಜೀವಿಗಳನ್ನು ಅನ್ವೇಷಿಸುವ ಅವಕಾಶ ಕಲ್ಪಿಸಲಿದೆ. ಮಕ್ಕಳು ವರ್ಚುವಲ್ ರಿಯಾಲಿಟಿ ಪರದೆ ಮೇಲೆ ಲೈವ್ ಅನಿಮೇಷನ್ ಅನ್ನು ವೀಕ್ಷಿಸಬಹುದು. ಜಲಚರ ಚಿತ್ರಿಸಬಹುದು. ಮಕ್ಕಳು ಲೈವ್ ಹಾಗೂ ತೇಲುವ ಸಮುದ್ರ ಪ್ರಾಣಿಗಳ ಡಿಜಿಟಲ್ ಚಿತ್ರಗಳನ್ನು ಮತ್ತು ವಿಡಿಯೊಗಳನ್ನು ಕಾಣಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆ ಸಾವು: ಬಿಬಿಎಂಪಿ ಚಾಲಕ ಪರಾರಿ

ಬೆಂಗಳೂರು: ನಾಗರಬಾವಿ ವೃತ್ತ ಬಳಿ ದ್ವಿಚಕ್ರ ವಾಹನವೊಂದಕ್ಕೆ ಬಿಬಿಎಂಪಿ ಲಾರಿಯೊಂದು ಡಿಕ್ಕಿ ಹೊಡೆದಿದ್ದು, ವಿಜಯಕಲಾ (37) ಎಂಬುವವರು ಮೃತಪಟ್ಟಿದ್ದಾರೆ. ಅಪಘಾತದ ನಂತರ ಟಿಪ್ಪರ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದು, ಆತನಿಗಾಗಿ ಬ್ಯಾಟರಾಯನಪುರ ಪೊಲೀಸರು ಹುಡುಕಾಟ ಆರಂಭಿಸಿದ್ದಾರೆ.

‘ಭುವನೇಶ್ವರಿ ನಗರದ ನಿವಾಸಿ ವಿಜಯ ಕಲಾ, ಮೆಜೆಸ್ಟಿಕ್‌ನಲ್ಲಿರುವ ಮಳಿಗೆಯೊಂದರಲ್ಲಿ ಮಾರುಕಟ್ಟೆ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿದ್ದರು. ಶನಿವಾರ ಬೆಳಿಗ್ಗೆ ಕೆಲಸಕ್ಕೆ ಹೊರಟಿದ್ದ ವಿಜಯ ಕಲಾ ಅವರನ್ನು ಬಸ್ ತಂಗುದಾಣಕ್ಕೆ ಬಿಟ್ಟು ಬರಲೆಂದು ಅವರ ಪತಿ ಯೋಗೇಂದ್ರ ನಾಗರಬಾವಿ ವೃತ್ತದ ಸರ್ವೀಸ್ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಬಿಬಿಎಂಪಿ ಟಿಪ್ಪರ್, ಈ ವಾಹನಕ್ಕೆ ಗುದ್ದಿತ್ತು. ಅಪಘಾತದಲ್ಲಿ ಯೋಗೇಂದ್ರ ಅವರಿಗೂ ಗಾಯ ವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸೆಗೆ ಸ್ಪಂದಿಸದೇ ವಿಜಯಕಲಾ ಮಧ್ಯಾಹ್ನ ಅಸುನೀಗಿದ್ದಾರೆ’ ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

ಚಾಲಕ ಪರಾರಿ: ‘ರಸ್ತೆ ದುರಸ್ತಿ ಹಾಗೂ ಇತರೆ ಕಾಮಗಾರಿಗೆ ಕಚ್ಚಾ ಸಾಮಗ್ರಿ ಪೂರೈಸಲು ಟಿಪ್ಪರ್ ಬಳಸಿಕೊಳ್ಳಲಾಗುತ್ತಿತ್ತು. ಶನಿವಾರ ಕೆಲಸದ ಸ್ಥಳಕ್ಕೆ ಟಿಪ್ಪರ್ ಹೊರಟಿದ್ದಾಗ ಅವಘಡ ಸಂಭವಿಸಿದೆ. ಟಿಪ್ಪರ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಶಿಕ್ಷಣ ಸಚಿವರ ವಜಾಕ್ಕೆ ಸಿಎಂಗೆ ಸೂಚಿಸಿ’ – ಪಿ.ಎಂಗೆ ರುಪ್ಸ ಪತ್ರ

ಬೆಂಗಳೂರು: ‘ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ತಪ್ಪು ನಿರ್ಧಾರಗಳು ಮತ್ತು ನಡವಳಿಕೆ ರಾಜ್ಯದ ಶೈಕ್ಷಣಿಕ ಪ್ರಗತಿಗೆ ಮಾರಕವಾಗಿದೆ. ಕನಿಷ್ಠ ಜ್ಞಾನವಿಲ್ಲದ, ವ್ಯಾಪಾರಿ ಮನೋಭಾವದ ಸಚಿವರಿಂದ ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಪತ್ರ ಬರೆದಿದೆ.

‘ತಪ್ಪು ನಿರ್ಧಾರಗಳಿಂದ ಮಕ್ಕಳ ಭವಿಷ್ಯವನ್ನು ಬಲಿ ಕೊಡುವುದು ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ಇದಕ್ಕೆ ಕಾರಣರಾದ ಶಿಕ್ಷಣ ಸಚಿವರನ್ನು ವಜಾ ಮಾಡುವಂತೆ ಮುಖ್ಯಮಂತ್ರಿಗೆ ನಿರ್ದೇಶನ ನೀಡಬೇಕು’ ಎಂದು ಪತ್ರದಲ್ಲಿ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಆಗ್ರಹಿಸಿದ್ದಾರೆ.

‘ಕೋವಿಡ್‌ನಿಂದ ನಷ್ಟವಾದ ಕಲಿಕೆಯನ್ನು ಮತ್ತೆ ತುಂಬಿಸುವ ಕಡೆಗೆ ಗಮನಕೊಡುವುದು ಬಿಟ್ಟು, ಪಠ್ಯ ಪರಿಷ್ಕರಣೆಯಂಥ ಗೊಂದಲಕ್ಕೆ ಸಚಿವರು ಕಾರಣರಾಗಿದ್ದಾರೆ. ಶೈಕ್ಷಣಿಕ ದಾಖಲಾತಿ ಯೋಜನೆ ರೂಪಿಸದ ಕಾರಣ ಸುಮಾರು 10 ಲಕ್ಷ ಮಕ್ಕಳು ಶಾಲೆ ಬಿಟ್ಟು ಬೀದಿಪಾಲಾಗಿದ್ದಾರೆ. ಹಿಜಾಬ್ ವಿವಾದದಿಂದಾಗಿ ಮಕ್ಕಳಲ್ಲಿ ಸಾಮರಸ್ಯ, ಸಮಬಾಳ್ವೆ, ಕೂಡಿ ಕಲಿಯುವಿಕೆಗೆ ಅಡ್ಡಿ ಆಗಿದೆ’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಪ್ರತಿವರ್ಷ ಶಾಲೆಗಳ ಮಾನ್ಯತೆ ನವೀಕರಣ, ಶಾಲಾ ಕಟ್ಟಡಗಳ ದಕ್ಷತೆ ಮತ್ತು ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮದಿಂದ ಬಜೆಟ್ ಶಾಲೆಗಳು ಸಂಕಷ್ಟ ಅನುಭವಿಸುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಯಾವುದೇ ಪೂರ್ವ ತಯಾರಿ ಆಗಿಲ್ಲ. ಶಾಲೆ ಆರಂಭವಾಗಿ ಎರಡು ತಿಂಗಳಾದರೂ ಸಮವಸ್ತ್ರ, ಸೈಕಲ್, ಪಠ್ಯ ಪುಸ್ತಕ ನೀಡದೆ, ಸಚಿವರು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ’ ಎಂದೂ ಪತ್ರದಲ್ಲಿ ಅವರು ದೂರಿದ್ದಾರೆ.

ಕಲುಷಿತ ನೀರು: ಯುವಕ ಸಾವು

ಜಗಳೂರು: 15 ದಿನಗಳ ಹಿಂದೆ ಕಲುಷಿತ ನೀರು ಸೇವಿಸಿ ಅಸ್ವಸ್ಥನಾಗಿದ್ದ ತಾಲ್ಲೂಕಿನ ಕಾನನಕಟ್ಟೆ ಗ್ರಾಮದ ಯುವಕ ರಮೇಶ್ (25) ಜಿಲ್ಲಾ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ.

ಕೆಲವು ದಿನಗಳಿಂದ ಗ್ರಾಮದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಒಡೆದು ನೀರು ಕಲುಷಿತವಾಗಿ ಗ್ರಾಮದ ಬಹುತೇಕ ಜನರು ಜ್ವರದಿಂದ ಬಳಲುತ್ತಿದ್ದರು. ಆರೋಗ್ಯ ಇಲಾಖೆ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿ ಚಿಕಿತ್ಸೆ ನೀಡಿದ್ದರು.

ಇಸ್ಪೀಟ್ ದಂಧೆ ಪ್ರಕರಣ: ಶಾಸಕರಿಂದ ಮಾನನಷ್ಟ ಮೊಕದ್ದಮೆಯ ಎಚ್ಚರಿಕೆ

ನೆಲಮಂಗಲ: ’ಇಸ್ಪೀಟ್ ದಂಧೆಗೆ ನಾನು ಸಹಕರಿಸುತ್ತಿದ್ದೇನೆ ಎಂದು ಆರೋಪಿ ಸುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ‘ ಎಂದು ಶಾಸಕ ಡಾ.ಕೆ. ಶ್ರೀನಿವಾಸಮೂರ್ತಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಮ್ಮ ವಿರುದ್ಧ ಹೇಳಿಕೆ ನೀಡಿದವರ ವಿರುದ್ಧ ಎಸ್‌ಪಿಗೆ ದೂರು ನೀಡಿ, ಗೃಹ ಸಚಿವರನ್ನು ಭೇಟಿ ಮಾಡಿ ಕ್ರಮಕ್ಕೆ ಆಗ್ರಹಿಸುವುದಾಗಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

’ಜೆಡಿಎಸ್ ಪುಂಡರಿಂದ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಬಂಧಿತ ಆರೋಪಿಗಳಲ್ಲಿ ಮೂವರು ಸ್ಥಳೀಯರು. ಪ್ರಮುಖ ಆರೋಪಿ ಹನುಮಂತರಾಜು ಹಿಂದೆ ಜೆಡಿಎಸ್‌ನಲ್ಲಿದ್ದರು. ಕಾಂಗ್ರೆಸ್ ಟಿಕೆಟ್ ಪಡೆದು ಪುರಸಭೆ ಚುನಾವಣೆಗೆ ಸ್ಪರ್ಧಿಸಿದ್ದರು. ಕಳೆದ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗೆ ಸಹಕರಿಸಿದ್ದಾರೆ ಅಷ್ಟೆ. ಈಗ ಜೆಡಿಎಸ್‌ನಲ್ಲಿ ಇಲ್ಲ‘ ಎಂದು ಸ್ಪಷ್ಟನೆ ನೀಡಿದ್ದಾರೆ.



ಶ್ರೀನಿವಾಸ ಮೂರ್ತಿ



ಕೌಶಲಕೆ ತೆರೆದುಕೊಳ್ಳಿ ಬದುಕಲ್ಲಿ ಪಾಸಾಗಿ

ಗುರುರಾಜ್ ಎಸ್. ದಾವಣಗೆರೆ

ಪಿಯುಸಿ ಫೇಲಾಗಿದ್ದೀರಾ ? ಪೂರಕ ಪರೀಕ್ಷೆ ಬರೆಯೋದು, ಬರೆದರೂ ಪಾಸಾಗೋದು ಅನುಮಾನವೇ ? ಚಿಂತಿಸಬೇಡಿ. ಇಷ್ಟಕ್ಕೆ ಬದುಕಿನ ದಾರಿ ಮುಗಿಯಿತೆಂದು ಹತಾಶರಾಗಬೇಡಿ. ನಿಮ್ಮಂಥವರ ನೆರವಿಗಾಗಿ ವಿವಿಧ ಕೌಶಲಾಭಿವೃದ್ಧಿ, ವೃತ್ತಿಪರ ತರಬೇತಿ, ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ರೀತಿಯ ವಿವಿಧ ಹಂತಗಳ ಕಲಿಕಾ ಕೋರ್ಸ್‌ಗಳಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸುವ ಶಾಲಾ-ಕಾಲೇಜುಗಳಲ್ಲಿ (ವಿಶೇಷವಾಗಿ ಐಟಿಐ, ಡಿಪ್ಲೊಮಾ ಕಾಲೇಜುಗಳಲ್ಲಿ) ಈ ಕೋರ್ಸ್‌ಗಳೂ ಲಭ್ಯವಿವೆ. ಈ ಕೋರ್ಸ್‌ಗಳಿಗೆ ಸೇರಿ ಓದು ಮುಂದುವರಿಸಬಯಸುವವರಿಗೆವಿಪುಲಅವಕಾಶಗಳಿವೆ.

> ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳು ಬದುಕಿನ ದಾರಿ ಮುಚ್ಚಿತು ಎಂದು ತಿಳಿಯಬೇಕಾಗಿಲ್ಲ. ಈ ಹಂತದಲ್ಲಿ ಪಾಸಾಗದಿದ್ದರೂ, ಕಲಿಯುವುದಕ್ಕೆ ಸಾಕಷ್ಟು 'ಕೌಶಲಾಭಿವೃದ್ಧಿ' ಕೋರ್ಸ್‌ಗಳಿವೆ. ಈ ಕೋರ್ಸ್‌ಗಳು ಕಲಿಸುವದಷ್ಟೇ ಅಲ್ಲದೇ, ಉದ್ಯೋಗದ ಭರವಸೆಯನ್ನೂ ನೀಡುತ್ತವೆ.

ಎಸ್ಸೆಸ್ಸೆಲ್ಸಿಯೇ ಆಧಾರ

ಪಿಯುಸಿಯ ಯಾವುದೇ ವಿಭಾಗದಲ್ಲಿ ಫೇಲ್ ಆಗಿದ್ದರೂ ಎಸ್ಸೆಸ್ಸೆಲ್ಸಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ನಡೆಸುವ ಕೌಶಲ ಅಭಿವೃದ್ಧಿ ಕೋರ್ಸ್‌ಳಿಗೆ ದಾಖಲಾತಿ ಪಡೆಯಬಹುದು.

ಭಾರತದ ಅನೇಕ ನವೋದ್ಯಮ (start up)ಗಳು ಡಿಪ್ಲೊಮಾ ಕಲಿತವರಿಂದಲೇ ಪ್ರಾರಂಭವಾಗಿವೆ. ಹೆಚ್ಚಿನ ಸಂಬಳ ಬಯಸುವ ಎಂಜಿನಿಯರಿಂಗ್ ಪದವಿಧರರ ಬದಲಾಗಿ ಡಿಪ್ಲೊಮಾ ಕೋರ್ಸ್ ಮುಗಿಸಿದವರನ್ನು ಸೇರಿಸಿಕೊಂಡು ಹೆಚ್ಚಿನ ಉತ್ಪಾದನೆ ಮತ್ತು ಲಾಭ ಮಾಡಿಕೊಂಡ ಅನೇಕ ನವೋದ್ಯಮಗಳು ನಮ್ಮಲ್ಲಿವೆ. ಸಾಗರ ತಂತ್ರಜ್ಞಾನ (Marine engineering) ವಿಭಾಗದ ಡಿಪ್ಲೊಮಾ ಕೋರ್ಸ್‌ಗಳಿಗೆ ಭಾರಿ ಬೇಡಿಕೆ ಇದೆ. ಈ ಕೋರ್ಸ್‌ಗಳನ್ನು ಮುಗಿಸಿದ ಬಹುತೇಕರಿಗೆ ಉತ್ತಮ ವೇತನದ ಕೆಲಸಗಳಿವೆ. ಸಾಗರ ತಂತ್ರಜ್ಞಾನ, ವೈರ್ ಮ್ಯಾನ್, ವೆಲ್ಡರ್, ನಾವಿಕರ ಕೌಶಲ ಕಲಿಯುವ ಯುವಕ-ಯುವತಿಯರಿಗೆ ಭಾರತೀಯ ನೌಕಾಸೇನೆ , ಖಾಸಗಿ ನೌಕಾ ಉದ್ಯಮ, ತೈಲ ಸಂಸ್ಕರಣ ಉದ್ಯಮ , ತೈಲ ಸಂಸ್ಕರಣೆ, ಸಾಗರ ಪ್ರವಾಸೋದ್ಯಮ, ಬಂದರು ನಿರ್ಮಾಣ, ಪ್ಯಾಕಿಂಗ್ ಕ್ಷೇತ್ರಗಳಲ್ಲಿ ಹಲವು ಹಂತದ ಉದ್ಯೋಗಗಳು ಇವೆ. ಆರು ತಿಂಗಳಿನಿಂದ ಎರಡು ವರ್ಷಗಳವರೆಗಿನ ಅವಧಿಯ ಕೋರ್ಸ್‌ಗಳು, ಪ್ರಸ್ತುತ ಕೈಗಾರಿಕಾ ಕ್ಷೇತ್ರಕ್ಕೆ ಅಗತ್ಯವಾದ ಕೌಶಲ ಕಲಿಸಿ ನಿಶ್ಚಿತ ಉದ್ಯೋಗಗಳನ್ನು ದೊರಕಿಸಿ ಕೊಡುತ್ತವೆ.

ಸದಾ ಕೈಹಿಡಿಯುವ 'ಕಂಪ್ಯೂಟರ್'

ಮಾಹಿತಿ ತಂತ್ರಜ್ಞಾನ , ಕಂಪ್ಯೂಟರ್ ಹಾರ್ಡ್ ಅಂಡ್ ಸಾಫ್ಟ್‌ವೇರ್ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಿರುವುದರಿಂದ ಕಂಪ್ಯೂಟರ್ ಹಾರ್ಡ್‌ವೇರ್, ನೆಟ್‌ವರ್ಕಿಂಗ್ , ಪ್ರೊಗ್ರಾಮಿಂಗ್, ವೆಬ್ ಡಿಸೈನಿಂಗ್, ಗ್ರಾಫಿಕ್ಸ್, ಡಿಜಿಟಲ್ ಮಾರ್ಕೆಟಿಂಗ್, ಮಷಿನ್ ಲರ್ನಿಂಗ್, ಎಥಿಕಲ್ ಹ್ಯಾಕಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಸೈಬರ್ ಸೆಕ್ಯೂರಿಟಿ , ಡೇಟಾ ಕಲೆಕ್ಷನ್ ಅಂಡ್ ಪ್ರೊಸೆಸಿಂಗ್, ಐ ಓಟಿ (ಇಂಟರ್ನೆಟ್ ಆಫ್ ಥಿಂಗ್ಸ್), 4 ಜಿ, 5ಜಿ ವೈರ್‌ಲೆಸ್ ಮತ್ತು ಕೇಬಲ್ ನೆಟ್‌ವರ್ಕ್ ಸಂಬಂಧಿತ ಕೋರ್ಸ್ ಕಲಿತವರಿಗೆ ಲಕ್ಷಾಂತರ ಉದ್ಯೋಗ ಅವಕಾಶಗಳಿವೆ. ಡೇಟಾ ಸೈನ್ಸ್ , ಸೈಬರ್ ಸೆಕ್ಯೂರಿಟಿ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನಿಮೇಷನ್, ಗೇಮಿಂಗ್, ವರ್ಚುಯಲ್ ರಿಯಾಲಿಟಿ (VR) ಮತ್ತು ಆಗ್ಯುಮೆಂಟ್ ರಿಯಾಲಿಟಿ (AR) ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಭಾರಿ ಬೇಡಿಕೆ ಇದೆ. ವಿದ್ಯಾರ್ಥಿಗಳು ಸಂಪಾದಿಸಿದ ಪದವಿಗಿಂತ ಕೌಶಲವೇ ಮುಖ್ಯವಾಗುವುದರಿಂದ ಎಸ್ಸೆಸ್ಸೆಲ್ಸಿ ಮುಗಿಸಿದವರು ಮತ್ತು ಪಿಯುಸಿ ಫೇಲಾದವರಿಗೂ ಹೆಚ್ಚಿನ ಅವಕಾಶಗಳು ತೆರೆದಿವೆ.

'ಅಗ್ನಿಪಥ'ದಲ್ಲೂ ಅವಕಾಶ

ಕೇಂದ್ರ ಸರ್ಕಾರದ ನೂತನ ಯೋಜನೆ 'ಅಗ್ನಿಪಥ'ದ ಮೂಲಕ ಭಾರತದ ಮೂರೂ ಸೇನಾ ವಿಭಾಗಗಳ ತಾಂತ್ರಿಕೇತರ(ನಾನ್ ಟೆಕ್ನಿಕಲ್) ವಿಭಾಗಗಳಲ್ಲಿ ಸೇವೆ ಸಲ್ಲಿಸಲು ಎಸ್ಸೆಸ್ಸೆಲ್ಸಿ ಪಾಸಾದ ಆದರೆ ಪಿಯುಸಿ ಪಾಸಾಗದ ವಿದ್ಯಾರ್ಥಿಗಳಿಗೆ ನೇರ ಅವಕಾಶವಿದೆ. ಇದೇ ಸೆಪ್ಟೆಂಬರ್ ತಿಂಗಳಿನಿಂದ ಪ್ರವೇಶ ಪ್ರಕ್ರಿಯೆ ಆರಂಭ. ಊಟ-ವಸತಿ, ವೇತನದ ಸೌಲಭ್ಯಗಳೊಂದಿಗೆ ನಾಲ್ಕು ವರ್ಷಗಳ ಸೇನಾ ತರಬೇತಿಯೂ ಸಿಗುತ್ತದೆ. ನಂತರ ತರಬೇತಿ ಅವಧಿಯಲ್ಲಿನ ಫರ್ಮಾರ್ಮೆನ್ಸ್ ಚೆನ್ನಾಗಿದ್ದರೆ, ಕಾಯಂ ನೇಮಕಾತಿಯಾಗಿ, ದೇಶಸೇವೆ ಸಲ್ಲಿಸುವ ಸುವರ್ಣ ಅವಕಾಶವೂ ಸಿಗಲಿದೆ.

ಪ್ರಜಾವಾಣಿ ನೋಡಿಯೊ

ಐಟಿಐಗಳಲ್ಲಿರುವ ಹೊಸ ಕೌಶಲ ಅಭಿವೃದ್ಧಿ ಕೋರ್ಸ್‌ಗಳ ಕುರಿತು ಉದ್ಯೋಗ ಮತ್ತು ತರಬೇತಿ ಇಲಾಖೆಯ ನಿರ್ದೇಶಕ ಯೋಗೇಶ್ವರ್ ಅವರೊಂದಿಗೆ ಇತ್ತೀಚೆಗೆ ನಡೆಸಿದ 'ಪ್ರಜಾವಾಣಿ- ಫೇಸ್‌ಬುಕ್ ಲೈವ್' ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ

ಕೌಶಲ ಅಭಿವೃದ್ಧಿ ಎಂಬ ಆಪದ್ಬಾಂದವ


ದೇಶದ ಯುವಜನರಿಗಾಗಿ ನ್ಯಾಷನಲ್ ಸ್ಕಿಲ್ ಕ್ವಾಲಿಫಿಕೇಷನ್ ಫ್ರೇಂವರ್ಕ್ (NSQF) ರೂಪಿಸಿದ್ದು ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಮತ್ತು ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಹತ್ತು ಹಂತಗಳ ಕೌಶಲ ತರಬೇತಿ ಕೋರ್ಸ್‌ಗಳನ್ನು ಪ್ರಾರಂಭಿಸಿದೆ. ಎಸ್ಸೆಸ್ಸೆಲ್ಸಿ ಪಾಸಾದ ಮತ್ತು ಪಿಯುಸಿ ಫೇಲ್ ಆದ ವಿದ್ಯಾರ್ಥಿಗಳು ಅಗ್ನಿಶಾಮಕ ಮತ್ತು ಸುರಕ್ಷತೆ, ಫಿಟ್ಟರ್, ಟರ್ನರ್, ವೆಲ್ಡರ್, ಎಲೆಕ್ಟ್ರೀಷಿಯನ್, ಪ್ಲಂಬರ್ ,ಪ್ರಿಂಟರ್, ಸರ್ವೆಯರ್, ಅನಿಮೇಟರ್, ಕಂಟೆಂಟ್ ರೈಟರ್, ಪಾಡ್ ಕಾಸ್ಟರ್, ರೇಡಿಯೊ ಅನೌನ್ಸರ್, ಫೋಟೊಗ್ರಾಫರ್, ಪ್ಯಾರಾಮೆಡಿಕಲ್ ಹೆಲ್ಪರ್, ಕೋವಿಡ್ ವಾರಿಯರ್ ನಂತಹ ಹಲವು ಕೋರ್ಸ್ ಸೇರಿ ಕೌಶಲ ಸಂಪಾದಿಸಿ ಉದ್ಯಮಗಳನ್ನು ಸೇರಿ ದುಡಿಯಲು ಪ್ರಾರಂಭಿಸಬಹುದು.

ಐಟಿಐ- ಹೊಸ ಕೋರ್ಸ್‌ಗಳು

ರಾಜ್ಯ ಸರ್ಕಾರದ ಉದ್ಯೋಗ ಮತ್ತು ತರಬೇತಿ ಇಲಾಖೆಯಡಿ ಬರುವ ಸರ್ಕಾರಿ ಐಟಿಐ(ಕೈಗಾರಿಕಾ ತರಬೇತಿ ಸಂಸ್ಥೆ) ಗಳಲ್ಲಿ ಹೊಸದಾಗಿ 'ಐಒಟಿ', ರೊಬೊಟಿಕ್ಸ್‌ನಂತಹ ಎಂಜಿನಿಯರಿಂಗ್‌ಗೆ ಸಂಬಂಧಿಸಿದ ಹೊಸ ಕೋರ್ಸ್‌ಗಳನ್ನು ಪರಿಚಯಿಸಿದೆ. ಟಾಟಾ ಟೆಕ್ನಾಲಜೀಸ್ ಕಂಪನಿಯ ಸಹಯೋಗದಲ್ಲಿ 150 ಸರ್ಕಾರಿ ಐಟಿಐಗಳಲ್ಲಿ ಈ ತಂತ್ರಜ್ಞಾನಗಳ ಕಲಿಕಾ ಕೋರ್ಸ್‌ಗಳಿಗಾಗಿ ಪ್ರಯೋಗಾಲಯಗಳನ್ನು (ಟೆಕ್ ಲ್ಯಾಬ್) ಆರಂಭಿಸಿರುವುದಾಗಿ ಇಲಾಖೆಯ ನಿರ್ದೇಶಕರಾದ ಯೋಗೇಶ್ವರ್ ಅವರು ಇತ್ತೀಚೆಗೆ 'ಪ್ರಜಾವಾಣಿ- ಫೇಸ್‌ಬುಕ್ ಲೈವ್' ಕಾರ್ಯಕ್ರಮದಲ್ಲಿ ತಿಳಿಸಿದ್ದರು. ಇಂಥ ಕೋರ್ಸ್‌ಗಳು ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ ಪಡೆಯಲು ನೆರವಾಗುತ್ತವೆ.


ಇದಲ್ಲದೇ, ಕರ್ನಾಟಕ ಕೌಶಲ ಅಭಿವೃದ್ಧಿ ಮಂಡಳಿ(KSDC) ವಿಪ್ರೊ ಮತ್ತು ಜಿ ಇ ಹೆಲ್ತ್ ಕೇರ್ ಉದ್ಯಮಗಳ ಸಹಯೋಗದಲ್ಲಿ ಮೂರು ತಿಂಗಳ ಅವಧಿಯ ಕೋವಿಡ್ ಕ್ರ್ಯಾಶ್ ಕೋರ್ಸ್ ಪ್ರಾರಂಭಿಸಿ ಈಗಾಗಲೇ 20 ಸಾವಿರಕ್ಕೂ ಹೆಚ್ಚು ಎಸ್ಸೆಸ್ಸೆಲ್ಸಿ, ಪಿಯುಸಿ ಹಂತದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದೆ. ಕೋವಿಡ್ ಮತ್ತು ಅಂತಹ ಯಾವುದೇ ಸಾಂಕ್ರಾಮಿಕ ರೋಗವನ್ನು ಎದುರಿಸಲು ಜನಸಾಮಾನ್ಯರಿಗೆ ತಿಳುವಳಿಕೆ ನೀಡಲು ಅರ್ಹ ಅಭ್ಯರ್ಥಿಗಳಿಗೆ ಇಲ್ಲಿ ತಯಾರಿ ನೀಡಲಾಗುತ್ತದೆ. ಯಾವುದೇ ರೀತಿಯ ಆರೋಗ್ಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ನರ್ಸಿಂಗ್ ಶಿಕ್ಷಣದಲ್ಲಿ ಕಲಿಸುವಂತೆ ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಆನ್ ಜಾಬ್ ಟ್ರೈನಿಂಗ್ ನೀಡಲಾಗುತ್ತದೆ . ₹125 ದಿನ ಭತ್ಯೆ ಮತ್ತು ದೂರದೂರಗಳಿಂದ ಜಿಲ್ಲಾಕೇಂದ್ರಕ್ಕೆ ಬರುವವರಿಗೆ ವಸತಿ ಸೌಲಭ್ಯ ನೀಡಿ ರೋಗಕ್ಕೆ ತುತ್ತಾದವರು ಔಷಧಿಗಳನ್ನು ಹೇಗೆ ಸೇವಿಸಬೇಕು, ಲಘು ವ್ಯಾಯಾಮ ಹೇಗೆ ಮಾಡಬೇಕು, ತುರ್ತು ಚಿಕಿತ್ಸೆ ಹೇಗೆ ನೀಡಬೇಕು , ಸೋಂಕು ಮರುಕಳಿಸದಂತೆ ಹೇಗೆ ಜಾಗೃತಿ ವಹಿಸಬೇಕು ಎಂಬುದನ್ನು ಕಲಿಸಲಾಗುತ್ತದೆ. ತರಬೇತಿ ಪಡೆದುಕೊಂಡವರು ಆಸ್ಪತ್ರೆಗಳಲ್ಲಿ ನರ್ಸ್ ಮತ್ತು ವೈದ್ಯರ ಸಹಾಯಕರಾಗಿ ಕೆಲಸ ಸಂಪಾದಿಸಿ ಬದುಕು ರೂಪಿಸಿಕೊಳ್ಳಬಹುದು.

ಕೌಶಲಾಭಿವೃದ್ಧಿ ಕುರಿತ ಕೋರ್ಸ್‌ಗಳ ಹೆಚ್ಚಿನ ಮಾಹಿತಿಗಾಗಿ ಈ ಲಿಂಕ್‌ಗಳನ್ನು ನೋಡಿ: nsqf.ugc.ac.in ಮತ್ತು ncvet.gov.in



ಕಲಾ ವಿಭಾಗ: ಪಿಯು ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಪಿಯುಸಿ (ಕಲಾ ವಿಭಾಗ) ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ. ಮುಂದೆ ಮಾಡಬಹುದಾದ ಕೋರ್ಸ್‌ಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಕಲಾ ವಿಭಾಗದಲ್ಲಿ, ಬೇರೆ ವಿಭಾಗಗಳಿಗಿಂತ ಅವಕಾಶಗಳು ಕಡಿಮೆ ಎನ್ನುವ ತಪ್ಪು ಅಭಿಪ್ರಾಯ ಹಲವರಲ್ಲಿದೆ. ಆದರೆ, ಈಗ ಕಲಾ ವಿಭಾಗ ಸೇರಿದಂತೆ, ಸ್ಟೀಮ್ (STEAM-ಸೈನ್ಸ್, ಟೆಕ್ನಾಲಜಿ, ಎಂಜಿನಿಯರಿಂಗ್, ಆರ್ಟ್ಸ್ ಮತ್ತು ಮ್ಯಾಥಮ್ಯಾಟಿಕ್ಸ್) ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ಇದೆ. ಪಿಯುಸಿ ನಂತರ, ಬಿಎ ಪದವಿಯನ್ನು ಅನೇಕ ವಿಷಯಗಳಲ್ಲಿ ಮಾಡಬಹುದು. ಉದಾಹರಣೆಗೆ, ಕನ್ನಡ, ಇಂಗ್ಲಿಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಚರಿತ್ರೆ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಮನೋವಿಜ್ಞಾನ, ಮಾನವಶಾಸ್ತ್ರ, ಪುರಾತತ್ವ ಶಾಸ್ತ್ರ, ಪರಿಸರ ವಿಜ್ಞಾನ, ಪತ್ರಿಕೋದ್ಯಮ, ಲಲಿತಕಲೆ, ಹೋಟೆಲ್ ಮ್ಯಾನೇಜ್‌ಮೆಂಟ್, ಟೂರಿಸಮ್ ಇತ್ಯಾದಿ. ಹಾಗೂ, ಯಾವುದಾದರೂ ವಿಷಯದಲ್ಲಿ ವಿಶೇಷವಾದ ಆಸಕ್ತಿಯಿದ್ದಲ್ಲಿ, ಬಿಎ(ಆನರ್ಸ್) ಮಾಡಬಹುದು.

ಕಲಾ ವಿಭಾಗದಲ್ಲಿ ಪಿಯುಸಿ ನಂತರ ಮಾಡಬಹುದಾದ ಇನ್ನಿತರ ಪ್ರಮುಖ ಕೋರ್ಸ್‌ಗಳೆಂದರೆ ಬಿಬಿಎ, ಬಿಕಾಂ/ಬಿಸಿಎ(ಕೆಲವು ವಿಶ್ವವಿದ್ಯಾಲಯಗಳಲ್ಲಿ), ಬಿಎಸ್‌ಡಬ್ಲ್ಯು, ಬಿ.ಡಿಸೈನ್, ಎಲ್‌ಎಲ್‌ಬಿ (ಇಂಟಿಗ್ರೇಟೆಡ್), ಸಿಎ, ಸಿಎಸ್, ಐಎಎಸ್ (ಪದವಿಯ ನಂತರ) ಇತ್ಯಾದಿ. ಇದಲ್ಲದೆ, ನಿಮ್ಮ ಆಸಕ್ತಿ ಮತ್ತು ಅವಶ್ಯಕತೆಗೆ ತಕ್ಕಂತೆ ಅಲ್ಪಾವಧಿ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್‌ಗಳನ್ನೂ ಮಾಡಬಹುದು. ವಿಶೇಷವಾಗಿ, ಆನ್‌ಲೈನ್ ಮತ್ತು ದೂರಶಿಕ್ಷಣದ ಮುಖಾಂತರ ಪದವಿ ಕೋರ್ಸ್ ಸೇರಿದಂತೆ ಹಲವಾರು ಕೋರ್ಸ್‌ಗಳನ್ನು ಮಾಡಬಹುದು. ಹಾಗಾಗಿ, ಕಲಾ ವಿಭಾಗ ಅತ್ಯಂತ ವಿಸ್ತಾರವಾದ ಕ್ಷೇತ್ರ. ಹೆಚ್ಚಿನ ಮಾಹಿತಿಗಾಗಿ, ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಿ.

ಕಲಿಕೆಗೆ ಬೇಕು 'ಅಡೆಪ್ಟ್'

ಆರ್. ಬಿ. ಗುರುಬಸವರಾಜ

ಕಲಿತಿದ್ದು ನೆನಪಿನಲ್ಲಿ ಉಳಿಯದಿದ್ದಾಗ, ಪದೇ ಪದೇ ಪುಸ್ತಕಗಳನ್ನು ಓದುತ್ತೇವೆ. ವಿದ್ಯಾರ್ಥಿಗಳು ವಿಷಯದ ಕಲಿಕೆ ಕಷ್ಟವಾದಾಗ 'ಕಂಠಪಾಠ' ಮಾಡಿ, ಬಲವಂತವಾಗಿ ನೆನಪಿಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ, ಸುಲಭವಾಗಿ ನೆನಪಿಟ್ಟುಕೊಳ್ಳಲು ನೆರವಾಗುವಂತಹ ಕಲಿಕಾ ತಂತ್ರವೊಂದಿದ್ದರೆ, ಕಲಿಕೆ ಸರಳವಾಗುತ್ತದೆ. ಹೀಗೆ ಕಲಿತಿದ್ದನ್ನು ಸುಲಭವಾಗಿ ಅರ್ಥೈಸುವ ಹಾಗೂ ನೆನಪಿಟ್ಟುಕೊಳ್ಳಲು ನೆರವಾಗುವ ಕಲಿಕಾ ತಂತ್ರಜ್ಞಾನವೇ ಅಡೆಪ್ಟ್(ADEPT). ಅಮೆರಿಕಾದ ಖ್ಯಾತ ಸೈದ್ಧಾಂತಿಕ ಭೌತಶಾಸ್ತ್ರಜ್ಞ ಹಾಗೂ ಶಿಕ್ಷಣ ತಜ್ಞ ರಿಚರ್ಡ್ ಫಿಲಿಪ್ಸ್ ಫೆಯನ್‌ಮನ್ ಅವರು ಈ ಕಲಿಕಾ ತಂತ್ರವನ್ನು ರೂಪಿಸಿದ್ದಾರೆ.



ಏನಿದು ಅಡೆಪ್ಟ್ (ADEPT)?

- A-Analogy(ಸಾದೃಶ್ಯ)
- D-Diagram(ರೇಖಾಚಿತ್ರ)
- E-Example(ಉದಾಹರಣೆ)
- P-Plain Language(ಸರಳ ಭಾಷೆ)
- T-Technical Description(ತಾಂತ್ರಿಕ ವಿವರಣೆ)

ಅಡೆಪ್ಟ್ ಒಂದು ಉತ್ತಮ ಕಲಿಕಾ ಸ್ನೇಹಿ ತಂತ್ರ. ವಿದ್ಯಾರ್ಥಿಗಳು ಹಂತ ಹಂತವಾಗಿ ಕಲಿಕೆಯಲ್ಲಿ ಮುಂದುವ ರಿಯಲು ನೆರವಾಗುತ್ತದೆ. ಕಂಠಪಾಠ ಪದ್ಧತಿಗೆ ವಿದಾಯ ಹೇಳಿ, ತಾಂತ್ರಿಕ ವಿವರಣೆಗಳ ಮೂಲಕ ಅಭ್ಯಾಸ ಮಾಡುವುದೇ ಇದರ ಉದ್ದೇಶ. ಪರಿಕಲ್ಪನೆಯನ್ನು(Concept) ಸಂಪೂರ್ಣವಾಗಿ ಅರ್ಥೈಸಿಕೊಂಡರೆ, ಎಂತಹ ಸಮಸ್ಯೆಯನ್ನಾದರೂ ಸುಲಭವಾಗಿ ಪರಿಸಹರಿಸಿಕೊಳ್ಳಲು ಸಾಧ್ಯವಿದೆ. ಪರಿಕಲ್ಪನೆಯನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ಈ ಕಲಿಕಾ ತಂತ್ರಗಾರಿಕೆ ಪ್ರಮುಖ ಪಾತ್ರವಹಿಸುತ್ತದೆ. ಇದು ಕೇವಲ ಶೈಕ್ಷಣಿಕ ಹಂತ ದಾಟಲು ಮಾತ್ರವಲ್ಲ, ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಹ ಅನ್ವಯವಾಗುತ್ತದೆ.

ಅಡೆಪ್ಟ್ – ಪ್ರಯೋಜನಗಳು

- ಕಲಿಯುತ್ತಿರುವ ಯಾವುದೇ ವಿಷಯದ ಬಗ್ಗೆ ನಿಜವಾದ ತಿಳಿವಳಿಕೆಯನ್ನು ಅಭಿವೃದ್ಧಿಪಡಿಸಲು ಇದು ಸಹಾಯ ಮಾಡುತ್ತದೆ.
- ಬುದ್ಧಿವಂತ ಮತ್ತು ತಾರ್ಕಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗುತ್ತದೆ.
- ಕಲಿಕೆ ಮತ್ತು ಬೋಧನಾ ಕೌಶಲಗಳನ್ನು ಸುಧಾರಿಸಬಹುದು.
- ವಿಮರ್ಶಾತ್ಮಕ ಚಿಂತನೆಯ ಸಾಮರ್ಥ್ಯವನ್ನು ಸುಧಾರಿಸಲು ಸಾಧ್ಯವಿದೆ.

ಸಾದೃಶ್ಯದೊಂದಿಗೆ ಪ್ರಾರಂಭಿಸಿ

ಯಾವುದೇ ಹೊಸ ಪರಿಕಲ್ಪನೆಯನ್ನು ಕಲಿಯುವ ಮೊದಲು ನಿಮಗೆ ತಿಳಿದಿರುವ ಕಲಿಕೆಯೊಂದಿಗೆ ಹೋಲಿಸಿಕೊಳ್ಳಿ. ಉದಾಹರಣೆಗೆ ನರಕೋಶದ ಕಾರ್ಯಗಳ ಬಗ್ಗೆ ತಿಳಿಯಬೇಕಾಗಿದೆ ಎಂದುಕೊಳ್ಳೋಣ. ಇದಕ್ಕೆ ಪೂರಕವಾಗಿ ಈಗಾಗಲೇ ಸಾರಿಗೆ ಸಂಪರ್ಕ ವ್ಯವಸ್ಥೆಯ ಬಗ್ಗೆ ನಮಗೆ ತಿಳಿದಿದೆ. ಸಾರಿಗೆ ವ್ಯವಸ್ಥೆಗಳು ಜನರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ರೀತಿಯಲ್ಲಿಯೇ ನರಕೋಶಗಳು ಒಂದು ನಿರ್ದಿಷ್ಟ ನರಕೋಶದಿಂದ ಇನ್ನೊಂದಕ್ಕೆ ಸಂದೇಶಗಳನ್ನು ಸಾಗಿಸುತ್ತವೆ. ಇವೆರಡನ್ನೂ ಹೋಲಿಕೆ ಮಾಡಿಕೊಂಡಾಗ ಕಲಿಕೆ ಸುಗಮವಾಗುತ್ತದೆ ಮತ್ತು ಪರಿಕಲ್ಪನೆ ಸ್ಪಷ್ಟವಾಗುತ್ತದೆ.

ರೇಖಾಚಿತ್ರವನ್ನು ಬಳಸಿ

ಪರಿಕಲ್ಪನೆ ವಿವರಿಸಲು ಸೂಕ್ತ ಪದಗಳು ಲಭ್ಯವಾಗದಿದ್ದರೆ ಚಿತ್ರದ ಮೂಲಕ ತಿಳಿಸಿ. ಪರಿಕಲ್ಪನೆಯ ಸ್ಪಷ್ಟ ಸಂವಹನಕ್ಕಾಗಿ ರೇಖಾಚಿತ್ರವನ್ನು ಬಳಸಬಹುದು. ಜೀವಕೋಶಗಳು, ಜೀರ್ಣಕ್ರಿಯೆಗಳು, ರಕ್ತಪ್ರವಾಹ, ವಿವಿಧ ದೇಶಗಳ ಮಾಹಿತಿ ತಿಳಿಯುವಾಗ ರೇಖಾಚಿತ್ರ ಬಳಸಿಕೊಂಡರೆ ಬೇಗನೆ ಅರ್ಥವಾಗುತ್ತದೆ. ಈ ಚಿತ್ರಗಳ ಬಳಕೆಯಿಂದ ನಾವು ಹೊಸ ಮತ್ತು ಅಮೂರ್ತ ವಿಚಾರಗಳನ್ನು ದೃಶ್ಯೀಕರಿಸಬಹುದು. ಚಿತ್ರಗಳು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ನೆರವಾಗುತ್ತವೆ.

ಉದಾಹರಣೆಗಳು ಮುಖ್ಯ

ಕಲಿಯುವ ವಿಷಯದ ಬಗ್ಗೆ ಗೊಂದಲಗಳಿದ್ದರೆ ಉದಾಹರಣೆಗಳ ಮೂಲಕ ಸುಲಭವಾಗಿ ಪರಿಹಾರ ಕಂಡುಕೊಳ್ಳಬಹುದು. ಗಣಿತದಲ್ಲಿ ಪ್ರಮೇಯಗಳನ್ನು ಕಲಿಯುವಾಗ ಸರಳವಾದ ಚಿತ್ರವನ್ನು ಉದಾಹರಣೆಯಾಗಿ ಬಳಸಿಕೊಂಡಾಗ ಪ್ರಮೇಯವು ಸುಲಭವಾಗಿ ಅರ್ಥವಾಗುತ್ತದೆ. ಅಂತೆಯೇ ವಿಜ್ಞಾನದಲ್ಲಿ ಕಣ್ಣಿಗೆ ಕಾಣದಿರುವ ಅಣು, ಪರಮಾಣು ಮುಂತಾದವುಗಳ ಬಗ್ಗೆ ಕಲಿಯುವಾಗ ಚಿತ್ರಗಳನ್ನು ಉದಾಹರಣೆಯಾಗಿ ಬಳಸಿದರೆ ಕಲಿಕೆ ಉತ್ತಮವಾಗುತ್ತದೆ.

ಸರಳ ಭಾಷೆಯಲ್ಲಿ ವಿವರಿಸಿ

ನೀವು ಕಲಿತ ಪರಿಕಲ್ಪನೆಯನ್ನು ನಿಮ್ಮದೇ ಸರಳ ಭಾಷೆಯಲ್ಲಿ ಬರೆದಿಟ್ಟು ಕೊಳ್ಳಿ. ಇದು ಪರಿಣಾಮಕಾರಿ ಸಂವಹನಕ್ಕೆ ಪೂರಕವಾದದು. ಸಾಧ್ಯವಾದರೆ ಅದನ್ನು ನಿಮಗಿಂತ ಕೆಳಗಿನ ತರಗತಿಯವರಿಗೆ ಕೊಟ್ಟು ಓದಿಸಿ. ಇದು ಪರಿಕಲ್ಪನೆಯನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಮತ್ತು ವಿಷಯವನ್ನು ಸರಳಗೊಳಿಸಲು ಸಹಾಯ ಮಾಡುತ್ತದೆ.

ತಾಂತ್ರಿಕ ವಿವರಣೆ ಇರಲಿ

ಒಮ್ಮೆ ನೀವು ಪರಿಕಲ್ಪನೆಯ ನಿಜವಾದ ತಿಳುವಳಿಕೆಯನ್ನು ಪಡೆದರೆ, ಅದರ ತಾಂತ್ರಿಕ ವಿವರಣೆಯನ್ನು ಅರ್ಥಮಾಡಿಕೊಳ್ಳುವುದು ಅಂತಿಮ ಹಂತವಾಗಿದೆ. ಜಟಿಲವಾದ ಕಲ್ಪನೆಯೊಂದಿಗೆ ಪ್ರಾರಂಭವಾದ ಕಲಿಕೆಯು ತಾಂತ್ರಿಕ ಪದಗಳಿಂದ ಸ್ಪಷ್ಟತೆ ಪಡೆದಾಗ ಮಾತ್ರ ಪರಿಪೂರ್ಣವಾಗುತ್ತದೆ. ಇದಕ್ಕಾಗಿ ಆಯಾ ವಿಷಯದ ಪರಿಭಾಷೆಯಲ್ಲಿಯೇ ಪರಿಕಲ್ಪನೆಯನ್ನು ವಿವರಿಸಬೇಕು.

(ಪ್ರೌಢಶಾಲಾ ಶಿಕ್ಷಕ, ಸ್ಪರ್ಧಾತ್ಮಕ ಪರೀಕ್ಷೆ ತರಬೇತುದಾರ)

(ಮುಂದಿನ ವಾರ: 'ಅಡೆಪ್ಟ್' ತಂತ್ರಗಾರಿಕೆ ಎಲ್ಲೆಲ್ಲಿ ಅಳವಡಿಸಿಕೊಳ್ಳಬಹುದು)

ವಿದ್ಯಾರ್ಥಿ ವೇತನ ಕೈಪಿಡಿ

ಐಇಟಿ ಇಂಡಿಯಾ ಸ್ಕಾಲರ್‌ಶಿಪ್ ಅವಾರ್ಡ್ಸ್ 2022

ವಿವರ: ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ (ಐಇಟಿ), ಪದವಿಪೂರ್ವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಅವರ ಸೃಜನಶೀಲತೆ, ನಾವೀನ್ಯತೆ, ನಾಯಕತ್ವ ಮತ್ತು ಶ್ರೇಷ್ಠತೆಯನ್ನು ಪುರಸ್ಕರಿಸಲು ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಭವಿಷ್ಯದ ಎಂಜಿನಿಯರ್ ಲೀಡರ್‌ಗಳನ್ನು ಗುರುತಿಸುವ ಉದ್ದೇಶ ವಿದ್ಯಾರ್ಥಿವೇತನದ್ದಾಗಿದೆ.

ಅರ್ಹತೆ: ಎಐಸಿಟಿಇ / ಯುಜಿಸಿ ಅನುಮೋದಿತ ಸಂಸ್ಥೆಯಲ್ಲಿ ಪೂರ್ಣ ಸಮಯದ ನಿಯಮಿತ ಪದವಿಪೂರ್ವ ಎಂಜಿನಿಯರಿಂಗ್ (ಯಾವುದೇ ಕ್ಷೇತ್ರದಲ್ಲಿ) 1,2,3 ಮತ್ತು 4ನೇ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

2ನೇ ವರ್ಷದಲ್ಲಿ ಬಿ.ಟೆಕ್ ಕೋರ್ಸ್‌ಗೆ ಸೇರುವ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನ ಮುಕ್ತವಾಗಿದೆ. ಅವರು ಒಂದೇ ಪ್ರಯತ್ನದಲ್ಲಿ ಎಲ್ಲಾ ಸಾಮಾನ್ಯ ಕ್ರೆಡಿಟ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿರಬೇಕು. ಅರ್ಜಿದಾರರು ಇಲ್ಲಿಯವರೆಗೆ ತೆರವುಗೊಳಿಸಿದ ಸೆಮಿಸ್ಟರ್‌ಗಳಲ್ಲಿ 10-ಪಾಯಿಂಟ್ ಸ್ಕೇಲ್‌ನಲ್ಲಿ ಕನಿಷ್ಠ 6.5ರ ಒಟ್ಟು ಅಥವಾ ಸಮಾನವಾದ ಸಿಜಿಪಿಎ ಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು.

ಆರ್ಥಿಕ ನೆರವು: ₹ 10,00,000 ಮೌಲ್ಯದ ಸ್ಕಾಲರ್‌ಶಿಪ್ಸ್

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಅರ್ಜಿ ಸಲ್ಲಿಕೆಗೆ ಕೊನೆದಿನ: 01-08-2022

ಹೆಚ್ಚಿನ ಮಾಹಿತಿಗೆ: www.b4s.in/praja/IET2

ಕೃಪೆ:buddy4study.com



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಶಸ್ಸಿಗೆ ಇರುವ ಪ್ರಮುಖ ಕೀಲಿಕೈ ಎಂದರೆ ಆತ್ಮವಿಶ್ವಾಸ. ಆತ್ಮವಿಶ್ವಾಸ ಹೊಂದುವುದಕ್ಕೆ ಇರುವ ಪ್ರಮುಖ ಕೀಲಿಕೈ ಎಂದರೆ ಸಿದ್ಧತೆ. –ಆರ್ಥರ್ ಆ್ಯಷ್

ಮಹಾರಾಷ್ಟ್ರದ ರಾಜಕೀಯ ವಿದ್ಯಮಾನ ರಾಜ್ಯಪಾಲರ ಪಕ್ಷಪಾತಿ ನಿರ್ಧಾರ

ರಾಜ್ಯಪಾಲರು ತಮ್ಮ ರಾಜ್ಯದಲ್ಲಿನ ಚುನಾಯಿತ ಸರ್ಕಾರದ ಜೊತೆ ನಡೆದುಕೊಳ್ಳುವ ರೀತಿಯು ಹಲವು ಬಾರಿ ವಿವಾದ ಸೃಷ್ಟಿಸಿದೆ. ರಾಜ್ಯಪಾಲರ ಕೆಲವು ವರ್ತನೆಗಳು ಸ್ಪಷ್ಟವಾಗಿ ಪಕ್ಷಪಾತಿಯಾಗಿ, ರಾಜಕೀಯ ಪ್ರೇರಿತವಾಗಿ ಇದ್ದ ನಿದರ್ಶನಗಳೂ ಇವೆ. ಅದರಲ್ಲೂ ಮುಖ್ಯವಾಗಿ, ಚುನಾವಣೆ ನಂತರ ಸರ್ಕಾರ ರಚನೆಯ ಸಂದರ್ಭದಲ್ಲಿ ಅಥವಾ ಸರ್ಕಾರವೊಂದಕ್ಕೆ ಬಹುಮತ ನಿಜವಾಗಿಯೂ ಇದೆಯೇ ಎಂಬ ಪ್ರಶ್ನೆ ಬಂದಾಗ ಕೆಲವು ರಾಜ್ಯಗಳ ರಾಜ್ಯಪಾಲರು ನಡೆದುಕೊಂಡ ರೀತಿಯು ವಿವಾದಗಳಿಗೆ ಅತೀತವಾಗಿ ಇರಲಿಲ್ಲ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದ ಜೊತೆ ಒಳ್ಳೆಯ ಸಂಬಂಧ ಹೊಂದಿರುವ ಪಕ್ಷದ ನೇತೃತ್ವದ ಸರ್ಕಾರಗಳನ್ನು ರಕ್ಷಿಸಲು ರಾಜ್ಯಪಾಲರು ಯತ್ನಿಸಿದ ನಿದರ್ಶನಗಳಿವೆ. ಕೇಂದ್ರ ಸರ್ಕಾರದ ಜೊತೆ ಉತ್ತಮ ಸ್ನೇಹ ಸಂಬಂಧ ಹೊಂದಿಲ್ಲದ ಪಕ್ಷಗಳ ನೇತೃತ್ವದ ಸರ್ಕಾರಗಳನ್ನು ಉರುಳಿಸುವ ಯತ್ನಕ್ಕೆ ಬೆಂಬಲವಾಗಬಹುದಾದ ಕೆಲಸ ಮಾಡಿದ್ದೂ ಇದೆ. ಈಚೆಗೆ ಮಹಾರಾಷ್ಟ್ರದಲ್ಲಿ ಶಿವಸೇನಾ ಪಕ್ಷದ ಕೆಲವು ಶಾಸಕರು ಒಟ್ಟಾಗಿ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಆಘಾಡಿ ಸರ್ಕಾರದ ವಿರುದ್ಧ ತಿರುಗಿಬಿದ್ದರು. ಬಿಜೆಪಿ ಜೊತೆ ಸೇರಿ ಹೊಸ ಸರ್ಕಾರ ರಚಿಸಿದರು. ಮಹಾರಾಷ್ಟ್ರದ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಆ ಸಂದರ್ಭದಲ್ಲಿ ಕೈಗೊಂಡ ಕೆಲವು ನಿರ್ಧಾರಗಳು ಪಕ್ಷಪಾತಿತನದಿಂದ ಕೂಡಿದ್ದವು. ಆ ನಿರ್ಧಾರಗಳು ಭಿನ್ನಮತೀಯ ಶಾಸಕರಿಗೆ ಪ್ರಮುಖ ಸಂದರ್ಭಗಳಲ್ಲಿ ಮಹತ್ವದ ನೆರವು ಒದಗಿಸಿದವು. ಅವರ ನಿರ್ಧಾರಗಳ ಪೈಕಿ ಎರಡು ಬಹಳ ಮುಖ್ಯವಾಗಿ ಕಾಣಿಸುತ್ತವೆ.



ಶಿವಸೇನಾದ ಭಿನ್ನಮತೀಯರು ಮತ್ತು ಬಿಜೆಪಿಗೆ ನೆರವಾಗಲು ರಾಜ್ಯಪಾಲರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ

ಜೂನ್ 29ಕ್ಕೆ ವಿಧಾನಸಭೆಯ ಅಧಿವೇಶನ ಕರೆದು, ವಿಶ್ವಾಸಮತ ಯಾಚನೆ ನಡೆಸಬೇಕು ಎಂದು ರಾಜ್ಯಪಾಲರು ಹೇಳಿದ್ದು ಆ ಎರಡು ತೀರ್ಮಾನಗಳ ಪೈಕಿ ಮೊದಲನೆಯದು. ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂದಕ್ಕೆ ಪಡೆಯುತ್ತಿರುವುದಾಗಿ ಭಿನ್ನಮತೀಯ ಶಾಸಕರು ತಮಗೆ ತಿಳಿಸಿದ 24 ಗಂಟೆಗಳ ಒಳಗೆ ರಾಜ್ಯಪಾಲರು ಈ ತೀರ್ಮಾನ ತೆಗೆದುಕೊಂಡರು. ವಿಧಾನಸಭೆಯ ಉಪಾಧ್ಯಕ್ಷ ನರಹರಿ ಜಿರವಾಲ್ ಅವರು ಜೂನ್ 25ರಂದು ನೀಡಿದ್ದ ಅನರ್ಹತೆಯ ನೋಟಿಸ್ ಪ್ರಶ್ನಿಸಿ ಭಿನ್ನಮತೀಯ ಶಾಸಕರು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಹೇಳಿದ್ದರೂ ರಾಜ್ಯಪಾಲರು ಈ ತೀರ್ಮಾನ ಕೈಗೊಂಡರು. ವಿಧಾನಸಭೆ ಉಪಾಧ್ಯಕ್ಷರ ಪದಚ್ಯುತಿಗೆ ನೀಡಿರುವ ನೋಟಿಸ್ ಇತ್ಯರ್ಥವಾಗದೆ ಇದ್ದ ಸಂದರ್ಭದಲ್ಲಿ, ಅನರ್ಹತೆಗೆ ಸಂಬಂಧಿಸಿದಂತೆ ಉಪಾಧ್ಯಕ್ಷರು ಯಾವುದೇ ತೀರ್ಮಾನ ಕೈಗೊಳ್ಳಲು ಅವಕಾಶ ಇಲ್ಲ ಎಂದು ಭಿನ್ನಮತೀಯ ಶಾಸಕರು ವಾದಿಸಿದ್ದರು. ಭಿನ್ನಮತೀಯರು ಮತ್ತು ಇತರರ ಅರ್ಜಿಗಳನ್ನು ಜುಲೈ 11ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಹೇಳಿತ್ತು. ಆ ಹೊತ್ತಿಗೆ ಅರ್ಜಿಗಳೇ ವ್ಯರ್ಥವಾಗುವ ಪರಿಸ್ಥಿತಿ ಸೃಷ್ಟಿಯಾಗಿರುವುದಿಲ್ಲ ಎಂದು ತಾನು ಆಶಿಸುವುದಾಗಿ ಕೋರ್ಟ್ ಹೇಳಿತ್ತು. ಆದರೆ, ಅರ್ಜಿಗಳು ಬಾಕಿ ಇದ್ದ ಹೊತ್ತಿನಲ್ಲಿಯೇ ರಾಜ್ಯಪಾಲರು ಅಧಿವೇಶನ ಕರೆದರು. ರಾಜ್ಯಪಾಲರ ತೀರ್ಮಾನವು ಪರಿಸ್ಥಿತಿಯನ್ನು ಬದಲಾಯಿಸಿತು. ರಾಜ್ಯಪಾಲರು ಕೈಗೊಂಡ ತೀರ್ಮಾನವು ಸರಿಯಲ್ಲ. ಅದು ಭಿನ್ನಮತೀಯ ಶಾಸಕರಿಗೆ ನೆರವು ಕೊಡುವ ಉದ್ದೇಶ ಹೊಂದಿತ್ತು.

ರಾಜ್ಯಪಾಲರ ಎರಡನೆಯ ತೀರ್ಮಾನವು ವಿಧಾನಸಭೆಯ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದ್ದು. ಅಧ್ಯಕ್ಷರ ಆಯ್ಕೆಗೆ ದಿನಾಂಕ ನಿಗದಿ ಮಾಡಲು ಹಿಂದೆ ಒಪ್ಪಿರದಿದ್ದರೂ, ಬಿಜೆಪಿಯ ರಾಹುಲ್ ನಾರ್ವೇಕರ ಅವರು ಅಧ್ಯಕ್ಷರಾಗಿ ಆಯ್ಕೆಯಾಗಲು ರಾಜ್ಯಪಾಲರು ಅವಕಾಶ ಮಾಡಿಕೊಟ್ಟರು. ಅಧ್ಯಕ್ಷರ ಆಯ್ಕೆಗೆ ಚುನಾವಣೆ ದಿನಾಂಕ ನಿಗದಿ ಮಾಡುವ ವಿವೇಚನಾ ಅಧಿಕಾರ ಅಥವಾ ಕಾನೂನಿನ ಅಧಿಕಾರ ರಾಜ್ಯಪಾಲರಿಗೆ ಇಲ್ಲ. ರಾಜ್ಯಪಾಲರು ಸಚಿವ ಸಂಪುಟದ ಸಲಹೆ ಆಧರಿಸಿ ಆ ತೀರ್ಮಾನ ಕೈಗೊಳ್ಳಬೇಕು. ಚುನಾವಣೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇದೆ ಎಂಬ ಕಾರಣಕ್ಕೆ ರಾಜ್ಯಪಾಲರು ದಿನಾಂಕ ನಿಗದಿ ಮಾಡಲು ಒಪ್ಪಿರಲಿಲ್ಲ. ಆದರೆ, ರಾಜ್ಯಪಾಲರು ತಾವು ಎತ್ತಿದ್ದ ಆಕ್ಷೇಪಗಳನ್ನು, ಬಿಜೆಪಿ ಮತ್ತು ಶಿವಸೇನಾ ಭಿನ್ನಮತೀಯರ ಮೈತ್ರಿ ಸರ್ಕಾರ ರಚನೆಯಾದ ನಂತರ ನುಂಗಿಕೊಂಡರು. ದಿನಾಂಕ ನಿಗದಿ ಮಾಡಿ, ಹೊಸ ಅಧ್ಯಕ್ಷರ ಆಯ್ಕೆಗೆ ನೆರವು ನೀಡಿದರು. ವಿಶ್ವಾಸಮತ ಯಾಚನೆಯ ಪ್ರಕ್ರಿಯೆ ನಡೆಸಲು ಹೊಸ ಸರ್ಕಾರಕ್ಕೆ ಸಭಾಧ್ಯಕ್ಷರ ಅಗತ್ಯವಿತ್ತು. ರಾಜ್ಯಪಾಲರು ತಮ್ಮ ಸಾಂವಿಧಾನಿಕ ಸ್ಥಾನ ಮತ್ತು ಅಧಿಕಾರವನ್ನು ಬಿಜೆಪಿ ಮತ್ತು ಶಿವಸೇನಾ ಭಿನ್ನಮತೀಯರಿಗೆ ನೆರವು ಒದಗಿಸಲು ದುರ್ಬಳಕೆ ಮಾಡಿಕೊಂಡರು. ಆ ಮೂಲಕ, ಸುಪ್ರೀಂ ಕೋರ್ಟ್ ಇನ್ನಷ್ಟೇ ತೀರ್ಮಾನ ಮಾಡಬೇಕಿರುವ ಸಾಂವಿಧಾನಿಕ ಪ್ರಶ್ನೆಗಳನ್ನು ಮತ್ತಷ್ಟು ಸಂಕೀರ್ಣಗೊಳಿಸಿದರು.

ದಿನದ ಟ್ವೀಟ್


ಜೀವನ ಎಂದರೆ...



ಸುಮಾರು ಹತ್ತು ತಿಂಗಳ ಹಿಂದಿನವರೆಗೂ ವಿರಾಟ್ ಕೊಹ್ಲಿ ಅವರು ಮೂರೂ ಮಾದರಿಯ ಕ್ರಿಕೆಟ್ ತಂಡದ ನಾಯಕನಾಗಿ ಭಾರತದ ಕ್ರಿಕೆಟ್ ಮೇಲೆ ಆಧಿಪತ್ಯ ಸ್ಥಾಪಿಸಿದ್ದರು. ಇಂದು, ತಂಡದಲ್ಲಿ ಅವರ ಸ್ಥಾನವೇ ಅತಂತ್ರ ಸ್ಥಿತಿಯಲ್ಲಿದೆ. ಅದೇ ಜೀವನ...

ಸುಮಂತ್ ರಾಮನ್, ವಿಶ್ಲೇಷಕ

ಕಿಡಿನುಡಿ



ರಾಜ್ಯದಲ್ಲಿ ಭಾರಿ ಮಳೆಯಾಗುವುದು ವಾರ್ಷಿಕ ವಿದ್ಯಮಾನ. ವಿವಿಧ ಬಗೆಯ ನೆರವು ಮತ್ತು ಎಕ್ಸ್‌ಗ್ರೇಷಿಯಾವನ್ನು ಆಗ ಘೋಷಿಸಲಾಗುತ್ತದೆ. ಆದರೆ, ದಶಕದಲ್ಲಿ ಒಮ್ಮೆಯೂ ನಡೆಯದ ಸಂಗತಿಗಳೆಂದರೆ, ಭಾರಿ ಮಳೆಗೆ ಸೂಕ್ತ ಸಿದ್ಧತೆ ಮಾಡಿಕೊಳ್ಳುವುದು ಮತ್ತು ಅದು ಉಂಟುಮಾಡುವ ತೀವ್ರ ಹಾನಿಗೆ ಕಾರಣಗಳನ್ನು ಪತ್ತೆಹಚ್ಚಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದು.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 11-7-1997

● **ಕಾವೇರಿ: ನಿಷ್ಪಕ್ಷಪಾತ ಇತ್ಯರ್ಥಕ್ಕೆ ಭರವಸೆ**

ನವದೆಹಲಿ, ಜುಲೈ 10– ಕಾವೇರಿ ನದಿ ನೀರು ಹಂಚಿಕೆ ವಿವಾದವನ್ನು ಯಾವುದೇ ರಾಜ್ಯಗಳಿಗೂ ಅನ್ಯಾಯವಾಗದಂತೆ ಸಮಾನತೆ ಮತ್ತು ನ್ಯಾಯದ ಆಧಾರದ ಮೇಲೆ ಬಗೆಹರಿಸುವ ಪ್ರಯತ್ನ ಮಾಡಲಾಗುವುದು. ಪರಿಹಾರ ಕಂಡುಹಿಡಿಯುವ ಪ್ರಯತ್ನವಾಗಿ ತಮಿಳುನಾಡಿನ ಮುಖ್ಯಮಂತ್ರಿಯ ಜತೆಯೂ ಚರ್ಚಿಸುವುದಾಗಿ ಪ್ರಧಾನಿ ಇಂದರ್ ಕುಮಾರ್ ಗುಜ್ರಾಲ್ ಇಂದು ಕರ್ನಾಟಕಕ್ಕೆ ಭರವಸೆ ನೀಡಿದರು.

ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ವರದಿಯನ್ನು ಜಾರಿಗೆ ತರುವ ಸಂಬಂಧ ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ಕಾವೇರಿ ಪ್ರಾಧಿಕಾರ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಿ ತಮಗೆ ಮನವಿ ಸಲ್ಲಿಸಿದ ಕರ್ನಾಟಕದ ವಿಧಾನಮಂಡಲದಲ್ಲಿನ ಸರ್ವಪಕ್ಷಗಳ ನಾಯಕರ ನಿಯೋಗವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ನೇತೃತ್ವದ ನಿಯೋಗದಲ್ಲಿ ಸಚಿವರು, ವಿವಿಧ ಪಕ್ಷಗಳ ನಾಯಕರು ಮತ್ತು ಸಂಸತ್ ಸದಸ್ಯರು ಇದ್ದರು.

● **ಆಲಮಟ್ಟಿ: ಪರಿಹಾರ ಕಾರ್ಯಕ್ಕೆ ಸಜ್ಜು**

ವಿಜಾಪುರ, ಜುಲೈ 10 –ಇಂದು ಮುಂಜಾನೆ ಬಾಗಲಕೋಟೆಗೆ ಆಗಮಿಸಿದ ಮೇಜರ್ ಮನೋಜ್ ನಾಯರ್ ನೇತೃತ್ವದ ಮಿಲಿಟರಿ ಪಡೆ, ಹಿನ್ನೀರಿನಿಂದ ಮುಳುಗಡೆಯಾಗಲಿರುವ ಪ್ರದೇಶಗಳ ಪರಿಶೀಲನೆಯೊಂದಿಗೆ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದೆ.

ಆಲಮಟ್ಟಿ ಜಲಾಶಯ ಈಗಾಗಲೇ ತುಂಬಿದ್ದು, ನೀರು 512 ಮೀಟರ್‌ಗಿಂತಲೂ ಜಾಸ್ತಿಯಾದಲ್ಲಿ ಘಟಪ್ರಭಾ ನದಿ ಹಿನ್ನೀರಿನ ಹೊಡೆತಕ್ಕೆ ಬಾಗಲಕೋಟೆ ನಗರವೂ ಸೇರಿದಂತೆ ಅನೇಕ ಗ್ರಾಮಗಳು ಮುಳುಗುವ ಹಿನ್ನೆಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ ಮಿಲಿಟರಿ ಪಡೆ ಆಗಮಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 11-7-1972

● **ಈ ಸಂಸ್ಥೆ ‘ಮ್ಯಾಡ್, ಸ್ಟುಪಿಡ್, ರಾಟನ್’**

ಬೆಂಗಳೂರು, ಜುಲೈ 10– ಮ್ಯಾಡ್, ಸ್ಟುಪಿಡ್, ರಾಟನ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್– ಎಂ.ಎಸ್.ಆರ್.ಟಿ.ಸಿ ಬಗ್ಗೆ ವಿಧಾನಸಭೆಯಲ್ಲಿ ಸದಸ್ಯರ ವ್ಯಾಖ್ಯಾನ.

ಹುಚ್ಚು ಹುಡುಗ ಮನೆ ಬಿಟ್ಟರೆ ಯಾವ ಕಡೆ ಹೋಗ್ತಾನೋ ಹಾಗೆ ಬಸ್ಸುಗಳೂ ಹೋಗುತ್ತವೆ. ಅಗತ್ಯವಾದ ಕಡೆ ನಿಲ್ಲದ ವರ್ತನೆ (ಸ್ಟುಪಿಡ್) ರಾಟನ್– ಎಂದೂ ನೈರ್ಮಲ್ಯ ಇಲ್ಲದ ಪರಿಸ್ಥಿತಿ ಎಂಬುದು ಸಂಸ್ಥಾ ಕಾಂಗ್ರೆಸ್‌ನ ಶ್ರೀ ಎಚ್.ಎಸ್.ಸಿದ್ಧಪ್ಪನವರ ವರ್ಣನೆ.

ಎಲ್ಲ ಸಚಿವರು ರಕ್ತ, ಮಾಂಸ ತುಂಬಿಕೊಂಡಿದ್ದರೆ, ಸಾರಿಗೆ ಸಚಿವರ ಮುಖ ಕಳಾವಿಹೀನವಾಗಿದೆ. ಖಾಸಗಿ ಬಸ್‌ಗಳು ಲಾಭ ಮಾಡುತ್ತಿದ್ದರೆ, ಕಾರ್ಪೊರೇಷನ್ನಿಗೆ ನಷ್ಟ ಆಗುತ್ತಿದೆ ಎಂದು ವರ್ಣನೆ. ಸಚಿವರಿಗೆ ಕೆಟ್ಟ ಹೆಸರು ಬರಬೇಕಾದರೆ ಸಾರಿಗೆ ಖಾತೆ ಕೊಡಬೇಕು ಎಂಬ ವ್ಯಂಗ್ಯ. ವರಮಾನ ಸೋರಿ ಹೋಗುತ್ತಿರುವುದರ ಬಗ್ಗೆ ಟೀಕೆ.

‘ರಾಜಕೀಯದಲ್ಲಿ ಓಡಾಡಿ ಇರೋ ತೋಟ ಮಾರಿಕೊಂಡಿದ್ದೀರಿ. ಪಕ್ಕದ ಮನೆಯ ಕಂಡಕ್ಟರ್ ನೋಡಿ, ಹಿಸ್ಸೆ ಆದಾಗ ಐದು ಸಾವಿರ ಸಾಲ ಇದ್ದವನು, ಒಂದು ಮನೆ ಮಾಡಿಕೊಂಡು, ಇಪ್ಪತ್ತು ಸಾವಿರ ವ್ಯವಹಾರ ಮಾಡಿಕೊಂಡಿದ್ದಾನೆ ಅಂತ ನನ್ನ ಪತ್ನಿ ನಿಂದಿಸುತ್ತಾಳೆ. ನನಗೂ ಒಂದು ಕಂಡಕ್ಟರ್ ಕೆಲಸ ಕೊಡಿ’ ಎಂದು ವ್ಯಂಗ್ಯ ನುಡಿ.

‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಬರಹಗಾರ ತನ್ನನ್ನೇ ಉರಿಸಿಕೊಂಡು ರಚಿಸಿರುವ ಕೃತಿ

ಒಡಲಾಳದ ಸಂಬಂಜದ ಹೊಸ ಹುಟ್ಟು



ಪಡಸಾಲೆ

ರಘುನಾಥ ಚ.ಹ.

‘ಸಾಹಿತ್ಯದಿಂದ, ಸಾಹಿತಿಗಳಿಂದ ಯಾವ ಉಪಯೋಗವೂ ಇಲ್ಲ’ ಎಂದು ರಚ್ಚೆ ಹಿಡಿದಿದ್ದವರೂ ಪುಳಕಗೊಳ್ಳುವಂತೆ ಮಾಡಿರುವುದು ದೇವನೂರ ಮಹಾದೇವ ಅವರ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯ ಸಾಧನೆಗಳಲ್ಲೊಂದು. ಇದು ‘ಸಾಹಿತ್ಯೇತರ’ ಕೃತಿಯಾದುದರಿಂದ, ಪ್ರಸಕ್ತ ಪುಳಕಕ್ಕೂ ಸಾಹಿತ್ಯಕ್ಕೂ ಸಂಬಂಧವಿಲ್ಲ ಎಂದು ಹೇಳಬಹುದು. ಆದರೆ, ಈ ಕೃತಿಗೆ ದೊರೆತಿರುವ ವಿಶೇಷ ಹೊಳಪು ಹಾಗೂ ಮಹತ್ವಕ್ಕೆ ವಸ್ತುವಿನಷ್ಟೇ ಕೃತಿಯನ್ನು ಬರೆದಿರುವ ಬರಹಗಾರನ ವಿಶ್ವಾಸಾರ್ಹತೆಯೂ ಮುಖ್ಯವಾದುದು; ಆ ವಿಶ್ವಾಸಾರ್ಹತೆ ದೇವನೂರರಿಗೆ ದೊರೆತಿರುವುದಕ್ಕೆ ಪ್ರಮುಖ ಕಾರಣ ಸಾಹಿತ್ಯದ ಹಿನ್ನೆಲೆ. ಬರಹಗಾರನಿಗಿರುವ ವಿಶ್ವಾಸಾರ್ಹತೆ ಕೃತಿಗೆ ವಸ್ತುನಿಷ್ಠತೆ ತಂದುಕೊಟ್ಟಿದೆ ಹಾಗೂ ಅದರ ಬಗ್ಗೆ ಜನರ ಗಮನಸೆಳೆಯುವಂತೆ ಮಾಡಿದೆ. ಇದೇ ಕೃತಿಯನ್ನು ಆರ್‌ಎಸ್‌ಎಸ್‌ನ ಕಟು ಟೀಕಾಕಾರರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದಿದ್ದರೆಂದುಕೊಳ್ಳಿ. ಆಗ ಈ ಕೃತಿಯನ್ನು ರಾಜಕಾರಣದ ಕನ್ನಡಕದಿಂದಲೇ ನೋಡಲಾಗುತ್ತಿತ್ತು.

ಮಹಾದೇವ ಅವರ ಕಲಾಕೃತಿಗಳು ಸದ್ದಿಲ್ಲದೆ ಮೂಡಿಸಿರುವ, ಮೂಡಿಸುತ್ತಿರುವ ಸಾಮಾಜಿಕ ಎಚ್ಚರ ಹಾಗೂ ತಿಳಿವಳಿಕೆ ಸಮಾಜಶಾಸ್ತ್ರೀಯ ಮಾನದಂಡಗಳಿಗೆ ನಿಲುಕಲಾರದಂತಹವು. ಆ ಸಾಮಾಜಿಕ ಪ್ರಜ್ಞೆಯ ಭಾಗವಾಗಿಯೇ ನೋಡಬೇಕಾದ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಗೆ ರಾಜಕಾರಣ ಹಾಗೂ ಸಾಮಾಜಿಕ ಆಯಾಮ ಇರುವಂತೆಯೇ ಸಾಂಸ್ಕೃತಿಕ ಆಯಾಮವೂ ಇದೆ. ಆ ಸಾಂಸ್ಕೃತಿಕ ಆಯಾಮದ ಕಾರಣದಿಂದಲೇ ಪುಸ್ತಕ ಜನಸಮೂಹದ ಗಮನಸೆಳೆದಿದೆ. ಬರಹಗಾರನ ನೈತಿಕತೆ, ಬರವಣಿಗೆಯ ಪರಿಣಾಮ, ಸಾಹಿತ್ಯದ ಸಾಧ್ಯತೆಗಳ ಕುರಿತು ನಂಬಿಕೆ ಮೂಡಿಸುವ ಈ ಕೃತಿಯನ್ನು ಲೇಖಕನೊಬ್ಬನ ಸಾಮಾಜಿಕ ಬದ್ಧತೆಯ ಉದಾಹರಣೆಯಾಗಿಯೂ ನೋಡಬಹುದು. ಬರಹಗಾರನೊಬ್ಬ ತನ್ನನ್ನೇ ಉರಿಸಿಕೊಂಡು ರಚಿಸಿರುವ, ಪ್ರಕಟಣೆಯ ನಂತರದ ಉರಿಯನ್ನು ಅನುಭವಿಸಲೂ ಸಿದ್ಧನಾಗಿ ರೂಪಿಸಿರುವ ಪುಸ್ತಕವಿದು.


ಆರ್‌ಎಸ್‌ಎಸ್ ಕುರಿತಂತೆ ಕನ್ನಡದಲ್ಲಿ ಈ ಮೊದಲೂ ಕೃತಿಗಳು ಪ್ರಕಟವಾಗಿವೆ. ಆದರೆ, ಆ ಕೃತಿಗಳಿಗೆ ಮಹಾದೇವ ಅವರ ಕೃತಿಗೆ ದೊರೆತಷ್ಟು ಓದುಗರ ಸ್ಪಂದನ ದೊರೆತಿರಲಿಲ್ಲ. ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯನ್ನು ಈಗಿರುವಷ್ಟೇ ಚೆನ್ನಾಗಿ ಅಥವಾ ಈಗಿರುವುದಕ್ಕೂ ಹೆಚ್ಚು ಪರಿಣಾಮಕಾರಿಯಾಗಿ ಮತ್ತೊಬ್ಬ ಬರಹಗಾರ ರಚಿಸುವುದಕ್ಕೆ ಸಾಧ್ಯವಿದೆ. ಆದರೆ, ಆ ಸಂಭಾವ್ಯ ಕೃತಿಗೆ ಮಹಾದೇವ ಪುಸ್ತಕಕ್ಕೆ ದೊರೆತಷ್ಟು ಪ್ರತಿಕ್ರಿಯೆ ಹಾಗೂ ಗೌರವ ಸಲ್ಲುತ್ತದೆಂದು ನಿರೀಕ್ಷಿಸಲಾಗದು. ಏಕೆಂದರೆ, ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ದೇವನೂರ ಮಹಾದೇವ ಓರ್ವ ಬರಹಗಾರನಷ್ಟೇ ಅಲ್ಲ; ಆತನೊಬ್ಬ ‘ಮಾಯ್ಕಾರ.’

ಬರಹಗಾರನೊಬ್ಬ ಸಹೃದಯರ ಮನಸ್ಸಿನಲ್ಲಿ ನೆಲೆ ಕಂಡುಕೊಳ್ಳಲು ಬರಹದಲ್ಲಿ ಮಾಂತ್ರಿಕತೆಯಿದ್ದರಷ್ಟೇ ಸಾಲದು, ವ್ಯಕ್ತಿತ್ವದಲ್ಲಿ ಪ್ರಾಮಾಣಿಕತೆಯೂ ಇರಬೇಕು, ನಡವಳಿಕೆಯಲ್ಲಿ ಬದ್ಧತೆ ಇರಬೇಕು. ಆ ಪ್ರಾಮಾಣಿಕತೆ–ಬದ್ಧತೆ ಪ್ರೀತಿಯ ರೂಪದಲ್ಲಿ ಓದುಗರನ್ನು ತಾಕಬೇಕು.

ಈ ಕೃತಿ ಖಂಡಿತವಾಗಿಯೂ ದೇವನೂರರ ಪ್ರಾತಿನಿಧಿಕ ಕೃತಿಯಲ್ಲ. ಕಥೆಗಳೊಂದಿಗೆ ಹೋಲಿಕೆ ಬಿಡಿ, ಅವರ ಸಾಹಿತ್ಯೇತರ ಬರಹಗಳ ಜೊತೆಗಿಟ್ಟು ನೋಡಿದರೂ ಪ್ರಸಕ್ತ ಬರಹ ಸಾಧಾರಣವಾದುದು. ದೇವನೂರರಿಗಷ್ಟೇ ಸಾಧ್ಯವಾದ ಕಾವ್ಯಕಾಣ್ಕೆಗಳು, ಧ್ಯಾನದ ಶೈಲಿ ಈ ಕೃತಿಯಲ್ಲಿಲ್ಲ. ದೇವನೂರರು ತಮ್ಮತನವನ್ನು ಬಿಟ್ಟುಕೊಟ್ಟಿರುವ, ಬರಹಗಾರನೊಬ್ಬ ಅತೀವ ಸಾಮಾಜಿಕ ಎಚ್ಚರದಲ್ಲಿ ಸೃಜನಶೀಲತೆಯೊಂದಿಗೆ ಮಾಡಿಕೊಂಡ ರಾಜಿಯಂತೆ ಈ ಕೃತಿಯನ್ನು ನೋಡಬಹುದು.

ಈ ಕೃತಿಯ ಬರವಣಿಗೆ ಮತ್ತು ಅದನ್ನು ಓದುಗರಿಗೆ ತಲುಪಿಸಲು ಅನುಸರಿಸಿರುವ ಮಾರ್ಗ– ಎರಡೂ ಕುತೂಹಲಕಾರಿಯಾಗಿವೆ. ದೇವನೂರರ ಬರವಣಿಗೆಯ ಶೈಲಿ ಓದುಗರೊಂದಿಗಿನ ಮಾತುಕತೆಯ ಸ್ವರೂಪದ್ದಲ್ಲ; ಅದು ತನಗೆ ತಾನೇ ಹೇಳಿಕೊಳ್ಳುವಂತಹ ಮಾತುಗಳ ರೀತಿಯದು. ಆದರೆ, ಆರ್‌ಎಸ್‌ಎಸ್ ಕುರಿತ ಕೃತಿ ಓದುಗರನ್ನು ನೇರವಾಗಿ ಉದ್ದೇಶಿಸಿ ಬರೆದಿರುವಂತಹದ್ದು. ಮುಖ್ಯವಾಗಿ, ಹೊಸಗಾಲದ ಓದುಗರನ್ನು ಗಮನದಲ್ಲಿ ಇರಿಸಿಕೊಂಡಿರುವಂತಹದ್ದು. ವಾಟ್ಸ್‌ಆ್ಯಪ್, ಫೇಸ್‌ಬುಕ್ ತಲೆಮಾರು ಎಂದು ವ್ಯಂಗ್ಯದಿಂದ ಕಾಣಲಾಗುವ ತರುಣ ತರುಣಿಯರನ್ನು ಮುಟ್ಟುವ ಪ್ರಯತ್ನ ದೇವನೂರರ ಈ ಬರವಣಿಗೆಯ ಹಿಂದೆ ಇರುವಂತಿದೆ. ನೇರ, ಸರಳ, ಸ್ಪಷ್ಟ ಬರವಣಿಗೆ ಯುವ ಓದುಗರನ್ನು ಮುಟ್ಟುವ ಹಂಬಲಕ್ಕೆ ಪೂರಕವಾಗಿದೆ. ಕೃತಿಯ ತುಂಬ ತುಂಬಿಕೊಂಡಿರುವ ಉಲ್ಲೇಖಗಳು, ಲೇಖಕ ತಾನು ಹೇಳಬೇಕಾದ ವಿಚಾರವನ್ನು ಓದುಗನಿಗೆ ಒಪ್ಪಿಸುವುದಕ್ಕಿಂತಲೂ ಆ ಬಗ್ಗೆ ಯೋಚಿಸುವಂತೆ ಮಾಡುವ ಉದ್ದೇಶ ಹೊಂದಿರುವಂತಿವೆ.

ಲೇಖಕನ ಹಕ್ಕುಸ್ವಾಮ್ಯವನ್ನು ಬಿಟ್ಟುಕೊಟ್ಟು, ಪುಸ್ತಕವನ್ನು ಯಾರು ಬೇಕಾದರೂ ಮುದ್ರಿಸಲಿಕ್ಕೆ ಅವಕಾಶ ಕಲ್ಪಿಸಿರುವುದು, ಹೆಚ್ಚಿನ ಸಂಖ್ಯೆಯ ಓದುಗರನ್ನು ತಲುಪಲು ಕಂಡುಕೊಂಡಿರುವ ಹೊಸ ದಾರಿಯಂತಿದೆ. ಪಿಡಿಎಫ್ ಪ್ರತಿಗಳು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿರುವುದು ಹಾಗೂ ಇತರ ಭಾಷೆಗಳಿಗೂ ಪುಸ್ತಕವನ್ನು ಅನುವಾದಿಸುವ ಪ್ರಯತ್ನಗಳು ಪುಸ್ತಕವನ್ನು ಹೊಸ ತಲೆಮಾರಿಗೆ ತಲುಪಿಸುವ ಪ್ರಯತ್ನವೇ ಆಗಿದೆ. ಕೃತಿಯ ಸಾವಿರಾರು ಪ್ರತಿಗಳ ಮಾರಾಟದಿಂದ ಲೇಖಕರಿಗೆ ಹಣಕಾಸಿನ ಲಾಭವಿಲ್ಲವಾದರೂ, ಪ್ರಕಾಶಕರಿಗೆ ಪುಸ್ತಕ ಲಾಭಕರವೇ. ಪುಸ್ತಕವನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿರುವುದಾಗಿ ಹೇಳಲಾಗುತ್ತಿದ್ದರೂ, ಪುಟ್ಟ ಪುಸ್ತಿಕೆಗೆ ಇಟ್ಟಿರುವ ಬೆಲೆ ನ್ಯಾಯಯುತವಾಗಿಯೇ ಇದೆ.



ಯುವ ತಲೆಮಾರನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದ ಮುಖ್ಯ ಲೇಖಕರು ಈ ಬಗೆಯ ಸವಾಲಿಗೆ ತಮ್ಮನ್ನೊಡ್ಡಿಕೊಂಡಿರುವ ಉದಾಹರಣೆಗಳು ಕನ್ನಡದಲ್ಲಿ ಕಡಿಮೆ. ಯು.ಆರ್. ಅನಂತಮೂರ್ತಿ ಅವರು ತಮ್ಮ ಕೊನೆದಿನಗಳಲ್ಲಿ (82ನೇ ವಯಸ್ಸಿನಲ್ಲಿ) ಬರೆದ ‘ಹಿಂದುತ್ವ ಅಥವಾ ಹಿಂದ್ ಸ್ವರಾಜ್’ ಕೂಡ ಇದೇ ಬಗೆಯ ಕೃತಿ. ಹಿಂದುತ್ವ ಮತ್ತು ಹಿಂದ್ ಸ್ವರಾಜ್‌ಗಳಲ್ಲಿ ಯಾವುದು ಜೀವಪರ ಹಾಗೂ ಅವೆರಡರಲ್ಲಿ ನಮ್ಮ ದಾರಿ ಯಾವುದಾಗಬೇಕು ಎಂದು ಚರ್ಚಿಸಿದ್ದ ಆ ಕೃತಿ ನಿರೀಕ್ಷಿತ ಚರ್ಚೆಯನ್ನು ಹುಟ್ಟುಹಾಕಲಿಲ್ಲ, ಅನಂತಮೂರ್ತಿಯವರ ಎಂದಿನ ಪಕ್ವತೆಯನ್ನೂ ಮುಟ್ಟಿರಲಿಲ್ಲ. ಎಂಟು ವರ್ಷಗಳ ಹಿಂದೆ ಅನಂತಮೂರ್ತಿ ಅವರು ಆಶಿಸಿದ್ದ ಚರ್ಚೆಯನ್ನು ಈಗ ದೇವನೂರರ ಕೃತಿ ಹುಟ್ಟುಹಾಕಿದೆ.

ಪ್ರಸಕ್ತ ಕೃತಿಯ ಯಶಸ್ಸಿಗೆ ದೇವನೂರ ಮಹಾದೇವ ಕಾರಣರಾದರೂ, ಅವರ ಹಿಂದೆ ಬಹುತ್ವ ಭಾರತವನ್ನು ಅಹರ್ನಿಶಿ ಹಂಬಲಿಸುವ ಅನೇಕ ಸಹಮನಸ್ಕರ ತುಡಿತಗಳೂ ಇರುವುದನ್ನು ಮರೆಯಬಾರದು.

‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯ ಮೂಲಕ ಕೊಳಕ್ಕೆ ಕಲ್ಲು ಎಸೆಯುವ ಕೆಲಸವನ್ನು ಮಾಡಲಾಗಿದೆ. ಆರ್‌ಎಸ್‌ಎಸ್‌ನ ಸೈದ್ಧಾಂತಿಕ ನೆಲೆಗಟ್ಟು ಯಾವ ಬಗೆಯದು ಎನ್ನುವುದನ್ನು ಓದುಗರ ಮುಂದಿಡಲಾಗಿದೆ. ಈ ಕೃತಿಯಿಂದ ಯುವ ತಲೆಮಾರಿನ ನಂಬಿಕೆಗಳು ಬದಲಾಗುತ್ತವೆ ಎಂದು ಹೇಳಲಾಗದು. ಆದರೆ, ಕೆಲವರಾದರೂ ತಮ್ಮ ಈವರೆಗಿನ ನಂಬಿಕೆ–ವಿಚಾರಗಳನ್ನು ಪರಿಶೀಲಿಸಿಕೊಳ್ಳಲು, ವಿಮರ್ಶೆಯ ಒರೆಗೆ ಹಚ್ಚಿಕೊಳ್ಳಲು ಮಹಾದೇವರ ಬರವಣಿಗೆ ಒತ್ತಾಯಿಸುತ್ತದೆ. ಈ ಕೃತಿ ಓದುಗರಲ್ಲಿ ಎಬ್ಬಿಸುವ ಪ್ರಶ್ನೆಗಳು, ಸಂಘ ಪರಿವಾರದ ಬೆಂಬಲಿಗರನ್ನು ಗಾಯಗಳಾಗಿ ಬಹುಕಾಲ ಕಾಡಲಿವೆ. ಹಾಗೆಯೇ ಕೋಮುವಾದವನ್ನು ವಿರೋಧಿಸುವ ಮನಸ್ಸುಗಳಿಗೆ ಈ ಕೃತಿ ಆತ್ಮವಿಶ್ವಾಸವನ್ನು ತುಂಬಲಿದೆ.

ಈ ಕೃತಿಯನ್ನು ಸಂಘಟನೆಯೊಂದರ ಟೀಕೆ–ಟಿಪ್ಪಣಿಯ ಕೃತಿಯನ್ನಾಗಿಯಷ್ಟೇ ನೋಡಬಾರದು. ಇದು, ಸಾಮಾಜಿಕ ವಿಕಾರಗಳನ್ನು ಕೊನೆಗಾಣಿಸಿ ಬಂಧುತ್ವವನ್ನು, ಬಹುತ್ವವನ್ನು ಜೀವಗೊಳಿಸುವ ಹಂಬಲದ ಪ್ರಯತ್ನ. ದೇವನೂರರ ಕೃತಿಶ್ರೇಣಿಯಲ್ಲಿ ಗುಣಮಟ್ಟದ ಕಾರಣದಿಂದಾಗಿ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಪ್ರತ್ಯೇಕವಾಗಿ ನಿಲ್ಲುತ್ತದಾದರೂ, ಚಾರಿತ್ರಿಕ–ಸಾಂಸ್ಕೃತಿಕ ಮಹತ್ವದ ಕಾರಣದಿಂದಾಗಿ ‘ಒಡಲಾಳ’ದಷ್ಟೇ ಮುಖ್ಯವಾದುದು. ‘ಸಂಬಂಜ ಅನ್ನೋದು ದೊಡ್ಡದು ಕನಾ’ ಎನ್ನುವುದು ದೇವನೂರರ ಒಟ್ಟಾರೆ ಸಾಹಿತ್ಯದ ಬೀಜವಾಕ್ಯ. ಈ ನಂಬಿಕೆ ಹಾಗೂ ಮನೋಧರ್ಮವೇ ‘ಆರ್‌ಎಸ್‌ಎಸ್ ಆಳ ಮತ್ತು ಅಗಲ’ ಕೃತಿಯ ಅಂತರಂಗದಲ್ಲೂ ಇದೆ.

ಚುರುಮುರಿ



ಐದು ವರ್ಷದ ನಂತರ...

● ಸುಮಂಗಲಾ

‘ಇನ್ ಐದು ವರ್ಸದ ನಂತರ ನಂ ದೇಶದಿಂದ ಪೆಟ್ರೋಲ್ ಮಾಯವಾಗ್ತೈತಿ ಅಂತ ಗಡ್ಕರಿ ಮಾಮಾ ಹೇಳ್ಯಾನ ನೋಡಿಲ್ಲಿ’ ಬೆಕ್ಕಣ್ಣ ಪೇಪರು ನೋಡುತ್ತ ಹುರುಪಿನಿಂದ ಚೀರಿತು.

‘ಐದು ವರ್ಸ ಅಲ್ಲ, ಹಿಂಗೇ ರೇಟು ಏರತಿದ್ದರೆ ವರ್ಸದಾಗೆ ಬಂಕಿನಿಂದಲೇ ಪೆಟ್ರೋಲು ಮಾಯವಾಗ್ತೈತಿ’ ಎಂದೆ.

‘ಏನರ ಅಡ್ಡಮಾತು ಹೇಳಬ್ಯಾಡ. ಹೈಡ್ರೋಜೆನ್, ಎಥೆನಾಲ್ ಹಿಂಗ ನಾಕೈದು ಹಸಿರು ಇಂಧನ ಬಳಕೆ ಜಾಸ್ತಿ ಮಾಡತೀವಿ, ಆವಾಗ ಪೆಟ್ರೋಲ್ ಮಾಯವಾಗ್ತೈತಿ ಅಂತ ಗಡ್ಕರಿ ಮಾಮಾ ಹೇಳಿದ್ದು. ಹಂಗಾದರ ವಾಯು ಮಾಲಿನ್ಯ ಕಡಿಮೆಯಾಗ್ತೈತಿ, ಮಂದಿ ಆರೋಗ್ಯ ಮಸ್ತ್ ಆಗತೈತಿ...’ ಬೆಕ್ಕಣ್ಣ ಹಗಲುಗನಸಿನಲ್ಲಿ ತೇಲುತ್ತಿತ್ತು.

‘ಐದ್ ವರ್ಸದಾಗೆ ಪೆಟ್ರೋಲ್ ಅಷ್ಟೇ ಅಲ್ಲಲೇ, ಅಡುಗೆ ಮನಿಯಿಂದ ಗ್ಯಾಸ್ ಸಿಲಿಂಡರ್ ಮಾಯವಾಗತೈತಿ. ಈಗಲೇ ಸಾವಿರದ ಐವತ್ತೈದಾಗ್ಯೆತಿ... ಹಿಂಗೇ ಏರಿಕೋತ ಹೋದರೆ ಶ್ರೀಸಾಮಾನ್ಯರ ಹತ್ರ ಸಿಲಿಂಡರಿಗೆ ರೊಕ್ಕ ಎಲ್ಲಿರತೈತಿ? ಐದು ವರ್ಸದ ನಂತರ ಇನ್ನೂ ಏನೇನು ಮಾಯವಾಗತೈತೋ...’ ಎಂದೆ.

‘ಸರಿ, ಪಟ್ಟಿ ಮಾಡೂಣು ಬಾ. ಹೆಂಗಿದ್ರೂ ಪ್ರಧಾನಿ ಕುರ್ಚಿವಳಗ ಮೋದಿಮಾಮಾ ಇರತಾನ, ಭ್ರಷ್ಟಾಚಾರ ಈಗ ಚೂರುಪಾರು ಉಳಕೊಂಡಿರಾದು ಐದು ವರ್ಸದಾಗೆ ಪೂರ್ಣ ಮಂಗಮಾಯವಾಗತೈತಿ’ ಎಂದು ಉಲಿಯಿತು.

‘ಕರುನಾಡಿನಾಗೆ ನಲ್ವತ್ತು ಪರ್ಸೆಂಟ್ ಕಮಿಷನ್ ಹಿಂಗೇ ಏರಿಕೋತ ಹೋದ್ರೆ ಐದು ವರ್ಸದಾಗೆ ನೂರು ಪರ್ಸೆಂಟೇ ಆಗಬೌದು’ ನಾನು ಕುಟುಕಿದರೆ ಬೆಕ್ಕಣ್ಣ ‘ಅದ್ರೂ ನಲ್ವತ್ತು ಪರ್ಸೆಂಟ್ ಮಾಯವಾದಂಗೆ ಆತಿಲ್ಲೋ’ ಎಂದು ವಿತಂಡವಾದ ಹೂಡಿತು.

‘ಐದು ವರ್ಸದ ನಂತರ ವಿರೋಧ ಪಕ್ಷ, ಪ್ರಾದೇಶಿಕ ಪಕ್ಷಗಳು, ಭಿನ್ನ ಧ್ವನಿ, ಭಿನ್ನಾಭಿಪ್ರಾಯ ಇವೆಲ್ಲಾ ಮಾಯವಾಗಿ ಏಕಪಕ್ಷ, ಏಕಧ್ವನಿ ಇರತೈತೇನೋ’ ನಾನು ಚಿಂತೆಯಿಂದ ಹೇಳಿದೆ.

‘ಒಂದಂತೂ ಖರೇ... ಇನ್ನೈದು ವರ್ಸದ ನಂತರ ಉದ್ಯಮದ ವರ್ಣಮಾಲೆಯೊಳಗೆ ಅ-ಅಂ ಎರಡೇ ಅಕ್ಷರ ಇರತಾವು. ಅಂದರೆ ಅದಾನಿ-ಅಂಬಾನಿ ಇಬ್ಬರೇ ಇರತಾರ’ ಎನ್ನುತ್ತ ಖೊಳ್ಳನೆ ನಕ್ಕಿತು!

ಸಂಗತ

ಕನ್ನಡದಲ್ಲಿ ಪರೀಕ್ಷೆ: ಅವಕಾಶವಷ್ಟೇ ಸಾಕೆ?

ಕೇಳುವ ಪ್ರಶ್ನೆ ಯಾವ ಭಾಷೆಯಲ್ಲಿದ್ದರೂ ಅಭ್ಯರ್ಥಿಗಳಿಗೆ ಅತಿ ಕ್ಷಿಪ್ರವಾಗಿ ಉತ್ತರಿಸುವ ಸಾಮರ್ಥ್ಯ ಇರಲೇಬೇಕು ಎಂಬುದು ಗಮನಾರ್ಹ

● ರಾ.ನಂ.ಚಂದ್ರಶೇಖರ

ಕೇಂದ್ರ ಸರ್ಕಾರ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡದಲ್ಲೂ ಬರೆಯಲು ಅವಕಾಶ ಇರಬೇಕು ಎಂಬುದು ಸರಿಯಾದ ಹಕ್ಕೊತ್ತಾಯ. ಇಂಗ್ಲಿಷ್ ಮೇಲೆ ಹಿಡಿತ ಹೊಂದಿಲ್ಲದ ಗ್ರಾಮೀಣ ಪ್ರದೇಶದ ಆಕಾಂಕ್ಷಿಗಳಿಗೆ ಇದರಿಂದ ನೆರವಾಗುತ್ತದೆ. ಆದರೆ, ಕನ್ನಡದಲ್ಲಿ ತರಬೇತಿ ಮತ್ತು ಪರೀಕ್ಷೆ ಬರೆಯಲು ಅವಕಾಶ ಎರಡೂ ಇಲ್ಲದೇ ಇದ್ದರೆ ಇಂತಹ ಅಭ್ಯರ್ಥಿಗಳಿಗೆ ಹೆಚ್ಚು ತೊಂದರೆ ಆಗಲಿದೆ.

ನೇಮಕಾತಿ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಸಿಕ್ಕರೆ ಕನ್ನಡಿಗರಿಗೆ ಉದ್ಯೋಗ ಸಿಗುವ ಖಾತರಿ ಇದೆಯೇ? ಅಂತಹ ಅವಕಾಶವನ್ನು ಎಷ್ಟು ಜನ ಬಳಸಿಕೊಂಡಿದ್ದಾರೆ ಎಂಬುದನ್ನು ಗಮನಿಸಬೇಕಿದೆ. ರೈಲ್ವೆ ಆಯ್ಕೆ ಮಂಡಳಿಯು ಶೆಡ್ಯೂಲ್ 8ರಲ್ಲಿರುವ ಎಲ್ಲ ಭಾಷೆಗಳಲ್ಲೂ ಬರೆಯಲು ಅವಕಾಶ ನೀಡಿದಾಗ, ಕುತೂಹಲದಿಂದ ಸಂಬಂಧಿಸಿದವರನ್ನು ವಿಚಾರಿಸಿದೆ. ಸಾವಿರಕ್ಕಿಂತ ಕಮ್ಮಿ ಅಭ್ಯರ್ಥಿಗಳು ಕನ್ನಡದಲ್ಲಿ ಬರೆಯುವ ಆಯ್ಕೆ ಮಾಡಿಕೊಂಡಿದ್ದರು. ಇದಕ್ಕೆ ಕಾರಣ, ಕೆಲವು ನಗರಗಳನ್ನು ಬಿಟ್ಟರೆ ಉಳಿದವರಿಗೆ ಇಂತಹ ಪರೀಕ್ಷೆ ನಡೆಯುವುದು ತಿಳಿಯುವುದೇ ಇಲ್ಲ. ಇನ್ನು ನಗರ ಮೂಲದ ಹೆಚ್ಚು ಅಭ್ಯರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರಾಗಿರುವುದರಿಂದ ಕನ್ನಡದಲ್ಲಿ ಬರೆಯವ ಆತ್ಮವಿಶ್ವಾಸ ಇರಲು ಸಾಧ್ಯವೇ?

ಈ ಪರೀಕ್ಷೆಗಳನ್ನು ಕನ್ನಡದಲ್ಲೂ ಬರೆಯಬಹುದು ಎಂದಾದರೆ, ಪ್ರಶ್ನೆಪತ್ರಿಕೆಯು ಇಂಗ್ಲಿಷ್, ಹಿಂದಿಯ ಹಾಗೆ ಇತರ ಪ್ರಾದೇಶಿಕ ಭಾಷೆಗಳಲ್ಲೂ ಮುದ್ರಣವಾಗುತ್ತದೆ. ನಮ್ಮ ಹುಡುಗರಿಗೆ ಸಾಮಾನ್ಯ ಜ್ಞಾನ, ಗಣಿತ ಇತ್ಯಾದಿಯೆಲ್ಲವನ್ನೂ ಕನ್ನಡದಲ್ಲಿ ಅರ್ಥ ಮಾಡಿಕೊಂಡು ಉತ್ತರ ಬರೆಯುವುದು ಸುಲಭದ ಸಂಗತಿಯಲ್ಲ. ಅಗತ್ಯ ವಿದ್ಯಾರ್ಹತೆಯ ಜೊತೆಗೆ ಬಹಳಷ್ಟು ಸಿದ್ಧತೆ ಬೇಕಾಗುತ್ತದೆ. ಆಂಧ್ರಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಅಭ್ಯರ್ಥಿಗಳನ್ನು ಸಜ್ಜುಗೊಳಿಸುವ ಬಹಳಷ್ಟು ಸಂಸ್ಥೆಗಳಿವೆ. ಅವು ಹಿಂದಿ, ಇಂಗ್ಲಿಷ್‌ನಲ್ಲಿ ತರಬೇತಿ ನೀಡುತ್ತವೆ. ಈಗ ನಮ್ಮ ರಾಜ್ಯದ ಬೆಂಗಳೂರು ಮತ್ತು ಇತರ ಕೆಲವು ನಗರಗಳಲ್ಲಿ ಮಾತ್ರ ಇಂತಹ ಸಂಸ್ಥೆಗಳು ಆರಂಭವಾಗುತ್ತಿವೆ. ಅವುಗಳ ಗುಣಮಟ್ಟ ಸುಧಾರಿಸಲು ಕೆಲವು ಕಾಲ ಬೇಕು ಎನ್ನುತ್ತಾರೆ ತಜ್ಞರು.

ಹಿಂದೆ ಬ್ಯಾಂಕಿಂಗ್ ಸರ್ವಿಸ್ ರೆಕ್ರೂಟ್‌ಮೆಂಟ್ ಬೋರ್ಡ್ (ಬಿಎಸ್‌ಆರ್‌ಬಿ) ಪರೀಕ್ಷೆ ನಡೆಸುತ್ತಿದ್ದಾಗ ಆಯಾ ಪ್ರದೇಶದ ಭಾಷೆಗಳನ್ನು ಅರಿತಿರುವುದೇ ಉದ್ಯೋಗಕ್ಕೆ ಅರ್ಜಿ ಹಾಕುವ ಮೊದಲ ಅರ್ಹತೆ ಆಗಿತ್ತು. ಹಾಗಾಗಿ ಬ್ಯಾಂಕ್‌ಗಳಲ್ಲಿ ಕನ್ನಡಿಗರಿಗೆ ಕೆಲಸ ಸಿಗುತ್ತಿತ್ತು. ಐಬಿಪಿಎಸ್ ವ್ಯವಸ್ಥೆ ಬಂದಮೇಲೆ ಪ್ರಾದೇಶಿಕತೆಯ ಜಾಗದಲ್ಲಿ ಅರ್ಹತೆ ಅನ್ನುವ ಮಾನದಂಡ ತರಲಾಯಿತು. ಪರೀಕ್ಷೆಗಳು ಅಖಿಲ ಭಾರತ ಮಟ್ಟದಲ್ಲಿ ನಡೆಯುವುದರಿಂದ ಹುದ್ದೆಗೆ ತಕ್ಕ ವಿದ್ಯಾರ್ಹತೆ ಇದ್ದವರೆಲ್ಲ ಅರ್ಜಿ ಹಾಕಬಹುದು. ಇದರ ಪರಿಣಾಮ ಬ್ಯಾಂಕ್‌ಗಳಲ್ಲಿ ಕ್ಲಾರ್ಕ್ ಹುದ್ದೆಗೂ ಕನ್ನಡ ಬಾರದ ಪರ ಪ್ರಾಂತದವರು ಬರುತ್ತಿದ್ದಾರೆ.

ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೊಂದಿದೆ. ಬ್ಯಾಂಕಿಂಗ್, ವಿಮೆ, ಸಿಬ್ಬಂದಿ ಆಯ್ಕೆ ಸಮಿತಿಗಳು (ಎಸ್‌ಎಸ್‌ಸಿ) ನಡೆಸುವ ಎಲ್‌ಡಿಸಿ ಮತ್ತು ಯುಡಿಸಿ ಪರೀಕ್ಷೆಗಳಲ್ಲಿ ಕೇಳುವ ಪ್ರಶ್ನೆ ಯಾವ ಭಾಷೆಯಲ್ಲಿದ್ದರೂ ಉತ್ತರಿಸುವವರಿಗೆ ಅತಿ ಕ್ಷಿಪ್ರವಾಗಿ ಉತ್ತರಿಸುವ ಸಾಮರ್ಥ್ಯ ಇರಲೇಬೇಕು. ಗಣಿತ (ನ್ಯೂಮರಿಕಲ್ ಎಬಿಲಿಟಿ), ಸಾಮಾನ್ಯ ಜ್ಞಾನ, (ಟೆಸ್ಟ್ ಆಫ್ ರೀಸನಿಂಗ್) ಮತ್ತು ವೇಗ ನಿಷ್ಕರ್ಷಗಳೆಂದು (ಆ್ಯಪ್ಟಿಟ್ಯೂಡ್ ಟೆಸ್ಟ್) ಮೂರು ವಿಭಾಗಗಳಲ್ಲಿ ಹೆಚ್ಚು ಪ್ರಶ್ನೆಗಳಿಗೆ ನಿಗದಿತ ಸಮಯದಲ್ಲಿ ಉತ್ತರಿಸಿದರಷ್ಟೇ ಅವಕಾಶ. ಸಾಮಾನ್ಯ ಇಂಗ್ಲಿಷ್ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಪಡೆಯಬೇಕಾಗುತ್ತದೆ. ಅಂದರೆ, ಇಂಗ್ಲಿಷ್ ಗೊತ್ತಿದ್ದರೆ ಸಾಕು ಎಲ್ಲವೂ ಸುಲಭ. ಈಗ ಸಂದರ್ಶನ ಕೂಡ ರದ್ದಾಗಿರುವುದರಿಂದ ಕನಿಷ್ಠ ವಿದ್ಯಾರ್ಹತೆ ಇದ್ದರೆ, ಯಾವುದೇ ರಾಜ್ಯದವರಾದರೂ ಅರ್ಜಿ ಹಾಕಬಹುದು. ಇಲ್ಲಿ ಕೇಳಲಾಗುವ ಪ್ರಶ್ನೆಗಳು ಆಬ್ಜೆಕ್ಟಿವ್ ಆಗಿರುವುದರಿಂದ ಸರಿ ಉತ್ತರ ಇರುವ ಆಯ್ಕೆಗೆ ಗುರುತು ಮಾಡುವುದಷ್ಟೇ ಆಗಿರುತ್ತದೆ. ಈ ಬಗೆಯ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಾದೇಶಿಕ ಭಾಷೆಗಳಿಗಿಂತಲೂ ಇಂಗ್ಲಿಷ್ ಹೆಚ್ಚು ಅನುಕೂಲಕರ.



ಸ್ಥಳೀಯರಿಗೆ ಕೆಲಸ ಸಿಗಬೇಕೆಂದರೆ, ಕೇಂದ್ರ ಸರ್ಕಾರದ ಎಲ್ಲ ಅಧೀನ ಸಂಸ್ಥೆಗಳ ಕೆಳ ಹಂತದ ಹುದ್ದೆಗಳನ್ನು ಆಯಾ ರಾಜ್ಯದವರಿಗೇ ಮೀಸಲು ಇರಿಸಬೇಕಾಗುತ್ತದೆ. ಎಲ್ಲ ನೇಮಕಾತಿ ಪರೀಕ್ಷೆಗಳು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿರುವ ಎಲ್ಲ ಭಾಷೆಗಳಲ್ಲೂ ನಡೆಯುವುದರ ಜೊತೆಗೆ ಆಯಾ ರಾಜ್ಯದ ಆಡಳಿತ ಭಾಷೆಯನ್ನು 10ನೇ ತರಗತಿಯವರೆಗೆ ಒಂದು ಭಾಷೆಯಾಗಿ ಓದಿರುವುದನ್ನು ಕಡ್ಡಾಯ ಮಾಡಬೇಕು. ಸ್ಥಳೀಯ ಭಾಷೆಯನ್ನು ಓದದವರಿಗೆ ಭಾಷಾ ಜ್ಞಾನವನ್ನು ಪರೀಕ್ಷಿಸುವ ಲಿಖಿತ ಪರೀಕ್ಷೆ ನಡೆಸುವುದರ ಜೊತೆಗೆ ಸಂದರ್ಶನವೂ ಇರಬೇಕು.

ಕೇಂದ್ರ ಸರ್ಕಾರವು ಹಿಂದಿ, ಇಂಗ್ಲಿಷ್ ಜೊತೆಗೆ ಇತರ ಭಾರತೀಯ ಭಾಷೆಗಳಲ್ಲೂ ಇತ್ತೀಚೆಗೆ ಪ್ರಕಟಣೆ ನೀಡುತ್ತಿರುವುದು ಸಕಾರಾತ್ಮಕ ಬೆಳವಣಿಗೆ. ಆದರೆ, 8ನೇ ಶೆಡ್ಯೂಲ್‌ನಲ್ಲಿರುವ ಎಲ್ಲ ಭಾಷೆಗಳನ್ನು ಬಳಸುತ್ತಿಲ್ಲ ಎಂಬುದು ಅಪಾಯಕಾರಿ ಬೆಳವಣಿಗೆ. ಬಹಳಷ್ಟು ಸಂದರ್ಭಗಳಲ್ಲಿ ಕನ್ನಡವನ್ನು ಕಡೆಗಣಿಸಲಾಗುತ್ತಿದೆ. ಸರ್ಕಾರ ತಾರತಮ್ಯ ನಡೆಯನ್ನು ಬಿಟ್ಟು, ಎಲ್ಲ ವೆಬ್ ಮತ್ತು ಪ್ರಕಟಣೆಗಳಲ್ಲಿ 8ನೇ ಶೆಡ್ಯೂಲ್‌ನಲ್ಲಿರುವ ಎಲ್ಲ ಭಾಷೆಗಳನ್ನೂ ಬಳಸುವಂತೆ ನೀತಿಯನ್ನು ರೂಪಿಸಿ ಆದೇಶ ಹೊರಡಿಸಬೇಕು.

ವಾಚಕರ ವಾಣಿ

ಕುವೆಂಪು ಸಮಗ್ರ ಬರಹ: ಕೈಗೆಟುಕುವಂತಿರಲಿ

ಕುವೆಂಪು ಈ ನಾಡು ಕಂಡ ಬಹಳ ದೊಡ್ಡ ಬರಹಗಾರರು. ಕನ್ನಡ ಮತ್ತು ಕನ್ನಡದ ಬದುಕನ್ನು ಅಖಂಡವಾಗಿ ಗ್ರಹಿಸಿ, ತಮ್ಮ ಸೃಜನಶೀಲತೆಯ ಭಿತ್ತಿಯಲ್ಲಿ ಅವುಗಳ ಎಲ್ಲಾ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನೂ ಆಮೂಲಾಗ್ರವಾಗಿ ಅಭಿವ್ಯಕ್ತಿಸಿದ ಅಪ್ರತಿಮ ಲೇಖಕ. ಕನ್ನಡಿಗರ ಸಾಂಸ್ಕೃತಿಕ ನೆಲೆಯನ್ನು ಶ್ರೀಮಂತಗೊಳಿಸಿದ ಮಹಾನ್ ಚೇತನ ಕುವೆಂಪು ನಮ್ಮ ಪ್ರಜ್ಞೆ ಎಂದರೆ ಅತಿಶಯೋಕ್ತಿಯಾಗಲಾರದು. ಕನ್ನಡದ ಬದುಕಿನಲ್ಲಿ ಹೀಗೆ ಬೆರೆತುಹೋಗಿರುವ ಕುವೆಂಪು ಅವರ ಸಮಗ್ರ ಕೃತಿಗಳು ತನ್ನ ಮನೆಯಲ್ಲಿರಬೇಕು ಎಂದು ಪ್ರತೀ ಸಾಹಿತ್ಯಪ್ರೇಮಿ ಕನ್ನಡಿಗನೂ ಅತ್ಯಂತ ಅಭಿಮಾನದಿಂದ ಬಯಸುತ್ತಾನೆ. ಆದರೆ ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಕುವೆಂಪು ಸಮಗ್ರ ಬರಹಗಳ ಬೆಲೆಯು ಸುಮಾರು ಹನ್ನೆರಡು ಸಾವಿರ ರೂಪಾಯಿಗಳಿಗೂ ಜಾಸ್ತಿಯಿದ್ದು, ಕನ್ನಡ ಸಾಹಿತ್ಯ ಓದುಗನ ಕೈಗೆಟುಕಲಾರದಾಗಿದೆ.

ಸರ್ಕಾರವು ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳ ಸಂಪುಟಗಳನ್ನು ಅತ್ಯಂತ ಕಡಿಮೆ ದರದಲ್ಲಿ ಮುದ್ರಿಸಿ ಲಕ್ಷಾಂತರ ಜನರಿಗೆ ಹಂಚುತ್ತಾ ಬಂದಿದೆ. ಸುಮಾರು ಸಾವಿರ ಪುಟಗಳ ಒಂದು ಬೃಹತ್ ಸಂಪುಟಕ್ಕೆ ಬರೀ ₹ 50ರಂತೆ 22 ಸಂಪುಟಗಳು ₹ 1100ಕ್ಕೆ ಒಂದು ಸೆಟ್‌ನಲ್ಲಿ ದೊರಕುತ್ತವೆ. ಬಾಬಾಸಾಹೇಬರ ಬರಹ ಮತ್ತು ಭಾಷಣಗಳ ಸಂಪುಟಗಳು ಎಷ್ಟು ಜನಪ್ರಿಯವಾಗಿವೆ ಎಂದರೆ, ಅವು ಪ್ರಕಟಗೊಂಡು ಹೊರಬಂದ ಒಂದೆರಡು ವಾರಗಳಲ್ಲೇ ಔಟ್ ಆಫ್ ಸ್ಟಾಕ್ ಆಗಿಬಿಡುತ್ತವೆ.

ಸದ್ಯ ಕುವೆಂಪು ಅವರ ಕೃತಿಗಳ ಮೇಲೆ ಹಕ್ಕುಸ್ವಾಮ್ಯ ಹೊಂದಿರುವ ಕುವೆಂಪು ಪ್ರತಿಷ್ಠಾನದವರು ಅಥವಾ ಅವರ ಕುಟುಂಬದವರು ಈ ದಿಸೆಯಲ್ಲಿ ಉದಾರವಾಗಿ ಯೋಚಿಸಲಿ. ಆ ಮೂಲಕ ಅತ್ಯಂತ ಕಡಿಮೆ ದರದಲ್ಲಿ ತಾವಾದರೂ ಪ್ರಕಟಿಸಲಿ ಅಥವಾ ಸರ್ಕಾರದಿಂದಲಾದರೂ ಪ್ರಕಟವಾಗುವಂತೆ ಮಾಡಿ, ಕನ್ನಡಿಗರ ಮನೆಮನೆಗೆ ಕುವೆಂಪು ಕೃತಿಗಳು ತಲುಪುವಂತೆ ಕ್ರಮ ವಹಿಸಲೆಂದು ಅತ್ಯಂತ ಪ್ರೀತಿಯಿಂದ ಒತ್ತಾಯಿಸುತ್ತೇವೆ.

ಬಿ.ಎಲ್.ರಾಜು, ಮೇಟಿ ಮಲ್ಲಿಕಾರ್ಜುನ, ಬಿ.ಚಂದ್ರೇಗೌಡ, ಸಣ್ಣರಾಮ, ಎಂ.ಗುರುಮೂರ್ತಿ, ಪಿ.ಆರಡಿ ಮಲ್ಲಯ್ಯ, ಕೆ.ಬಿ.ಕಿರಣ್, ಟಿ.ಜಿ.ವೆಂಕಟೇಶ್, ಶಿವಮೊಗ್ಗ

ಸಾಫ್ಟ್‌ವೇರ್ ಗೊಂದಲ ತಪ್ಪಲಿ

ರಾಜ್ಯದಾದ್ಯಂತ ಸ್ಥಳೀಯ ಸಂಸ್ಥೆಗಳಿಂದ ದೊರಕಬೇಕಾದ ಕಟ್ಟಡ ನಿರ್ಮಾಣ ಅನುಮತಿ ಪತ್ರವು ಸಾಫ್ಟ್‌ವೇರ್ ಗೊಂದಲದಿಂದಾಗಿ ಸ್ಥಗಿತಗೊಂಡಿದೆ. ಬರೀ ಎರರ್, ವೇಟ್, ಮೇಂಟೆನೆನ್ಸ್ ಎಂಬ ಮೂರು ಪದಗಳನ್ನು ಬಿಟ್ಟರೆ ಬೇರೇನೂ ಇದರಲ್ಲಿ ಕಾಣುವುದೇ ಇಲ್ಲ.

ನಗರ ಯೋಜನಾ ಪ್ರಾಧಿಕಾರದ ಅನುಮತಿ ಇಲ್ಲದ ಲೇಔಟ್‌ಗಳ ಖಾತಾ ತಡೆಯುವಿಕೆಯಿಂದಾಗಿ ಕಟ್ಟಡನಕ್ಷೆ ಅನುಮೋದನೆ ಕೋರಿ ಎಷ್ಟೋ ಗ್ರಾಹಕರು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ಇದರಿಂದ ಜನರು ಬೇಸತ್ತಿದ್ದಾರೆ. ಸರ್ಕಾರಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯ ಖೋತಾ ಆಗಿದೆ. ಜನರಿಗೂ ನೋಂದಣಿ, ಪರಭಾರೆ ಸಾಲ ಸಿಗದೇ ಪರದಾಡುತ್ತಿದ್ದಾರೆ. ಈ ಸಂಬಂಧ ಹೆಚ್ಚಿನ ವ್ಯವಹಾರ ಸ್ಥಗಿತಗೊಂಡಿದೆ. ಸಂಬಂಧಪಟ್ಟವರು ಸಮಸ್ಯೆಯನ್ನು ಬೇಗ ಬಗೆಹರಿಸಲಿ.

ವೀರೇಶ ಬಂಗಾರಶೆಟ್ಟರ, ಕುಷ್ಟಗಿ

ಜಾಗ ಖಾತೆ ಅಭಿಯಾನ: ರಾಜ್ಯದಾದ್ಯಂತ ಜಾರಿಯಾಗಲಿ

ದಾನಿಗಳು ನೀಡಿದ ಜಾಗವನ್ನು ಸರ್ಕಾರಿ ಶಾಲೆ ಹೆಸರಿಗೆ ದಾಖಲೀಕರಣ ಮಾಡುವ ಅಭಿಯಾನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶುರು ಆಗಿರುವುದು ಹರ್ಷದಾಯಕ ವಿಷಯ. ಹೀಗೇ ಈ ಅಭಿಯಾನವು ಇಡೀ ಕರ್ನಾಟಕದ ತುಂಬೆಲ್ಲಾ ಜಾರಿಯಾದರೆ ಉತ್ತಮ. ಬಹುತೇಕ ಸರ್ಕಾರಿ ಶಾಲೆಗಳಿಗೆ ದಾನ ನೀಡಿದ ಜಾಗ, ಹೊಲ, ಕಣ ಮುಂತಾದ ಭೂಪ್ರದೇಶವನ್ನು ಪಟ್ಟಭದ್ರ ಹಿತಾಸಕ್ತಿಯ ಜನ ದುರುಪಯೋಗ ಮಾಡಿಕೊಂಡಿರುವುದೂ ಇದೆ.ಶಾಲೆಯ ಜಮೀನನ್ನು ಕೃಷಿಗಾಗಿ ಬಳಸಿ ಶಾಲೆಗೆ ಒಂದು ಪೈಸೆಯನ್ನೂ ನೀಡದೆ ಸಂಪೂರ್ಣವಾಗಿ ಫಲವನ್ನು ತಾವೇ ಪಡೆಯುತ್ತಿದ್ದಾರೆ.

ಇಂತಹ ಅನೇಕ ಪ್ರಕರಣಗಳು ರಾಜ್ಯದ ಮೂಲೆಮೂಲೆಗಳಲ್ಲೂ ಇವೆ. ಇದೊಂದು ಪ್ರಮುಖ ಅಭಿಯಾನವಾಗಲಿ, ದಾನಿಗಳು ಸದುದ್ದೇಶದಿಂದ ನೀಡಿದ ‘ಭೂದಾನ’ ಸರ್ವತೋಮುಖ ಶೈಕ್ಷಣಿಕ ಅಭಿವೃದ್ಧಿಗೆ ಸದ್ವಿನಿಯೋಗವಾಗಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಶ್ರೀಲಂಕಾ ಸ್ಥಿತಿ: ಎಚ್ಚರಿಕೆಯ ಗಂಟೆ

ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ದ್ವೀಪರಾಷ್ಟ್ರ ಶ್ರೀಲಂಕಾ ಹೊತ್ತಿ ಉರಿಯುವ ಸ್ಥಿತಿಗೆ ತಲುಪಿದೆ. ಬೊಕ್ಕಸ ಬರಿದಾಗಿದೆ, ದೇಶದ ಆಡಳಿತದ ಚುಕ್ಕಾಣಿ ಹಿಡಿದ ಸ್ವತಃ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಪರಾರಿಯಾಗಿ ಅಜ್ಞಾತ ಸ್ಥಳದಲ್ಲಿ ಅವಿತುಕೊಳ್ಳುವಂಥ ಸ್ಥಿತಿ ನಿಜಕ್ಕೂ ಆ ದೇಶದ ಮಟ್ಟಿಗೆ ಆತಂಕಕಾರಿ. ಇತ್ತ ಆಹಾರ, ಇಂಧನ, ಅಗತ್ಯ ವಸ್ತುಗಳಿಗೆ ಪರಿತಪಿಸುತ್ತಿರುವ ಪ್ರಜೆಗಳು ಬೀದಿಗಿಳಿದು ನಾಯಕರ ಮನೆಗಳಿಗೆ ಬೆಂಕಿ ಹಚ್ಚುವ ಕೃತ್ಯಕ್ಕೆ ಇಳಿದಿದ್ದಾರೆ. ಇದನ್ನು ಗಮನಿಸಿದರೆ ಅಲ್ಲಿಯ ಜನರ ಪರಿಸ್ಥಿತಿ ಹೇಗಿರಬಹುದು ಎಂಬುದು ಊಹಿಸಲು ಅಸಾಧ್ಯ.

ಇದು ನಮ್ಮ ದೇಶಕ್ಕೂ ಎಚ್ಚರಿಕೆಯ ಗಂಟೆಯಾಗಿದೆ. ಮಿತಿಮೀರಿದ ಭ್ರಷ್ಟಾಚಾರ, ನಮ್ಮನ್ನು ಆಳುವವರು, ಅಧಿಕಾರಿಶಾಹಿಯು ಸರ್ಕಾರದ ಹಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಳ್ಳೆ ಹೊಡೆಯಬೇಕೆಂಬ ಮನಃಸ್ಥಿತಿಗೆ ತಲುಪಿರುವುದು, ಆರ್ಥಿಕ ಶಿಸ್ತು ಮರೆತು ಕೇವಲ ಪಕ್ಷಗಳ ಜನಪ್ರಿಯತೆಗಾಗಿ ಬೊಕ್ಕಸದ ಹಣವನ್ನು ಅನುತ್ಪಾದಕ ಯೋಜನೆಗಳಲ್ಲಿ ತೊಡಗಿಸುವುದು, ದುಡಿದು ತಿನ್ನುವ ಮನೋಭಾವ ಕಡಿಮೆಯಾಗಿ ಸರ್ಕಾರದ ಸೌಲಭ್ಯಕ್ಕೆ ಕೈಯೊಡ್ಡಿ ನಿಲ್ಲುವ ಸ್ಥಿತಿಗೆ ಜನ ತಲುಪಿರುವುದು ದೇಶದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ. ಶ್ರೀಲಂಕಾದ ಸ್ಥಿತಿ ಎಲ್ಲ ದೇಶಗಳಿಗೂ ಎಚ್ಚರಿಕೆಯ ಗಂಟೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಇಳೆಗೆ ತಂಪೆರೆದ ಮಳೆ



ಹಾಸನ ತಾಲ್ಲೂಕಿನ ಹೇಮಾವತಿ ಜಲಾಶಯದಿಂದ ನೀರು ಹಾಲ್ನೊರೆಯಂತೆ ಭಾನುವಾರ ಹರಿದ ದೃಶ್ಯ

ರಾಜ್ಯದಲ್ಲಿ ಶೇ 26ರಷ್ಟು ಅಧಿಕ ಮಳೆ


ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ದತ್ತಾಂಶಗಳು ಹೇಳುತ್ತವೆ. ಅಣೆಕಟ್ಟುಗಳು, ಕೆರೆಗಳಿಗೆ ಯಥೇಚ್ಛ ನೀರು ಹರಿದು ಬಂದಿದೆ. ಹಲವು ಜಲಾಶಯಗಳು ತುಂಬುವ ಹಂತಕ್ಕೆ ಬಂದಿವೆ. 2022ರ ಜುಲೈ 10ರವರೆಗೆ ವಾಡಿಕೆಗಿಂತ ಸರಾಸರಿ ಶೇ 26ರಷ್ಟು ಹೆಚ್ಚು ಮಳೆ ಸುರಿದಿದೆ

ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದೆ ಎಂದು ಹವಾಮಾನ ಇಲಾಖೆಯ ದತ್ತಾಂಶಗಳು ತಿಳಿಸಿವೆ. 2022ರ ಜುಲೈ 10ರವರೆಗೆ ಸುರಿದ ಮಳೆಯ ಪ್ರಮಾಣವನ್ನು ಗಮನಿಸಿದರೆ, ವಾಡಿಕೆಗಿಂತ ಸರಾಸರಿ ಶೇ 26ರಷ್ಟು ಹೆಚ್ಚು ಮಳೆ ಸುರಿದಿದೆ. ರಾಜ್ಯದಲ್ಲಿ ಜುಲೈ 10ರವರೆಗೆ 276.7 ಮಿಲಿಮೀಟರ್ ಸರಾಸರಿ ವಾಡಿಕೆ ಮಳೆಯಾಗುತ್ತದೆ. ಈ ಬಾರಿ ಸರಾಸರಿ 349.4 ಮಿಲಿಮೀಟರ್ ಮಳೆಯಾಗಿದೆ

- ಶಿವಮೊಗ್ಗ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 8ರಷ್ಟು ಹಾಗೂ ಕೊಡಗು ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 10ರಷ್ಟು ಕಡಿಮೆ ಮಳೆಯಾಗಿದೆ. ಆದರೆ, ಗದಗದಲ್ಲಿ ಶೇ 9, ಹಾವೇರಿಯಲ್ಲಿ ಶೇ 5 ಮತ್ತು ರಾಯಚೂರು ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 6ರಷ್ಟು ಹೆಚ್ಚು ಮಳೆಯಾಗಿದೆ
- ಮಂಡ್ಯ (ಶೇ 148), ಕೋಲಾರ (ಶೇ 127), ಬೆಂಗಳೂರು ಗ್ರಾಮಾಂತರ (ಶೇ 165), ಬೆಂಗಳೂರು ನಗರ (ಶೇ 135), ಚಿಕ್ಕಬಳ್ಳಾಪುರ (ಶೇ 141) ಜಿಲ್ಲೆಗಳಲ್ಲಿ ಈ ಬಾರಿ ಬಿದ್ದ ಮಳೆಯು ವಾಡಿಕೆಗಿಂತ ದುಪ್ಪಟ್ಟು
- ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡದಲ್ಲಿ ವಾಡಿಕೆಗಿಂತ ಶೇ 25ರಷ್ಟು ಹಾಗೂ ಉಡುಪಿ ಜಿಲ್ಲೆಯಲ್ಲಿ ಶೇ 17ರಷ್ಟು ಅಧಿಕ ಮಳೆ ಸುರಿದಿದೆ


ಆಧಾರ: ಹವಾಮಾನ ಇಲಾಖೆ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ

ರಾಜ್ಯದಲ್ಲಿ ಮಳೆ ಪ್ರಮಾಣ (ಮಿ.ಮೀ.ಗಳಲ್ಲಿ) (ಜುಲೈ 10ರವರೆಗೆ)



ಜೂನ್: ಉತ್ತರ ಒಳನಾಡು, ಮಲೆನಾಡು, ಕರಾವಳಿಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ

- ಪ್ರದೇಶವಾರು ವಾಡಿಕೆ ಮಳೆಯ ಜೊತೆ ಹೋಲಿಸಿದರೆ, ಈ ಬಾರಿ ದಕ್ಷಿಣ ಒಳನಾಡಿನಲ್ಲಿ ಮಾತ್ರ ಅಧಿಕ ಮಳೆ ಸುರಿದಿದೆ. ಈ ಪ್ರದೇಶದಲ್ಲಿ ಜೂನ್ ತಿಂಗಳಲ್ಲಿ 65.5 ಮಿಲಿಮೀಟರ್ ವಾಡಿಕೆ ಮಳೆಯಾಗುತ್ತದೆ. 2021ರ ಜೂನ್‌ನಲ್ಲಿ 76 ಮಿಲಿಮೀಟರ್ ಮಳೆಯಾಗಿತ್ತು. 2022ರ ಜೂನ್‌ನಲ್ಲಿ 120 ಮಿಲಿಮೀಟರ್ ಮಳೆಯಾಗಿದೆ
- ಉತ್ತರ ಒಳನಾಡು, ಮಲೆನಾಡು ಹಾಗೂ ಕರಾವಳಿಯಲ್ಲಿ ಕಳೆದ ವರ್ಷದ ಜೂನ್ ತಿಂಗಳಿಗೆ ಹೋಲಿಸಿದರೆ, ಈ ವರ್ಷದ ಜೂನ್‌ನಲ್ಲಿ ಬಿದ್ದ ಮಳೆಯ ಪ್ರಮಾಣ ಕಡಿಮೆ ಎಂದು ದತ್ತಾಂಶಗಳು ಹೇಳುತ್ತವೆ
- ಉತ್ತರ ಒಳನಾಡಿನಲ್ಲಿ ಪ್ರತೀ ವರ್ಷ ಜೂನ್ ತಿಂಗಳಲ್ಲಿ 103 ಮಿಲಿಮೀಟರ್ ವಾಡಿಕೆ ಮಳೆಯಾಗುತ್ತದೆ. ಕಳೆದ ವರ್ಷ ಇಲ್ಲಿ 131 ಮಿಲಿಮೀಟರ್ ಮಳೆಯಾಗಿತ್ತು. ಆದರೆ ಈ ಜೂನ್‌ನಲ್ಲಿ 90 ಮಿಲಿಮೀಟರ್ ಮಾತ್ರ ಮಳೆಯಾಗಿದೆ
- ಮಲೆನಾಡು ಪ್ರದೇಶದಲ್ಲಿ ಜೂನ್ ತಿಂಗಳಲ್ಲಿ 363 ಮಿಲಿಮೀಟರ್ ವಾಡಿಕೆ ಮಳೆಯಿರುತ್ತದೆ. 2021ರಲ್ಲಿ 302 ಮಿಲಿಮೀಟರ್ ಮಳೆಯಾಗಿದ್ದರೆ, 2021ರಲ್ಲಿ ಅದು 189 ಮಿಲಿಮೀಟರ್‌ಗೆ ಇಳಿಕೆಯಾಗಿದೆ
- ಕರಾವಳಿ ಭಾಗದಲ್ಲಿ ಜೂನ್ ತಿಂಗಳಲ್ಲಿ 831.5 ವಾಡಿಕೆ ಮಳೆಯಿರುತ್ತದೆ. ಹಿಂದಿನ ವರ್ಷ ಇಲ್ಲಿ 733 ಮಿ.ಮೀ. ಮಳೆಯಾಗಿತ್ತು. ಆದರೆ ಈ ವರ್ಷ ಕೇವಲ 533 ಮಿ.ಮೀ. ಮಳೆಯಾಗಿದೆ



10 ಜಿಲ್ಲೆಗಳಲ್ಲಿ ಅತ್ಯಧಿಕ ಮಳೆ — ದೀರ್ಘಾವಧಿ ವಾಡಿಕೆಗಿಂತ ಶೇ 60 ರಷ್ಟು ಹೆಚ್ಚು ಮಳೆ



10 ಜಿಲ್ಲೆಗಳಲ್ಲಿ ಅಧಿಕ ಮಳೆ — ದೀರ್ಘಾವಧಿ ವಾಡಿಕೆಗಿಂತ ಶೇ 20ರಷ್ಟು ಹೆಚ್ಚು ಮಳೆ

10 ಜಿಲ್ಲೆಗಳಲ್ಲಿ ವಾಡಿಕೆ ಮಳೆ — ದೀರ್ಘಾವಧಿ ವಾಡಿಕೆಗಿಂತ ಶೇ -19ರಷ್ಟು ಕಡಿಮೆ ಅಥವಾ ಶೇ 19ರಷ್ಟು ಹೆಚ್ಚು ಮಳೆ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 169

ರುದ್ರನ ನಿಂದಿಸಿದ ದಕ್ಷಬ್ರಹ್ಮ

ನಾರದನಿಗೆ ಪ್ರಯಾಗದಲ್ಲಿ ನಡೆದ ಅಹಿತಕರ ಪ್ರಸಂಗವನ್ನು ಹೇಳುತ್ತಾನೆ, ಬ್ರಹ್ಮ. 'ಹಿಂದೆ ಪ್ರಯಾಗಕ್ಷೇತ್ರದಲ್ಲಿ ಮಹಾಯಾಗವೊಂದು ನಡೆಯಿತು. ಅಲ್ಲಿಗೆ ಸಿದ್ಧರೂ ಪ್ರಸಿದ್ಧರಾದ ಸನಕ ಮೊದಲಾದ ಮಹರ್ಷಿಗಳು, ನವಬ್ರಹ್ಮರು, ದೇವತೆಗಳು, ವೇದವಿದ್ವಾಂಸರು ಬಂದಿದ್ದರು. ನಾನೂ ಯಾಗಕ್ಕೆ ಪರಿವಾರದೊಡನೆ ಹೋಗಿದ್ದೆ. ನನ್ನೊಡನೆ ವೇದಗಳು, ಮತ್ತು ಶಾಸ್ತ್ರಗಳು ಸಶರೀರವನ್ನು ಧರಿಸಿ ಬಂದಿದ್ದವು. ರುದ್ರ ಸಹ ತನ್ನ ಪತ್ನಿ ಭವಾನಿ ಮತ್ತು ಗಣಗಳೊಡನೆ ಬಂದಿದ್ದ. ಶಿವನನ್ನು ನೋಡಿ, ನಾನು ಸೇರಿದಂತೆ ಅಲ್ಲಿ ನೆರೆದಿದ್ದ ದೇವತೆಗಳು, ಸಿದ್ಧರು, ಮುನಿಗಳೆಲ್ಲರೂ ಭಕ್ತಿಯಿಂದ ನಮಸ್ಕರಿಸಿ ಸ್ತುತಿಸಿದೆವು. ಅದೇ ಸಮಯದಲ್ಲಿ ದಕ್ಷಬ್ರಹ್ಮ ಅಲ್ಲಿಗೆ ಅಕಸ್ಮಾತ್ತಾಗಿ ಬಂದ. ದಕ್ಷನು ತಾನೇ ಬ್ರಹ್ಮಾಂಡಕ್ಕೆ ಅಧಿಪತಿ ಎಂಬ ಗರ್ವವುಳ್ಳ ಅವಿವೇಕಿಯಾಗಿದ್ದ. ಇಂತಹ ದಕ್ಷಬ್ರಹ್ಮ ತಂದೆಯಾದ ನನಗೆ ನಮಸ್ಕರಿಸಿ, ಆಸನದಲ್ಲಿ ಕುಳಿತ. ಆದರೆ ಪರಮೇಶ್ವರನಿಗೆ ನಮಸ್ಕರಿಸಲಿಲ್ಲ. ಬದಲಿಗೆ, ಶಿವ ತನಗೆ ನಮಸ್ಕಾರಮಾಡಲಿಲ್ಲ ಅಂತ ದಕ್ಷಬ್ರಹ್ಮ ಅಸಮಾಧಾನಗೊಂಡು, ಕೋಪಗೊಂಡ. ತುಂಬಾ ಗರ್ವಿಷ್ಠನಾದ ದಕ್ಷಬ್ರಹ್ಮ ರುದ್ರನನ್ನು ಮೂದಲಿಸಿದ. 'ಇಲ್ಲಿ ಸೇರಿರುವ ದೇವಾಸುರರೂ ಮತ್ತು ಋಷಿಗಳೆಲ್ಲರೂ ನನಗೆ ನಮಸ್ಕರಿಸಿದರು. ಆದರೆ ಭೂತಪ್ರೇತಗಳೊಂದಿಗೆ ಇರುವ ರುದ್ರ ಮಾತ್ರ ನನಗೆ ನಮಸ್ಕರಿಸಲಿಲ್ಲ. ಸದಾ ಸ್ಮಶಾನದಲ್ಲಿಯೇ ಇರುವ ಈ ರುದ್ರನಿಗೆ ಮಾನಮರ್ಯಾದೆಗಳ ತಿಳಿವಳಿಕೆಯೇ ಇಲ್ಲ. ಇವನು ಸದಾಚಾರಿಯಲ್ಲ. ಭೂತ ಮತ್ತು ಪಿಶಾಚಿಗಳಿಂದ ಬದುಕುವ ಕಡುಮೂರ್ಖ. ನಾಸ್ತಿಕರು, ದುಷ್ಟರು, ಪಾಪಿಗಳು, ಪರನಿಂದಕರು, ಕಾಮುಕರು ಸೇವಿಸುವ ಇವನಿಗೆ ಜಾತಿಯಿಲ್ಲ. ಸದಾ ಸ್ತ್ರೀ(ಸತಿ)ಯಲ್ಲಿ ಆಸಕ್ತನಾಗಿರುವ ರುದ್ರನಿಗೆ ಯಾಗದಲ್ಲಿ ಪ್ರವೇಶವಿಲ್ಲ. ದೇವತೆಗಳೊಡನೆ ಯಜ್ಞಭಾಗವೂ ಇವನಿಗಿಲ್ಲ' – ಎಂದು ದಕ್ಷಬ್ರಹ್ಮ ಶಪಿಸಿ, ದೂಷಿಸಿದ.

'ದಕ್ಷನ ಮಾತನ್ನು ಕೇಳಿ ಕೋಪಗೊಂಡ ನಂದಿಕೇಶ್ವರನು 'ಎಲೈ ದಕ್ಷ. ನೀನು ಮಹಾಮೂಢ, ದುಷ್ಟ. ಆದಕಾರಣವೇ ನನ್ನ ಪ್ರಭುವಾದ ಶಿವನನ್ನು ಯಜ್ಞಬಾಹ್ಯನಾಗುವಂತೆ ಶಪಿಸಿರುವೆ. ಯಾರನ್ನು ಸ್ಮರಿಸಿದುದರಿಂದಲೇ ಯಾಗಗಳು ಸಾರ್ಥಕವಾಗುವುವೋ, ತೀರ್ಥಗಳು ಪವಿತ್ರಗಳಾಗುವುವೋ, ಅಂತಹ ಈ ಶಂಕರನನ್ನು ತಿಳಿವಳಿಕೆಯಿಲ್ಲದೆ ನೀನು ಶಪಿಸಿರುವೆ. ಕೇವಲ ಬ್ರಹ್ಮಚಾಪಲ್ಯದಿಂದಲೇ ನೀನು ಶಿವನನ್ನು ಶಪಿಸಿರುವೆ, ಅಪಹಾಸ್ಯಮಾಡಿರುವೆ. ಇದು ವ್ಯರ್ಥವಾದುದು. ಶಂಕರನೇ ಈ ಜಗತ್ತಿನ ಮಹಾಪ್ರಭು. ಅವನೇ ಈ ಜಗತ್ತನ್ನು ಸೃಷ್ಟಿಸುವವನು, ಸಲಹುವವನು, ಕೊನೆಯಲ್ಲಿ ನಾಶಮಾಡುವವನು. ಇಂತಹ ರುದ್ರನನ್ನು ಹೇಗೆ ಶಪಿಸುವೆ?' ಎಂದ.

'ನಂದಿಯ ತಿರಸ್ಕಾರದ ಮಾತುಗಳನ್ನು ಕೇಳಿದ ದಕ್ಷಪ್ರಜಾಪತಿ ಮತ್ತಷ್ಟು ಕೋಪಗೊಂಡು, 'ಎಲೈ ನಂದಿ ರುದ್ರಗಣಗಳಾದ ನೀವು ವೇದಬಾಹ್ಯರಾಗಿ, ವೇದಮಾರ್ಗವನ್ನು ತ್ಯಜಿಸಿರಿ. ಮಹರ್ಷಿಗಳೂ ನಿಮ್ಮನ್ನು ಬಹಿಷ್ಕರಿಸುವರು. ಕೇವಲ ನಾಸ್ತಿಕರಾಗಿದ್ದು, ಶಿಷ್ಟಾಚಾರವನ್ನು ಬಿಟ್ಟು ಮದ್ಯಪಾನಾದಿಗಳನ್ನು ಮಾಡುತ್ತಾ ಅಪವಿತ್ರವಾದ ಮೂಳೆಗಳನ್ನು ಧರಿಸಿರಿ' ಎಂದು ಶಪಿಸಿದ.

ದಕ್ಷನು ರುದ್ರಗಣಗಳನ್ನು ಶಪಿಸಿದ್ದನ್ನು ಕೇಳಿ ಶಿವಪ್ರಿಯನಾದ ನಂದಿಯು ತುಂಬಾ ಕೋಪಗೊಂಡ. ಮಹಾತೇಜಸ್ವಿಯಾದ ಶಿಲಾದನ ಪುತ್ರನಾದ ನಂದಿಯು ಶಿವನಿಗೆ ತುಂಬಾ ಪ್ರಿಯನಾದವನು. ಮಹಾತೇಜಸ್ಸುಳ್ಳ ನಂದಿಯು ಗರ್ವಿಷ್ಠನೂ ದುಷ್ಟನೂ ಆದ ದಕ್ಷನನ್ನುದ್ದೇಶಿಸಿ, 'ಎಲೈ ದಕ್ಷ, ನೀನು ದುರ್ಬುದ್ಧಿಯುಳ್ಳ ಮೂರ್ಖ. ನಿನಗೆ ಶಿವನಮಹಿಮೆ ತಿಳಿಯದು. ಆದಕಾರಣ ಶಿವನನ್ನು ಮತ್ತು ಅವನ ಗಣಗಳಾದ ನಮ್ಮನ್ನು ವೃಥಾ ಶಪಿಸಿರುವೆ. ಭೃಗುಮುನಿ ಮೊದಲಾದ ಮೂಢರೂ ಮಹಾಪ್ರಭುವಾದ ಶಿವನನ್ನು ತಿಳಿವಳಿಕೆಯಿಲ್ಲದೇ ಅಹಂಕಾರದಿಂದ ಅಪಹಾಸ್ಯಮಾಡಿರುವರು. ಇನ್ನೂ ನಿನ್ನಂತೇ ರುದ್ರನನ್ನು ನಿಂದಿಸುವ ಯಾವ ಮೂರ್ಖರಿರುವರೋ, ಅವರೆಲ್ಲರನ್ನೂ ರುದ್ರನ ತೇಜಸ್ಸಿನ ಮಹಿಮೆಯಿಂದ ನಾನು ಶಪಿಸುವೆ' ಎಂದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಿಳಾ ಪೊಲೀಸ್ ಸಿಬ್ಬಂದಿಯ ಮುಖದ ಮೇಲೆ ಮಹಿಳೆಯೊಬ್ಬರು ಉಗುಳಿದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ವಿಡಿಯೊದಲ್ಲಿ ಇರುವವರು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್. ಕರ್ತವ್ಯದಲ್ಲಿದ್ದ ಮಹಿಳೆಯ ಮೇಲೆ ತೀಸ್ತಾ ಉಗುಳಿದ ವಿಡಿಯೊವನ್ನು ಯಾವ ಮಾಧ್ಯಮವೂ ತೋರಿಸುವುದಿಲ್ಲ ಎಂದು ವಿಡಿಯೊ ಜೊತೆ ವಿರವಣೆ ನೀಡಲಾಗಿದೆ. ಗುಜರಾತ್‌ನಲ್ಲಿ 2002ರಲ್ಲಿ ನಡೆದಿದ್ದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ, ಪ್ರಧಾನಿ ನರೇಂದ್ರ ಮೋದಿ ಮತ್ತಿತರರ ವಿರುದ್ಧ ತೀಸ್ತಾ ಮತ್ತು ಇತರರು ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು ಎಂಬ ಆರೋಪದ ಮೇಲೆ ತೀಸ್ತಾ ಅವರನ್ನು ಗುಜರಾತ್ ಪೊಲೀಸರು ಇತ್ತೀಚೆಗೆ ಬಂಧಿಸಿದ್ದಾರೆ.

ಈ ವಿಡಿಯೊ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ವಿಡಿಯೊದಲ್ಲಿ ಇರುವವರು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿ'ಸೋಜ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯವು ವಿಚಾರಣೆಗೆ ಒಳಪಡಿಸಿದ್ದನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಇತ್ತೀಚೆಗೆ ಪ್ರತಿಭಟನೆ ನಡೆಸಿದ್ದರು. ಆ ವೇಳೆ ನೆಟ್ಟಾ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಾಗ ಅವರು ಅನುಚಿತವಾಗಿ ವರ್ತಿಸಿದ್ದರು ಎಂದು ಹೇಳಲಾಗಿದೆ. ಈ ಘಟನೆಗೆ ಸಂಬಂಧಿಸಿದ ವರದಿಗಳನ್ನು ಎಎನ್‌ಐ ಸುದ್ದಿಸಂಸ್ಥೆ ಮತ್ತು ಇತರ ವೆಬ್‌ಸೈಟ್‌ಗಳು 2022ರ ಜೂನ್ 21ರಂದು ಪ್ರಕಟಿಸಿದ್ದವು ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ





ಬೆರಗಿನ ಬೆಳಕು

ಗುರುರಾಜ ಕರಜಗಿ

ಅಕ್ಲಿಷ್ಟ ಕರ್ಮಿಗಳು

ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ! |
ಮುಡುಪವರ ಮನಸೆಲ್ಲ ಕೈಯ ದುಡಿತಕ್ಕೆ ||
ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು |
ಕಡಿದಲ್ಲವರ್ಗೆ ಬಾಳ್ – ಮಂಕುತಿಮ್ಮ || 668 ||

ಪದ-ಅರ್ಥ: ಕರ್ಮಿಗರೇನು = ಕರ್ಮಿಗಳು(ಕುಶಲಕರ್ಮಿಗಳು) + ಏನು, ಮುಡಿಪವರ = ಮುಡಿಪು + ಅವರ, ಬಣಗು = ಬಣ, ವ್ಯರ್ಥವಾದ, ಹಂಗಿರದು = ಹಂಗು + ಇರದು, ಕಡಿದಲ್ಲವರ್ಗೆ = - ಕಡಿದಲ್ಲ(ಕಷ್ಟವಲ್ಲ) + ಅವರ್ಗೆ(ಅವರಿಗೆ)

ವಾಚ್ಯಾರ್ಥ: ಬಡಗಿ, ಕೃಷಿಕ, ಕುಶಲಕರ್ಮಿಗಳು ಎಲ್ಲರೂ ಯೋಗಿಗಳೇ? ಅವರ ಮನಸ್ಸು ಪೂರ್ತಿ ಮಾಡುವ ಕೆಲಸಕ್ಕೆ ಮುಡಿಪಾಗಿದೆ. ವ್ಯರ್ಥ ಚಿಂತೆಗಳಿಗೆ ಅವರಲ್ಲಿ ಸಮಯವಿಲ್ಲ. ಅವರ ಊಟಕ್ಕೆ ಯಾರ ಹಂಗೂ ಇರುವುದಿಲ್ಲ. ಅಂಥವರಿಗೆ ಬದುಕು ಕಷ್ಟವಾದದ್ದಲ್ಲ.

ವಿವರಣೆ: ರಷ್ಯಾದ ರಾಜಧಾನಿ ಮಾಸ್ಕೋದ ಹೊರವಲಯದಲ್ಲಿ ಒಂದು ದೊಡ್ಡ ಫ್ಯಾಕ್ಟರಿ. ಅದರ ಸುತ್ತಮುತ್ತ ಅಲ್ಲಿ ಕೆಲಸ ಮಾಡುವ ಕೆಲಸಗಾರರ ಮನೆಗಳು. ಅಲ್ಲೊಬ್ಬ ಚಮ್ಮಾರ. ಆತನಿಗೆ ಬೆಳಗ್ಗಿನಿಂದ ರಾತ್ರಿಯವರೆಗೆ ಕೆಲಸ. ಫ್ಯಾಕ್ಟರಿ ಕೆಲಸಕ್ಕೆ ಹೋಗುವ ಕೆಲಸಗಾರರ ಬೂಟುಗಳನ್ನು ರಿಪೇರಿಮಾಡಬೇಕು. ಬೂಟುಗಳಿಲ್ಲದೆ ಅವರು ಕಾರ್ಖಾನೆಗೆ ಹೋಗುವಂತಿಲ್ಲ. ಕೆಲಸಕ್ಕೆ ಹೋಗದಿದ್ದರೆ ಮನೆಯಲ್ಲಿ ಒಲೆ ಹತ್ತುವುದೆಂತು? ಅವರ ಬಳಿ ಎರಡನೆಯ ಜೋಡು ಇಲ್ಲ. ಅವರು ಬಂದು, 'ಅಣ್ಣಾ, ಇಂದೇ ರಾತ್ರಿ ಅವುಗಳನ್ನು ರಿಪೇರಿ ಮಾಡಿಕೊಡು. ಇಲ್ಲದಿದ್ದರೆ ಬೆಳಿಗ್ಗೆ ಕೆಲಸವಿಲ್ಲ' ಎನ್ನುತ್ತಿದ್ದರು. ಅವನಿಗೆ ತುಂಬ ಸುಸ್ತಾಗುತ್ತಿದ್ದರೂ ಅವರಿಗೋಸ್ಕರ ರಾತ್ರಿಯೆಲ್ಲ ತಡವಾಗಿ ಕುಳಿತು ಕೆಲಸಮಾಡುತ್ತಿದ್ದ. ಅವನ ಹೆಂಡತಿ ಹೇಳುತ್ತಿದ್ದಳು, 'ಇಲ್ಲಿಂದ ನೂರು ಮೈಲಿ ದೂರದಲ್ಲಿ ಒಂದು ದೇವಸ್ಥಾನವಿದೆ. ಅದು ತುಂಬ ಜಾಗ್ರತವಾದ ಸ್ಥಳ. ತುಂಬ ಮನೋಹರವೂ ಆಗಿದೆಯಂತೆ. ಹೋಗಿ ಬರೋಣ'. ಆತನಿಗೂ ಅಲ್ಲಿಗೆ ಹೋಗಬೇಕೆಂಬ ತೀವ್ರ ಆಸೆ ಇತ್ತು. ಆದರೆ ಕೆಲಸದ ಒತ್ತಡದಿಂದಾಗಿ ಹೋಗಲಾಗುತ್ತಿರಲಿಲ್ಲ.

ಪ್ರತಿ ಹಗಲು ರಾತ್ರಿ ಆತ ಬೂಟುಗಳನ್ನು ಹೊಲಿಯುವಾಗ, ಮೊಳೆ ಹೊಡೆಯುವಾಗ ನಿಟ್ಟುಸಿರು ಬಿಡುತ್ತಿದ್ದ. 'ಭಗವಂತಾ, ನಿನ್ನ ದರ್ಶನಕ್ಕೆ ಬರಬೇಕೆಂದು ಹೃದಯ ಬಯಸುತ್ತಿದೆ. ಆದರೇನು ಮಾಡಲಿ? ಒಂದು ದಿನದ ಕೆಲಸ ಬಿಟ್ಟರೆ ಹತ್ತಾರು ಪರಿವಾರಗಳು ಉಪವಾಸ ಇರಬೇಕಾಗುತ್ತದೆ. ಅವರಿಗಾಗಿಯೂ ಹೃದಯ ಮಿಡಿಯುತ್ತದೆ. ನೀನೇ ಪರಿಹಾರ ನೀಡು'. ಒಂದು ದಿನ ರಾತ್ರಿ ದೇವರನ್ನು ಚಿಂತಿಸುತ್ತ ಬೂಟು ರಿಪೇರಿ ಮಾಡುತ್ತಿದ್ದಾಗ, ಕೋಣೆಯಲ್ಲೆಲ್ಲ ಬೆಳಕಾಯಿತು. ದೇವರು ದರ್ಶನ ನೀಡಿದ. ಶರಣಾದ ಭಕ್ತನಿಗೆ ಹೇಳಿದ, 'ನೀನು ದೇವಸ್ಥಾನಕ್ಕೆ ಬರಬೇಕಿಲ್ಲ. ನೀನು ಬೂಟುಗಳನ್ನು ರಿಪೇರಿ ಮಾಡುವಾಗ ಬಿಟ್ಟ ಪ್ರತಿಯೊಂದು ನಿಟ್ಟುಸಿರೂ ಪೂಜೆಯೇ. ನಿನ್ನ ಕಾರ್ಯ ದೇವಕಾರ್ಯ. ಅದೊಂದು ಪರಮಯೋಗ. ಅದಕ್ಕಾಗಿ ನಾನೇ ಬರುತ್ತೇನೆ'.

ಕಗ್ಗದ ನಾಲ್ಕು ಸಾಲುಗಳು ಈ ಕಥೆಯನ್ನು ಧ್ವನಿಸುತ್ತವೆ. ಬಡಗಿ, ರೈತ, ಕುಶಲಕರ್ಮಿಗಳು ಶಾಸ್ತ್ರದಲ್ಲಿ ತಿಳಿಸಿದಂತೆ ಯೋಗಿಗಳಲ್ಲ. ಆದರೆ ತಾವು ಒಪ್ಪಿದ ಕರ್ಮಕ್ಕೆ ಬದುಕನ್ನೇ ಮುಡಿಪಾಗಿಟ್ಟವರು. ಆ ತನ್ಮಯತೆಯಲ್ಲಿ ಅವರಿಗೆ ಅನವಶ್ಯಕವಾದ ಚಿಂತೆಗಳನ್ನು ಹಚ್ಚಿಕೊಳ್ಳಲು ಸಮಯವಿಲ್ಲ. ಅವರ ಪರಿಶ್ರಮದಿಂದಲೇ ಅವರಿಗೆ ಊಟ. ಯಾರ ಹಂಗೂ ಅವರಿಗಿಲ್ಲ. ಇಂಥ ಪರಿಶ್ರಮಿಗಳ ಬಾಳು ನೇರ, ಕಷ್ಟವಲ್ಲ. ಕಾರ್ಯ ಕಷ್ಟದ್ದಾಗಿರಬಹುದು ಆದರೆ ನಿಷ್ಕಲ್ಮಷ ಮನಸ್ಸಿನ ಅವರ ಬದುಕು ಕ್ಲಿಷ್ಟವಾದದ್ದಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದ್ವಾದಶಿ ಗಂ. 11-14 **ನಕ್ಷತ್ರ:** ಅನುರಾಧ ಗಂ. 07-50, ಜ್ಯೇಷ್ಠ ಗಂ. 29-16 **ಯೋಗ:** ಶುಕ್ಲ ಗಂ. 21-01, **ಕರಣ:** ಬಾಲವ ಗಂ. 11-14, ಮಿಥುನ ಮಾಸದ 26 ನೇ ದಿನ.
ರಾಹುಕಾಲ: ಬೆಳಿಗ್ಗೆ 07:30–09:00
ಸೂರ್ಯೋದಯ: 06-14 ಸೂರ್ಯಾಸ್ತ: 06-58
ಮುಸ್ಲಿಂ ದಿನಾಂಕ: 11 ಜುಲ್‌ಹಿಜಾನ್
ದಿನ ವಿಶೇಷ: ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ: 2, 9

ಮೇಷ: ನಿಮ್ಮ ವಿದ್ಯಾಬಲದಿಂದ ಉತ್ತಮ ಸ್ಥಾನಮಾನ ಪ್ರಾಪ್ತಿ. ಸ್ನೇಹಿತರಿಗೆ ನಿಮ್ಮಿಂದ ಫಲದಾಯಕ ಸಲಹೆಗಳು ದೊರಕುತ್ತದೆ. ಸಮಾಜದಲ್ಲಿ ನಿಗರ್ವಿಯಾಗಿರುವ ನಿಮ್ಮ ವ್ಯಕ್ತಿತ್ವ ನಿಮಗೆ ಹೆಚ್ಚಿನ ಶೋಭೆ ತರುವುದು.

ವೃಷಭ: ಕಾರ್ಯರಂಗಕ್ಕೆ ಇಳಿಯಬೇಕೆಂಬುವ ಸ್ವಭಾವ ನಿಮ್ಮನ್ನು ಮುನ್ನಡೆಸುವುದು. ಹಣಕಾಸಿನ ವಿಚಾರದಲ್ಲಿ ತಪ್ಪುಗಳು ಆಗದಂತೆ ಜಾಗರೂಕತೆ ವಹಿಸಿರಿ. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಬಹುದು.

ಮಿಥುನ: ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದೆ ಎಂದು ತಿಳಿಯುವ ಮುನ್ನ ಸಮಸ್ಯೆಗಳು ಬರದಂತೆ ಮುನ್ನೆಚ್ಚರಿಕೆ ವಹಿಸಿ. ಮಗನ ಮೇಲಿನ ನಂಬಿಕೆಯು ಕಡಿಮೆಯಾಗುವ ಪ್ರಸಂಗ ನೆಡೆಯಬಹುದು.

ಕರ್ಕಾಟಕ: ನಿಮ್ಮ ಹೃದಯದ ಭಾವನೆ ಒಳ್ಳೆಯ ಧ್ಯೇಯ ಹೊಂದಿದ್ದರೂ ಸಹಚರರಲ್ಲಿ ನೀವಾಡುವ ಮಾತುಗಳು ಭಿನ್ನಾಭಿಪ್ರಾಯ ಮೂಡಬಹುದು. ಆರ್ಥಿಕ ಸಂಪತ್ತಿಗಿಂತ ಜನಸಂಪತ್ತು ಮುಖ್ಯವೆಂಬುದನ್ನು ಮರೆಯದಿರಿ.

ಸಿಂಹ: ಧಾರ್ಮಿಕ ಸಭೆ ಮುಂದಾಳತ್ವ ವಹಿಸಿಕೊಳ್ಳಲು ಹಿಂಜರಿಕೆ ಬೇಡ. ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಭದ್ರ ನೆಲೆ ಸಿಕ್ಕಿ ಮನಸ್ಸಿಗೆ ಹೆಚ್ಚಿನ ನೆಮ್ಮದಿಯಾಗಲಿದೆ. ಮುಂದಿನ ಯೋಜನೆ ಸಿದ್ಧಪಡಿಸಿಕೊಳ್ಳಲು ಶ್ರಮ ವಹಿಸಿ.

ಕನ್ಯಾ: ನಾಸ್ತಿಕರಿಗೆ ಸವಾಲೊಡ್ಡುವ ಸನ್ನಿವೇಶ ಎದುರು. ವಿರುದ್ಧ ದಿಕ್ಕಿನೆಡೆಗೆ ಸಾಗುತ್ತಿರುವ ನಿಮ್ಮನ್ನು ಮನೆಯವರು ಸರಿದಾರಿಗೆ ತರಲಿದ್ದಾರೆ. ತಂತ್ರಜ್ಞಾನಿಗಳಿಗೆ ಮೇಲಧಿಕಾರಿಗಳ ಒತ್ತಡಗಳು ಕಡಿಮೆಯಾಗಲಿದೆ.

ತುಲಾ: ಮನಸ್ಸಿನ ಅಸ್ಥಿರತೆ ಆಧ್ಯಾತ್ಮ ಚಿಂತನೆಗೆ ತೊಂದರೆ ಮಾಡುವುದು. ಪೊಲೀಸ್ ಹುದ್ದೆಯವರಿಗೆ ಮಹತ್ತರ ಕಾರ್ಯಾಚರಣೆಗಾಗಿ ಕುಟುಂಬದಿಂದ ದೂರ ಇರುವ ಪರಿಸ್ಥಿತಿ ಅಥವಾ ದೂರ ಸಂಚಾರ ಮಾಡಬೇಕಾಗಬಹುದು.

ವೃಶ್ಚಿಕ: ನಿಮ್ಮ ಬುದ್ಧಿಶಕ್ತಿಗೆ ಕೆಲಸ ಕೊಟ್ಟರೆ ಇಂದು ಯಶಸ್ಸು ಖಂಡಿತ. ನಿಮ್ಮ ಪ್ರತಿ ಹೆಜ್ಜೆಯು ನಿಮ್ಮ ಆತ್ಮಸಾಕ್ಷಿಗೆ ಒಪ್ಪುವಂತೆ ಇರಲಿ. ತಂದೆ ತಾಯಿಯವರ ತೀರ್ಥಯಾತ್ರೆಗಳಿಗಾಗಿ ಹಣ ವಿನಿಯೋಗ ಆಗುವುದು.

ಧನು: ವ್ಯವಹಾರದಲ್ಲಿ ಆದಾಯ ಕಡಿಮೆ ಎಂದು ಅನಿಸಿದರೂ ಹೆದರುವ ಅಥವಾ ಬದಲು ಮಾಡುವ ಅವಶ್ಯಕತೆ ಇಲ್ಲ. ವಿವಾಹ ವಿಷಯಗಳು ನಿಮ್ಮಿಷ್ಟದಂತೆಯೆ ನಡೆಯುವುದು. ಆಭರಣ ತಯಾರಕರಿಗೆ ವಿಶೇಷ ದಿನ.

ಮಕರ: ವೃತ್ತಿರಂಗದಲ್ಲಿ ಜನರನ್ನು ಆಕರ್ಷಿಸುವಂತಹ ಕೃತಕ ವಾತಾವರಣ ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಮಗಳಿಗೆ ಉತ್ತಮ ಉದ್ಯೋಗ ದೊರೆತು ಸಂತಸ. ವಾಹನಗಳಿಂದ ಅಧಿಕ ಲಾಭ ಪಡೆಯಬಹುದು.

ಕುಂಭ: ಅಧಿಕ ರಕ್ತದೊತ್ತಡದಿಂದ ಬಳಲುವಂತಾಗಬಹುದು. ಸೇವಿಸುವ ಆಹಾರದಲ್ಲಿ ನಿಯಮವಿರಲಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಬಿಡುವಿಲ್ಲ. ಸಾಹಿತ್ಯ, ಕಾದಂಬರಿ ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.


ಮೀನ: ಕಾರ್ಯ ಒಪ್ಪಂದದ ಬಗ್ಗೆ ದೃಢ ನಿರ್ಧಾರ ಮಾಡಿರಿ. ತಪ್ಪುಗಳನ್ನು ಸಮರ್ಥಿಸಿಕೊಳ್ಳುವಂತಹ ಕೆಲಸದ ಬದಲು ತಪ್ಪನ್ನು ಸರಿಪಡಿಸಿಕೊಳ್ಳುವ ಬಗ್ಗೆ ನಿಮ್ಮ ಆಲೋಚನೆಗಳು, ನಿಮ್ಮ ದೈಹಿಕ ಶ್ರಮವಿರಲಿ.

ಪದಬಂಧ 5015

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅವಕಾಶ ಸಿಕ್ಕಿದ್ದಕ್ಕೇ ಇಷ್ಟು ವಿಳಂಬ! (4)
3.ಈತ ಪೂಜೆಮಾಡುವವನು (4)
5.ಕೈಯಲ್ಲಿರುವ ಕಚ್ಚಾಪ್ರತಿ (3)
6.ಕೂಸು ಹುಟ್ಟುವ ಮೊದಲೇ ತಯಾರಾದ ಟೊಪ್ಪಿಗೆ (3)
8.ಸ್ವರದಲ್ಲಿರುವ ರುಜು! (5)
11.ರಾಯತ ಬಡಿಸಿರುವ ಅಗಲವಾದ ತಟ್ಟೆ! (3)
12.ನಮ್ಮ ದೇಶವಿದು (3)
14.ಕಾಡಿನ ಮಧ್ಯಭಾಗ (4)
15.ಆಲಯದ ಹತ್ತಿರವಿರುವ ಆಸ್ಪತ್ರೆ (4)

ಮೇಲಿಂದ ಕೆಳಕ್ಕೆ
1.ಮರ ನಡುವಿದ್ದಾಗಲೇ ಈ ಹೊಂದಾಣಿಕೆ! (4)
2.ಶತಕದಲ್ಲೇ ಯುಗಾರಂಭ! (2)
3.ಆಡುವಾಗ ಅಡ್ಡ ಬಂದಿರುವ ಮೇಕೆ (2)
4.ಲಲಿತಕಲೆಗಳನ್ನು ಅರಿತಿರುವವನು (4)
6.ಟೀ ಸಿಗುವ ಗುಡಿಸಲು! (3)
7.ಮನಸ್ತಾಪವಿದ್ದಾಗಲೇ ಈ ಮುನ್ನುಡಿ! (3)
8.ತನಗೆ ತಾನೇ ಮಾತಾಡುವುದು (3)
9.ಹೋಲಿಕೆಯ ವಸ್ತು (4)
10.ಉಪಾಯದಿಂದ ಹಾಕಿರುವ ಬುನಾದಿ! (4)
12.ಕೂಪ ಇಲ್ಲಿ ಕಾಣುತ್ತಿದೆ (2)
13.ತವರು ಮನೆಯಲ್ಲಿರುವ ಮರ! (2)



5014ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಲಲ್ಲೆಮಾತು 3.ಪಾದರಸ 5.ಟಿಸಿಲು 6.ನೆನಪು 8.ವಿನ್ಯಾಸ 9.ನಸರಿ 10.ಅತ್ತರು 11.ನಿರ್ಲಕ್ಷ್ಯ 12.ವಿದಾಯ 13.ಚಲನ 14.ಮಸೀದಿ 16.ಮಶಕ 18.ತರಬೇತಿ 19.ವಿದೂಷಕ
ಮೇಲಿಂದ ಕೆಳಕ್ಕೆ: 1.ಲಲನೆ 2.ತುಟಿ 3.ಪಾಲು 4.ಸಮಾಸ 7.ಪುನರುತ್ಥಾನ 8.ವಿಧಿನಿಯಮ 13.ಚರ್ವಿತ 15.ದಿನಾಂಕ 16.ಮತಿ 17.ಕವಿ

ಸುಡೊಕು 5401

		4		9		1		8
	1			3			6	
		7	4		1	3		9
2	9				4	6		
1	4						3	
							9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5400 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6



ದ್ರೌಪದಿ ಮುರ್ಮು ಅವರನ್ನು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ನಿವಾಸದಲ್ಲಿ ಭಾನುವಾರ ಸನ್ಮಾನಿಸಲಾಯಿತು. ದೇವೇಗೌಡರ ಪತ್ನಿ ಚನ್ನಮ್ಮ ಮಕ್ಕಳಾದ ಎಚ್‌.ಡಿ. ರೇವಣ್ಣ, ಎಚ್‌.ಡಿ. ಕುಮಾರಸ್ವಾಮಿ ಸೇರಿದಂತೆ ಅವರ ಕುಟುಂಬದ ಸದಸ್ಯರು ಇದ್ದರು

ದ್ರೌಪದಿ ಮುರ್ಮು ಪ್ರಚಾರ

ಬೆಂಗಳೂರು: ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ರಾಜ್ಯದ ಬಿಜೆಪಿ ಸಂಸದರು ಮತ್ತು ಶಾಸಕರನ್ನು ಭೇಟಿಮಾಡಿ ಬೆಂಬಲ ಕೋರಿದರು.

ವಿಶೇಷ ವಿಮಾನದಲ್ಲಿ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಮುರ್ಮು ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸ್ವಾಗತಿಸಿದರು. ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಕಿಶನ್ ರೆಡ್ಡಿ ಸೇರಿದಂತೆ ಪಕ್ಷದ ನಾಯಕರ ಜತೆ ಸಮಾಲೋಚನೆ ನಡೆಸಿದರು.

ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ನಡೆದ ಬಿಜೆಪಿ ಸಂಸದರು, ಶಾಸಕರ ಸಭೆಯಲ್ಲಿ ಮುರ್ಮು ಪಾಲ್ಗೊಂಡರು. ಬಿಜೆಪಿ ರಾಜ್ಯ ಘಟಕದ ವತಿಯಿಂದ ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ, ದೇವರ ವಿಗ್ರಹದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ಬಸವರಾಜ ಬೊಮ್ಮಾಯಿ, ನಳಿನ್ ಕುಮಾರ್ ಕಟೀಲ್, ಪ್ರಲ್ಹಾದ ಜೋಶಿ, ಕಿಶನ್ ರೆಡ್ಡಿ, ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಶಾಸಕ ಜಗದೀಶ ಶೆಟ್ಟರ್, ಸಂಸದ ಡಿ.ವಿ. ಸದಾನಂದ ಗೌಡ ಇದ್ದರು.

ಕನ್ನಡದಲ್ಲೇ ಮಾತು: ದ್ರೌಪದಿ ಮುರ್ಮು ಅವರು ಭಾನುವಾರ ನಡೆದ ಬಿಜೆಪಿ ಸಂಸದರು ಮತ್ತು ಶಾಸಕರ ಸಭೆಯಲ್ಲಿ ಕನ್ನಡದಲ್ಲೇ ಮಾತು ಆರಂಭಿಸಿದರು. 'ಕರ್ನಾಟಕದ ಎಲ್ಲ ಸಂಸದರು ಮತ್ತು ಶಾಸಕರಿಗೆ ನಮಸ್ಕಾರ' ಎಂದು ಮಾತು ಆರಂಭಿಸಿದಾಗ ಎಲ್ಲರೂ ಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಿದರು.

ದೇವೇಗೌಡರ ಮನೆಗೆ ಭೇಟಿ: ರಾಜ್ಯಸಭಾ ಸದಸ್ಯರೂ ಆಗಿರುವ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿದ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು. ದೇವೇಗೌಡರ ಕುಟುಂಬದ ಸದಸ್ಯರು ಮುರ್ಮು ಅವರನ್ನು ಸನ್ಮಾನಿಸಿದರು.

ಅಧ್ಯಕ್ಷರ ಪದತ್ಯಾಗಕ್ಕೆ ಪ್ರತಿಭಟನಕಾರರ ಪಟ್ಟು: ನಿವಾಸದಲ್ಲಿ ಭಾರಿ ಮೊತ್ತದ ಹಣ ಪತ್ತೆ

'ರಾಜೀನಾಮೆ ತನಕ ಅಧ್ಯಕ್ಷರ ಮನೆ ಬಿಡೆವು'

ಕೊಲಂಬೊ (ಪಿಟಿಐ): ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ರಾಜೀನಾಮೆ ನೀಡುವವರೆಗೆ ಅಧ್ಯಕ್ಷರ ನಿವಾಸ ತೊರೆಯುವುದಿಲ್ಲ ಎಂದು ಪ್ರತಿಭಟನಕಾರರು ಭಾನುವಾರ ಹೇಳಿದ್ದಾರೆ.

ಅಧ್ಯಕ್ಷ ಗೊಟಬಯ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದ ನೂರಾರು ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ಕಿತ್ತೆಸೆದು ಅಧ್ಯಕ್ಷರ ನಿವಾಸಕ್ಕೆ ಶನಿವಾರ ನುಗ್ಗಿದ್ದರು.

ಬುಧವಾರ ರಾಜೀನಾಮೆ ನೀಡುವುದಾಗಿ ಗೊಟಬಯ ಹೇಳಿದ್ದಾರೆ. ಆದರೆ, 'ನಮ್ಮ ಹೋರಾಟ ಮುಗಿದಿಲ್ಲ. ಅವರು ರಾಜೀನಾಮೆ ಕೊಟ್ಟ ಬಳಿಕವೇ ಹೋರಾಟ ಮುಗಿಯಲಿದೆ' ಎಂದು ಪ್ರತಿಭಟನಕಾರರು ಹೇಳಿದ್ದಾರೆ. ನೌಕಾಪಡೆಯ ಹಡಗಿನಲ್ಲಿ ಗೊಟಬಯ ಅವರು ತಂಗಿದ್ದಾರೆ ಎನ್ನಲಾಗಿದೆ.

ಅವರ ಅಧಿಕೃತ ನಿವಾಸದಲ್ಲಿ 1.78 ಕೋಟಿ ಶ್ರೀಲಂಕಾ ರೂಪಾಯಿ (₹39 ಲಕ್ಷ) ದೊರೆತಿದೆ ಎಂದು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ ಅಧ್ಯಕ್ಷರ ನಿವಾಸಕ್ಕೆ ನುಗ್ಗಿದ ಪ್ರತಿಭಟನಕಾರರು ಹೇಳಿದ್ದಾರೆ.

ಪ್ರತಿಭಟನಕಾರರು ಹಣವನ್ನು ಎಣಿಸುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಹಣವನ್ನು ಪ್ರತಿಭಟನಕಾರರು ಸ್ಥಳೀಯ ಪೊಲೀಸರಿಗೆ ಒಪ್ಪಿಸಿದ್ದಾರೆ.

ವಸಾಹತುಶಾಹಿ ಅವಧಿಯಲ್ಲಿ ನಿರ್ಮಾಣವಾದ ಐಷಾರಾಮಿ ಬಂಗಲೆಯನ್ನು ಕಂಡು ಪ್ರತಿಭಟನಕಾರರು ಚಕಿತರಾಗಿದ್ದಾರೆ. 'ನಾಯಕರು ಇಂತಹ ಐಷಾರಾಮದಲ್ಲಿ ಜೀವಿಸುತ್ತಿದ್ದರೆ ಸಾಮಾನ್ಯ ಜನರು ಹೇಗೆ ಬದುಕುತ್ತಿದ್ದಾರೆ ಎಂಬುದರ ಕಲ್ಪನೆಯೇ ಅವರಿಗೆ ಇರುವುದಿಲ್ಲ' ಎಂದು ಬೌದ್ಧ ಬಿಕ್ಕು ಸುಮೇದಾ ಹೇಳಿದ್ದಾರೆ.

ಅನಿಲ ಹಂಚಿಕೆಗೆ ಆದೇಶ: ಗೊಟಬಯ ಅವರು, ಜನರು ನುಗ್ಗುವುದಕ್ಕೆ ಮುಂಚೆಯೇ ಮನೆ ಬಿಟ್ಟು ಪರಾರಿಯಾಗಿದ್ದರು. ಅವರು ಎಲ್ಲಿದ್ದಾರೆ ಎಂಬ ಮಾಹಿತಿ ಭಾನುವಾರವೂ ಗೊತ್ತಾಗಿಲ್ಲ. ಆದರೆ, ದೇಶಕ್ಕೆ ಸಿಕ್ಕ 3,700 ಟನ್ ಅಡುಗೆ ಅನಿಲ ಹಂಚಿಕೆಯು ಅತ್ಯಂತ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಗೊಟಬಯ ಆದೇಶ ನೀಡಿದ್ದಾರೆ.



ಶ್ರೀಲಂಕಾ ಅಧ್ಯಕ್ಷರ ನಿವಾಸಕ್ಕೆ ಭಾನುವಾರವೂ ಹಲವು ಮಂದಿ ಭೇಟಿ ಕೊಟ್ಟಿದ್ದಾರೆ. ಅಲ್ಲಿನ ಈಜುಕೊಳದಲ್ಲಿ ಹಲವರು ಈಜಾಡಿದ್ದಾರೆ ಪಿಟಿಐ ಚಿತ್ರ

ಮುಖ್ಯ ಬೆಳವಣಿಗೆಗಳು

- ಶ್ರೀಲಂಕಾ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ಮನೆಗೆ ಶನಿವಾರ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಶ್ರೀಲಂಕಾ ಪೊಲೀಸರು ಭಾನುವಾರ ಬಂಧಿಸಿದ್ದಾರೆ
- ಶ್ರೀಲಂಕಾ ರೈತರಿಗೆ ನೆರವಾಗುವ ಮತ್ತು ಆಹಾರ ಭದ್ರತೆ ವಿಚಾರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಉತ್ತೇಜಿಸುವ ಸಲುವಾಗಿ ಭಾರತವು ಶ್ರೀಲಂಕಾಕ್ಕೆ 44,000 ಟನ್ ಯೂರಿಯಾವನ್ನು ಸಾಲದ ರೂಪದಲ್ಲಿ ನೀಡಿದೆ. ಯೂರಿಯಾವು ಶ್ರೀಲಂಕಾಕ್ಕೆ ಭಾನುವಾರ ತಲುಪಿದೆ ಎಂದು ಶ್ರೀಲಂಕಾದ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ
- ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡುವುದಾಗಿ ಘೋಷಿಸಿದ ಬಳಿಕ ದೇಶದ ರಾಜಧಾನಿ ಕೊಲಂಬೊ ಭಾನುವಾರ ಶಾಂತ ಸ್ಥಿತಿಗೆ ಮರಳಿದೆ

ಪಾತಾಳಕ್ಕೆ ಕುಸಿದ ಕೀರ್ತಿ

ಎಲ್‌ಟಿಟಿಇ ವಿರುದ್ಧದ ಆಂತರಿಕ ಯುದ್ಧವನ್ನು ಗೆದ್ದ ಕಾರಣಕ್ಕೆ ಮಹಿಂದಾ ರಾಜಪಕ್ಸ ಮತ್ತು ಗೊಟಬಯ ರಾಜಪಕ್ಷ ಅವರನ್ನು ಶ್ರೀಲಂಕಾದ ಜನರು ಹೀರೊಗಳಂತೆ ಕಾಣುತ್ತಿದ್ದರು. ಆದರೆ, ಅವರ ಕೀರ್ತಿ ಈಗ ಪಾತಾಳಕ್ಕೆ ಕುಸಿದಿದೆ. ಒಂದು ದಶಕಕ್ಕೂ ಹೆಚ್ಚು ಕಾಲ ಶ್ರೀಲಂಕಾ ರಾಜಕಾರಣದ ಮೇಲೆ ರಾಜಪಕ್ಸ ಕುಟುಂಬವು ಹಿಡಿತ ಸಾಧಿಸಿತ್ತು. ಪ್ರಧಾನಿಯಾಗಿದ್ದ ಮಹಿಂದಾ ಅವರು ಈಗಾಗಲೇ ರಾಜೀನಾಮೆ ನೀಡಿದ್ದಾರೆ. ಗೊಟಬಯ ಅವರು ಇದೇ ಬುಧವಾರ ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ.

ದೇಶವು ಸ್ವತಂತ್ರಗೊಂಡ ನಂತರದ ಏಳು ದಶಕಗಳಲ್ಲಿಯೇ ಅತ್ಯಂತ ತೀವ್ರವಾದ ಆರ್ಥಿಕ ಬಿಕ್ಕಟ್ಟಿಗೆ ಶ್ರೀಲಂಕಾ ಸಿಲುಕಿದೆ. ಅರ್ಥ ವ್ಯವಸ್ಥೆಯನ್ನು ಸರಿಯಾಗಿ ನಿಭಾಯಿಸಿಲ್ಲ ಎಂದು ಅಧ್ಯಕ್ಷ ಮತ್ತು ಪ್ರಧಾನಿ ಕುರಿತು ಜನರು ಆಕ್ರೋಶಗೊಂಡಿದ್ದಾರೆ.

ವಿದೇಶಿ ವಿನಿಮಯ ಮೀಸಲು ಕೊರತೆಯಿಂದಾಗಿ ದೇಶವು ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಸಾಲ ಮರುಪಾವತಿಯೂ ಆಗಿಲ್ಲ. ಇಂಧನ ಕೊರತೆ ಮತ್ತು ಅಗತ್ಯ ವಸ್ತುಗಳ ಕೊರತೆಯು ಜನರನ್ನು ಕಂಗೆಡಿಸಿದೆ.

ಜನರ ಜತೆ ಭಾರತ

ಭಾರತವು ಶ್ರೀಲಂಕಾದ ಜನರ ಜತೆಗೆ ನಿಲ್ಲಲಿದೆ. ಸಮೃದ್ಧಿ ಮತ್ತು ಪ್ರಗತಿಯ ತಮ್ಮ ಆಕಾಂಕ್ಷೆಗಳನ್ನು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಜನರು ಈಡೇರಿಸಿಕೊಳ್ಳುವ ಯತ್ನ ನಡೆಸುವಾಗ ಅವರ ಜತೆಗೆ ಭಾರತವು ನಿಲ್ಲಲಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಶ್ರೀಲಂಕಾದಲ್ಲಿನ ತ್ವರಿತಗತಿಯ ಬೆಳವಣಿಗೆಗಳ ನಡುವೆ, ಭಾರತವು ಈ ಪ್ರತಿಕ್ರಿಯೆ ನೀಡಿದೆ.

'ಶ್ರೀಲಂಕಾ ಮತ್ತು ಅಲ್ಲಿನ ಜನರು ಎದುರಿಸುತ್ತಿರುವ ಹಲವು ಸವಾಲುಗಳ ಬಗ್ಗೆ ನಮಗೆ ಅರಿವಿದೆ. ಈ ಕ್ಲಿಷ್ಟಕರ ಸನ್ನಿವೇಶದಿಂದ ಹೊರಬರುವ ಪ್ರಯತ್ನದಲ್ಲಿ ಭಾರತವು ಜನರಿಗೆ ಬೆಂಬಲವಾಗಿ ನಿಲ್ಲಲಿದೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ತೀವ್ರ ಆರ್ಥಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಭಾರತವು ಶ್ರೀಲಂಕಾಕ್ಕೆ ನೀಡಿರುವ ಆರ್ಥಿಕ ನೆರವನ್ನು ಅವರು ಉಲ್ಲೇಖಿಸಿದ್ದಾರೆ.





ಕನ್ನಯ್ಯ ಲಾಲ್ ಹತ್ಯೆ ಪ್ರಕರಣ: 7ನೇ ಆರೋಪಿ ಬಂಧನ

ನವದೆಹಲಿ (ಪಿಟಿಐ): ಉದಯಪುರದ ಟೇಲರ್ ಕನ್ನಯ್ಯ ಲಾಲ್ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳವು(ಎನ್‌ಐಎ) ಏಳನೇ ಆರೋಪಿಯನ್ನು ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಫರ್ಹಾದ್ ಮೊಹಮ್ಮದ್ ಶೇಖ್ ಎಂಬಾತನನ್ನು ಶನಿವಾರ ಬಂಧಿಸಲಾಗಿದೆ. ಈತ ಪ್ರಕರಣದ ಪ್ರಮುಖ ಆರೋಪಿ ರಿಯಾಜ್ ಅನ್ಸಾರಿಯ ಆಪ್ತನಾಗಿದ್ದು, ಟೇಲರ್ ಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದಾನೆ ಎಂದು ಹೇಳಿದ್ದಾರೆ.

ಕನ್ನಯ್ಯ ಲಾಲ್ ಅವರನ್ನು ಜೂನ್ 28ರಂದು ಅವರ ಅಂಗಡಿಯಲ್ಲಿ ಆರೋಪಿಗಳಾದ ರಿಯಾಜ್ ಅನ್ಸಾರಿ ಮತ್ತು ಗೌಸ್ ಮಹಮ್ಮದ್ ಶಿರಚ್ಛೇದ ಮಾಡಿದ್ದರು.

ಬಾಬುಲ್ ಸುಪ್ರಿಯೊ– ಟಿಎಂಸಿ ರಾಷ್ಟ್ರೀಯ ವಕ್ತಾರ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶಾಸಕ ಬಾಬುಲ್ ಸುಪ್ರಿಯೊ ಅವರನ್ನು ಪಕ್ಷದ ರಾಷ್ಟ್ರೀಯ ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಮತಾ ಬ್ಯಾನರ್ಜಿ ಬಣದ ಮೂಲಗಳು ತಿಳಿಸಿವೆ.

ಈ ಬಗ್ಗೆ ಟ್ವೀಟ್ ಮಾಡಿರುವ ಸುಪ್ರಿಯೊ ಅವರು, 'ಟಿಎಂಸಿ ರಾಷ್ಟ್ರೀಯ ವಕ್ತಾರನನ್ನಾಗಿ ನೇಮಕ ಮಾಡಿರುವುದಕ್ಕೆ ಗೌರವಾನ್ವಿತ ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ಅವರಿಗೆ ಧನ್ಯವಾದ. ನನಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಪ್ರಯತ್ನಿಸುತ್ತೇನೆ' ಎಂದು ಹೇಳಿದ್ದಾರೆ.

ಅಮಿತ್ ಶಾ, ಕುಲದೀಪ್ ಭೇಟಿ

ಚಂಡೀಗಢ (ಪಿಟಿಐ): ಹರಿಯಾಣದ ಕಾಂಗ್ರೆಸ್ ಶಾಸಕ ಕುಲದೀಪ್ ಬಿಷ್ಣೋಯಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭಾನುವಾರ ಭೇಟಿಯಾಗಿದ್ದಾರೆ. ಅವರು ಬಿಜೆಪಿ ಸೇರಲಿದ್ದಾರೆ ಎಂಬ ವದಂತಿಗೆ ಇದ ಪುಷ್ಟಿ ನೀಡಿದೆ.

ನಕಲಿ ಮೊಕದ್ದಮೆ, ಡಿಕ್ರಿ ಪ್ರಕರಣ • ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ

'ಐಪಿಎಸ್' ವಿಚಾರಣೆಗೆ ಹೆದರಿತಾ ಸಿಐಡಿ?

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಕಲಿ ಕಕ್ಷಿದಾರ–ಪ್ರತಿವಾದಿಗಳನ್ನು ಸೃಷ್ಟಿಸಿ ನ್ಯಾಯಾಲಯದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆದು ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಲಪಟಾಯಿಸುತ್ತಿದ್ದ ಭೂಗಳ್ಳರ ಜಾಲ ಭೇದಿಸಿದ್ದ ಸಿಐಡಿ ಅಧಿಕಾರಿಗಳು, ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎನ್ನಲಾದ ಐಪಿಎಸ್ ಅಧಿಕಾರಿಯೊಬ್ಬರನ್ನು ವಿಚಾರಣೆಗೆ ಒಳಪಡಿಸಲು ಹಿಂದೇಟು ಹಾಕುತ್ತಿರುವ ಆರೋಪ ಕೇಳಿಬಂದಿದೆ.

ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕಬಳಿಸಲು ನಕಲಿ ಮೊಕದ್ದಮೆ ಹೂಡುತ್ತಿದ್ದ ಜಾಲದ ಬಗ್ಗೆ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ವಕೀಲರು ಸೇರಿದಂತೆ ಹಲವರನ್ನು ಈಗಾಗಲೇ ಬಂಧಿಸಿದ್ದಾರೆ. ಅವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲೂ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಪೊಲೀಸ್ ಇಲಾಖೆಯ ಉನ್ನತ ಸ್ಥಾನದಲ್ಲಿರುವ ಐಪಿಎಸ್ ಅಧಿಕಾರಿಯೊಬ್ಬರು ನಕಲಿ ಮೊಕದ್ದಮೆ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ವ್ಯಕ್ತವಾಗಿದೆ. ಆದರೆ, ಅವರನ್ನು ವಿಚಾರಣೆಗೆ ಒಳಪಡಿಸಲು ಸಿಐಡಿ ಅಧಿಕಾರಿಗಳು ಹೆದರುತ್ತಿರುವುದಾಗಿ ಕೆಲ ಆಸ್ತಿಗಳ ಮಾಲೀಕರು ದೂರುತ್ತಿದ್ದಾರೆ.

'ಕಷ್ಟಪಟ್ಟು ದುಡಿದು ಸಂಪಾದಿಸಿದ ಆಸ್ತಿಯನ್ನು ನಕಲಿ ಕಕ್ಷಿದಾರ–ಪ್ರತಿವಾದಿಗಳ ಮೂಲಕ ಸುಲಭವಾಗಿ ಕಬಳಿಸುವ ಜಾಲ ಬೆಂಗಳೂರು ಹಾಗೂ ಇತರೆಡೆ ಸಕ್ರಿಯವಾಗಿದೆ. ಜಾಲ ಭೇದಿಸಿರುವ ಸಿಐಡಿ ಅಧಿಕಾರಿಗಳ ಕೆಲಸ ಮೆಚ್ಚುವಂಥದ್ದು. ಆದರೆ, ಪ್ರಕರಣದಲ್ಲಿ ಭಾಗಿಯಾಗಿರುವ ಐಪಿಎಸ್ ಅಧಿಕಾರಿ ವಿಚಾರಣೆ ಕೈಬಿಟ್ಟಿರುವುದು ಸರಿಯಲ್ಲ' ಎಂದು ಹೆಸರು ಹೇಳಲು ಬಯಸದ ಆಸ್ತಿ ಮಾಲೀಕರೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

'ನಕಲಿ ಮೊಕದ್ದಮೆ ಹೂಡಿ ನ್ಯಾಯಾಲಯದಿಂದ ಡಿಕ್ರಿ ತಂದಿದ್ದ ಆರೋಪಿಗಳು, ನಮ್ಮ ಆಸ್ತಿಗೆ ಬೇಲಿ ಹಾಕಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಬೆದರಿಕೆಯೊಡ್ಡಿದ್ದರು. ಆರೋಪಿಗಳ ಪರ ನಿಂತ ಐಪಿಎಸ್ ಅಧಿಕಾರಿ, ಅಧಿಕಾರ ದುರುಪಯೋಗಪಡಿಸಿಕೊಂಡು ದರ್ಪ ಪ್ರದರ್ಶಿಸಿದ್ದರು. ಸಿಐಡಿ ಪ್ರಕರಣ ಭೇದಿಸಿದ ನಂತರವೇ, ಐಪಿಎಸ್ ಅಧಿಕಾರಿಯೂ ಆರೋಪಿಗಳ ಜೊತೆ ಶಾಮೀಲಾಗಿರುವುದು ಗೊತ್ತಾಗಿದೆ. ಇದರ ಹಿಂದೆ ಭೂಮಾಫಿಯಾ ಕೈವಾಡ ಇದೆ' ಎಂದೂ ತಿಳಿಸಿದರು.

'ಹಿರಿಯ ಅಧಿಕಾರಿ ಎಂಬ ಕಾರಣಕ್ಕೆ ಹಾಗೂ ತಮ್ಮ ಹುದ್ದೆಗೆ ಕುತ್ತು ಬರುವ ಭಯದಲ್ಲಿ ಸಿಐಡಿ ಅಧಿಕಾರಿಗಳು, ಐಪಿಎಸ್ ಅಧಿಕಾರಿಯನ್ನು ವಿಚಾರಣೆ ನಡೆಸುತ್ತಿಲ್ಲ. ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಹೈಕೋರ್ಟ್ ಚಾಟಿ ಬೀಸಿದ್ದರಿಂದ, ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಹೈಕೋರ್ಟ್ ನ್ಯಾಯಾಧೀಶರೇ, ನಕಲಿ ಮೊಕದ್ದಮೆ ಪ್ರಕರಣ ಪತ್ತೆ ಹಚ್ಚಿದ್ದರು. ಇದೀಗ, ಪ್ರಕರಣದಲ್ಲಿ ಶಾಮೀಲಾಗಿರುವ ಐಪಿಎಸ್ ಅಧಿಕಾರಿಗಳು ಹಾಗೂ ಪ್ರಭಾವಿಗಳ ವಿರುದ್ಧವೂ ತನಿಖೆ ನಡೆಸಲು ಹೈಕೋರ್ಟ್ ಸೂಚನೆ ನೀಡಬೇಕೆಂಬುದು ನಮ್ಮೆಲ್ಲರ ಮನವಿ' ಎಂದೂ ಹೇಳಿದರು.

ಆಸ್ತಿ ಮಾಲೀಕರ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಸಿಐಡಿ ಅಧಿಕಾರಿಯೊಬ್ಬರು, 'ಪ್ರಕರಣವು ನ್ಯಾಯಾಲಯದಲ್ಲಿದೆ. ಸದ್ಯಕ್ಕೆ ಏನು ಹೇಳಲಾಗದು' ಎಂದು ಹೇಳಿದರು.

ವಕೀಲರ ವಿರುದ್ಧ ಸಾಕ್ಷ್ಯ ಹುಡುಕಾಟ: ಬಂಧಿತ ವಕೀಲರ ಮೇಲೆ ದೋಷಾರೋಪ ಪಟ್ಟಿ ಸಲ್ಲಿಸಲು ಇರುವ ಸಾಕ್ಷ್ಯ ಹಾಗೂ ಅವಕಾಶಗಳಿಗಾಗಿ ಸಿಐಡಿ ಅಧಿಕಾರಿಗಳು ಹುಡುಕಾಟ ಆರಂಭಿಸಿದ್ದಾರೆ.

'ಈ ಅಕ್ರಮಕ್ಕೆ ಸಹಕರಿಸಿದ್ದ ನ್ಯಾಯಾಲಯದಲ್ಲಿ ವಾದಿಸಿದ್ದ ವಕೀಲರನ್ನು ಈಗಾಗಲೇ ಬಂಧಿಸಲಾಗಿದೆ. ಇವರು ಖುಲಾಸೆ ಆಗುವ ಸಾಧ್ಯತೆ ಹೆಚ್ಚು. ಹೀಗಾಗಿ, ಬಲವಾದ ಸಾಕ್ಷ್ಯವನ್ನು ಇಟ್ಟುಕೊಂಡು ದೋಷಾರೋಪ ಪಟ್ಟಿ ಸಲ್ಲಿಸಬೇಕಿದೆ' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

'130 ಪ್ರಕರಣ: ಹೈಕೋರ್ಟ್‌ಗೆ ವರದಿ'

ಪ್ರಜಾವಾಣಿ ವಿಶೇಷ

'ಮೋಸದ ಮಾರ್ಗದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದ' ಬಗ್ಗೆ ಹೈಕೋರ್ಟ್ ನೀಡಿದ್ದ ನಿರ್ದೇಶನದಂತೆ ಲಘು ಪ್ರಕರಣಗಳ ನ್ಯಾಯಾಲಯದ (ಎಸ್‌ಸಿಸಿಎಚ್) ರಿಜಿಸ್ಟ್ರಾರ್ ಆರ್. ಧನಲಕ್ಷ್ಮಿ ಅವರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು. 2020ರ ಡಿಸೆಂಬರ್ 7ರಂದು ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ.

'ಹೈಕೋರ್ಟ್ ನಿರ್ದೇಶನದಂತೆ ತನಿಖೆ ನಡೆಯುತ್ತಿದೆ. ನಕಲಿ ಮೊಕದ್ದಮೆಯ 130 ಪ್ರಕರಣ ಪತ್ತೆ ಮಾಡಲಾಗಿದ್ದು, ಒಟ್ಟು ಆಸ್ತಿ ಮೌಲ್ಯ ಸುಮಾರು ₹ 1,000 ಕೋಟಿ ಇದೆ. ಹೆಚ್ಚುವರಿಯಾಗಿ ಇಂಥ 500 ಕ್ಕೂ ಹೆಚ್ಚು ಪ್ರಕರಣಗಳು ಇರುವ ಬಗ್ಗೆಯೂ ಸಂಶಯವಿದೆ. ಈ ಬಗ್ಗೆ ಹೈಕೋರ್ಟ್‌ಗೂ ವರದಿ ಸಲ್ಲಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಜಾಲದ ಕಾರ್ಯವೈಖರಿ

'ಖಾಲಿ ಜಾಗ ಗುರುತಿಸುತ್ತಿದ್ದ ಆರೋಪಿಗಳು, ಆಸ್ತಿಯ ನೈಜ ಮಾಲೀಕರ ಹೆಸರು ಮುಚ್ಚಿಟ್ಟು ನಕಲಿ ಮಾಲೀಕನನ್ನು ಸೃಷ್ಟಿಸುತ್ತಿದ್ದರು. ಅದೇ ಮಾಲೀಕನನ್ನು ಕಕ್ಷಿದಾರರನ್ನಾಗಿ ಮಾಡಿ, ನಕಲಿ ಪ್ರತಿವಾದಿ ಸಮೇತ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುತ್ತಿದ್ದರು. ಕಕ್ಷಿದಾರ – ಪ್ರತಿವಾದಿಗಳ ಪರ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದ ವಕೀಲರು, ರಾಜಿ ಸಂಧಾನ ಮಾಡಿಕೊಳ್ಳುವುದಾಗಿ ಹೇಳಿ ಆಸ್ತಿ ರಾಜಿ ಡಿಕ್ರಿ ಆದೇಶ ಪಡೆದುಕೊಳ್ಳುತ್ತಿದ್ದರು. ಅದೇ ಡಿಕ್ರಿ ಬಳಸಿ, ಜಾಗವನ್ನು ತಮ್ಮದಾಗಿಸಿಕೊಂಡು, ನೂರಾರು ಕೋಟಿ ರೂಪಾಯಿಗೆ ಮಾರುತ್ತಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

ರೋಪ್‌ವೇ ಮಧ್ಯ ಸಿಲುಕಿದ್ದ ಬಿಜೆಪಿ ಶಾಸಕನ ರಕ್ಷಣೆ

ಡೆಹ್ರಾಡೂನ್: ತಾಂತ್ರಿಕ ದೋಷದಿಂದಾಗಿ ಉತ್ತರಾಖಂಡದ ಬಿಜೆಪಿ ಶಾಸಕ ಕಿಶೋರ್ ಉಪಾಧ್ಯಾಯ ಸೇರಿದಂತೆ 40ಕ್ಕೂ ಹೆಚ್ಚು ಭಕ್ತರು ಇಲ್ಲಿನ ರೋಪ್‌ವೇನಲ್ಲಿ ಒಂದು ಗಂಟೆಗೂ ಹೆಚ್ಚುಕಾಲ ಸಿಲುಕಿದ್ದ ಘಟನೆ ಭಾನುವಾರ ನಡೆದಿದೆ.

ಮಸ್ಸೂರಿ ಸಮೀಪದ ಸುರ್ಕಂದ ದೇವಿ ದೇವಸ್ಥಾನವನ್ನು ಸಂಪರ್ಕಿಸುವ ರೋಪ್ ವೇ ಮಾರ್ಗದಲ್ಲಿ ಈ ಘಟನೆ ನಡೆದಿದೆ. ರಕ್ಷಣಾ ಕಾರ್ಯಾಚರಣೆಯ ಬಳಿಕ ಶಾಸಕ ಸೇರಿದಂತೆ ಎಲ್ಲರನ್ನೂ ರಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉತ್ತರಾಖಂಡ ರಚನೆಯಾದ ನಂತರ ರಾಜ್ಯ ಪ್ರವಾಸೋದ್ಯಮ ಇಲಾಖೆ ಆರಂಭಿಸಿದ ಮೊದಲ ರೋಪ್‌ವೇ ಯೋಜನೆ ಇದಾಗಿದೆ. ಸುಮಾರು 502 ಮೀಟರ್ ಉದ್ದದ ರೋಪ್‌ವೇಯನ್ನು ₹ 5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ರೋಪ್ ವೇ ನ್ಯೂನತೆ ಪತ್ತೆಗೆ ಎನ್‌ಡಿಆರ್‌ಎಫ್ ಸಮೀಕ್ಷೆ

ನವದೆಹಲಿ (ಪಿಟಿಐ): ಕೇಬಲ್ ಕಾರುಗಳು ಮತ್ತು ರೋಪ್ ವೇ ವ್ಯವಸ್ಥೆಯಲ್ಲಿ ಸಂಭವನೀಯ ಭದ್ರತಾ ನ್ಯೂನತೆಗಳನ್ನು ಪತ್ತೆ ಹಚ್ಚಲು ಮತ್ತು ತುರ್ತು ಸಂದರ್ಭದಲ್ಲಿ ಪರಿಣಾಮಕಾರಿ ರಕ್ಷಣಾ ಕಾರ್ಯಾಚರಣೆಗೆ ಕುರಿತು ನೀಲನಕ್ಷೆ ತಯಾರಿಸುವ ಸಲುವಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು (ಎನ್‌ಡಿಆರ್‌ಎಫ್) ರಾಷ್ಟ್ರವ್ಯಾಪಿ ಸಮೀಕ್ಷೆ ಆರಂಭಿಸಿದೆ.

ಉತ್ತರಾಖಂಡದಲ್ಲಿ ಭಾನುವಾರ ನಡೆದ ಘಟನೆ ಸೇರಿದಂತೆ ಈ ವರ್ಷ ಇಲ್ಲಿಯವರೆಗೆ ದೇಶದಲ್ಲಿ ಇದುವರೆಗೆ ರೋಪ್‌ವೇ ಸಂಬಂಧಿತ ನಾಲ್ಕು ಘಟನೆಗಳು ವರದಿಯಾಗಿವೆ.

ಬಿಜೆಪಿ ಸೇರುವ ವದಂತಿ: ಪಕ್ಷದ ವಿರುದ್ಧ ಷಡ್ಯಂತರದ ಆರೋಪ

ಪ್ರತಿಪಕ್ಷ ನಾಯಕತ್ವ: ಲೋಬೊ ವಜಾ

ಪಣಜಿ (ಪಿಟಿಐ): ಪಕ್ಷದ ವಿರುದ್ಧ ಷಡ್ಯಂತರ ನಡೆಸುತ್ತಿರುವ ಆರೋಪದಡಿ ಕಾಂಗ್ರೆಸ್ ಪಕ್ಷವು ಮೈಕಲ್ ಲೋಬೊ ಅವರನ್ನು ಗೋವಾ ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನದಿಂದ ಭಾನುವಾರ ವಜಾಗೊಳಿಸಿದೆ.



ಮೈಕಲ್ ಲೋಬೊ

'ಲೋಬೊ ಹಾಗೂ ದಿಗಂಬರ ಕಾಮತ್ ಅವರು ಬಿಜೆಪಿ ಜೊತೆ ಸೇರಿಕೊಂಡು ಕಾಂಗ್ರೆಸ್ ವಿರುದ್ಧವೇ ಷಡ್ಯಂತರ ನಡೆಸಿದ್ದಾರೆ. ಪಕ್ಷದ ಶಕ್ತಿ ಕುಗ್ಗಿಸಲು ಪ್ರಯತ್ನಿಸುತ್ತಿದ್ದಾರೆ. ಇವರ ವಿರುದ್ಧ ಪಕ್ಷದ ವರಿಷ್ಠರು ಕಠಿಣ ಕ್ರಮ ಕೈಗೊಳ್ಳಲಿದ್ದಾರೆ' ಎಂದು ಎಐಸಿಸಿ ಗೋವಾ ಉಸ್ತುವಾರಿ ದಿನೇಶ್ ಗುಂಡೂರಾವ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಲೋಬೊ ಹಾಗೂ ಕಾಮತ್ ಅವರು ಪಕ್ಷದಲ್ಲಿ ಇದ್ದುಕೊಂಡೇ ಬಿಜೆಪಿ ಪರ ಕೆಲಸ ಮಾಡುತ್ತಿದ್ದರು. ಕಾಮತ್ ಅವರ ಮೇಲೆ ಹಲವು ಪ್ರಕರಣಗಳು ಇದ್ದವು. ಇದರಿಂದ ಪಾರಾಗುವ ಸಲುವಾಗಿ ಅವರು ಬಿಜೆಪಿ ಜೊತೆ ಕೈಜೋಡಿಸಿದ್ದಾರೆ. ಲೋಬೊ ಅವರು ಅಧಿಕಾರದ ಆಸೆಗಾಗಿ ಬಿಜೆಪಿ ಸೇರಲು ಮುಂದಾಗಿದ್ದಾರೆ. ರಾಜ್ಯದಲ್ಲಿ ವಿರೋಧ ಪಕ್ಷಗಳ ಅಸ್ತಿತ್ವವೇ ಇಲ್ಲದಂತೆ ಮಾಡುವುದು ಬಿಜೆಪಿ ಉದ್ದೇಶ. ಇದಕ್ಕಾಗಿ ನಮ್ಮ ಪಕ್ಷದ ಇಬ್ಬರು ನಾಯಕರನ್ನು ಬಳಸಿಕೊಂಡಿದೆ' ಎಂದು ಅವರು ದೂರಿದ್ದಾರೆ.

ಕಾಂಗ್ರೆಸ್ ಶಾಸಕರಾದ ಲೋಬೊ, ಕಾಮತ್, ಡೆಲಿಲಾ ಲೋಬೊ, ಕೇದಾರ್ ನಾಯ್ಕ ಹಾಗೂ ರಾಜೇಶ್ ಫಾಲ್‌ದೇಸಾಯಿ ಅವರು ಗೋವಾ ಮುಖ್ಯಮಂತ್ರಿಯವರ ನಿವಾಸಕ್ಕೆ ಭೇಟಿ ನೀಡಿ ಬಿಜೆಪಿ ಸೇರ್ಪಡೆ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಹೇಳಲಾಗಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ದಿನೇಶ್, 'ಲೋಬೊ, ಕಾಮತ್, ಡೆಲಿಲಾ, ಕೇದಾರ್ ಹಾಗೂ ರಾಜೇಶ್ ಅವರು ನಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ. ಐವರು ಶಾಸಕರು ಸದ್ಯ ನಮ್ಮೊಂದಿಗಿದ್ದಾರೆ. ಅಲೆಕ್ಸೊ ಸೀಕ್ವೆರಾ ಅವರು ಪಕ್ಷದ ನಾಯಕರ ಜೊತೆ ಸಂಪರ್ಕದಲ್ಲಿದ್ದಾರೆ' ಎಂದಿದ್ದಾರೆ.

'ಶನಿವಾರ ನಡೆದಿದ್ದ ಪಕ್ಷದ ಶಾಸಕರ ಸಭೆಯಿಂದ ಕಾಮತ್ ದೂರ ಉಳಿದಿದ್ದರು' ಎಂದು ಮೂಲಗಳು ತಿಳಿಸಿವೆ. ಹಿಂದಿನ ವಿಧಾನಸಭೆ ಚುನಾವಣೆ ವೇಳೆ ದಿಗಂಬರ ಕಾಮತ್ ಅವರನ್ನು ಕಾಂಗ್ರೆಸ್ ಪಕ್ಷವು ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿತ್ತು.

ವಿಧಾನಸಭೆ ಅಧಿವೇಶನಕ್ಕೂ ಮುನ್ನ ಕಾಂಗ್ರೆಸ್‌ನ ಎಂಟು ಮಂದಿ ಶಾಸಕರು ಬಿಜೆಪಿ ಸೇರಲಿದ್ದಾರೆ ಎಂಬ ವದಂತಿ ಹಬ್ಬಿತ್ತು. ಇದನ್ನು ಕಾಂಗ್ರೆಸ್ ನಾಯಕರು ತಳ್ಳಿಹಾಕಿದ್ದರು.

ಡೆಪ್ಯುಟಿ ಸ್ಪೀಕರ್ ಆಯ್ಕೆ ಅಧಿಸೂಚನೆ ರದ್ದು

ಪಣಜಿ (ಪಿಟಿಐ): ಡೆಪ್ಯುಟಿ ಸ್ಪೀಕರ್ ಆಯ್ಕೆಗಾಗಿ ಇದೇ 12ರಂದು ನಡೆಯಬೇಕಿದ್ದ ಚುನಾವಣೆಗೆ ಸಂಬಂಧಿಸಿದ ಅಧಿಸೂಚನೆಯನ್ನು ಗೋವಾ ವಿಧಾನಸಭೆಯ ಸ್ಪೀಕರ್ ರಮೇಶ್ ತವಾಡ್ಕರ್ ರದ್ದುಪಡಿಸಿದ್ದಾರೆ.

40 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಕೆಲವು ಸದಸ್ಯರು ಬಿಜೆಪಿಗೆ ಪಕ್ಷಾಂತರ ಮಾಡಬಹುದು ಎಂಬ ವದಂತಿಯು ದಟ್ಟವಾಗಿರುವ ಹಿಂದೆಯೇ ಈ ಬೆಳವಣಿಗೆ ನಡೆದಿದೆ. ವಿಧಾನಸಭೆ ಕಾರ್ಯದರ್ಶಿ ನಮ್ರತಾ ಉಲ್ಮಾನ್ ಅವರು ಡೆಪ್ಯುಟಿ ಸ್ಪೀಕರ್ ಆಯ್ಕೆಗಾಗಿ ಜುಲೈ 8ರಂದು ಅಧಿಸೂಚನೆ ಹೊರಡಿಸಿದ್ದರು.

ಈ ಮಧ್ಯೆ ಎರಡು ವಾರಗಳ ವಿಧಾನಸಭಾ ಅಧಿವೇಶನ ಸೋಮವಾರ ಆರಂಭವಾಗಲಿದೆ. ಗೋವಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಮಿತ್ ಪಾಟ್ಕರ್ ಅವರು, ಪಕ್ಷದ ಕೆಲ ಶಾಸಕರ ಪಕ್ಷಾಂತರ ಸಾಧ್ಯತೆ ವದಂತಿಗಳನ್ನು ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದರು. 'ಆಡಳಿತ ಪಕ್ಷದವರೇ ಇಂತಹ ವದಂತಿಯನ್ನು ಹಬ್ಬಿಸುತ್ತಿದ್ದಾರೆ' ಎಂದರು.

ಕಾಂಗ್ರೆಸ್‌ನವರು ಟೆಂಟ್ ಸಮೇತ ಬರಲಿದ್ದಾರೆ: ಸಿ.ಟಿ.ರವಿ

ಮಾಲೂರು (ಕೋಲಾರ): 'ಗೋವಾ ಕಾಂಗ್ರೆಸ್‌ನ 11 ಶಾಸಕರು ಗಂಟುಮೂಟೆ ಕಟ್ಟಿಕೊಂಡು ಹೊರಬರಲು ತಯಾರಾಗಿದ್ದಾರೆ. ಕರ್ನಾಟಕದಲ್ಲೂ ಹಲವರು ಸಂಪರ್ಕದಲ್ಲಿದ್ದು, ಟೆಂಟ್ ಸಮೇತ ಕಿತ್ತುಕೊಂಡು ಬರಲಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಭಾನುವಾರ ಇಲ್ಲಿ ತಿಳಿಸಿದರು.

ಕ್ಷೇತ್ರದ ಮಾಜಿ ಶಾಸಕ ಕೆ.ಎಸ್.ಮಂಜುನಾಥಗೌಡ ಅವರ ಬೆಂಬಲಿಗರ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, . ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಗೂಟ ಇಟ್ಟುಕೊಂಡು ಬಡಿದಾಡಬೇಕು ಅಷ್ಟೆ ಎಂದು ಹೇಳಿದರು.

'ರಾಜ್ಯದಲ್ಲೂ ರಾಜಕೀಯ ಧ್ರುವೀಕರಣ ನಡೆಯಲಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ತಿರುಕನ ಕನಸು ಕಾಣುತ್ತಿದ್ದು, ಎಂದೂ ನನಸು ಆಗುವುದಿಲ್ಲ. ಈಗಲೇ ಆ ಇಬ್ಬರ ನಡುವೆ ಸಿ.ಎಂ ಸ್ಥಾನಕ್ಕೆ ಪೈಪೋಟಿ ನಡೆಯುತ್ತಿದೆ' ಎಂದರು.

'ಬಿಜೆಪಿ ಕಾರ್ಯಕರ್ತರು ಮುಂದಿನ ಚುನಾವಣೆವರೆಗೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕೆಲಸ ಮಾಡಬೇಕು; ಹೊಟ್ಟೆಗಲ್ಲ' ಎಂದು ಅವರು ಇದೇ ಸಂದರ್ಭದಲ್ಲಿ ಚಟಾಕಿ ಹಾರಿಸಿದರು.



ಜಾಗತಿಕ ಪರಿಣಾಮ: ವಿಶ್ಲೇಷಕರ ಅಭಿಮತ

ತಗ್ಗಿದ ಐ.ಟಿ. ಷೇರುಗಳ ಮೌಲ್ಯ

ನವದೆಹಲಿ (ಪಿಟಿಐ): ಹಲವು ದೇಶಗಳಲ್ಲಿನ ಆರ್ಥಿಕ ಸ್ಥಿತಿ ಹದಗೆಟ್ಟಿರುವುದು ಮತ್ತು ಹಣಕಾಸು ಮಾರುಕಟ್ಟೆಯಲ್ಲಿ ಅಸ್ಥಿರತೆ ಉಂಟಾಗಿರುವ ಕಾರಣಗಳಿಂದಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ ಷೇರುಗಳ ಬೆಲೆಯು ಒತ್ತಡದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಕಾರ್ಪೊರೇಟ್ ವಲಯದ ಜೂನ್ ತ್ರೈಮಾಸಿಕದ ಹಣಕಾಸು ಸಾಧನೆಯ ಘೋಷಣೆಗೆ ಶುಕ್ರವಾರ ಚಾಲನೆ ದೊರೆತಿದೆ. ಟಿಸಿಎಸ್ ಕಂಪನಿಯ ನಿವ್ವಳ ಲಾಭವು ಶೇಕಡ 5.2ರಷ್ಟು ಹೆಚ್ಚಾಗಿದೆ. ಐ.ಟಿ. ವಲಯದ ಕಂಪನಿಗಳ ಷೇರುಗಳ ಮೌಲ್ಯವು ಕುಸಿತ ಕಾಣುತ್ತಿದೆ. ಬಿಎಸ್‌ಇನಲ್ಲಿ ಐ.ಟಿ. ಸೂಚ್ಯಂಕ ಈ ವರ್ಷದಲ್ಲಿ ಇದುವರೆಗೆ ಶೇ 24ರಷ್ಟು (9,046 ಅಂಶ) ಕುಸಿತ ಕಂಡಿದೆ. ಜನವರಿ 17ರಂದು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 38,713ಕ್ಕೆ ಏರಿಕೆ ಕಂಡಿದ್ದರೆ, ಜೂನ್ 17ರಂದು 52 ವಾರಗಳ ಕನಿಷ್ಠ ಮಟ್ಟವಾದ 26,827ಕ್ಕೆ ಕುಸಿದಿತ್ತು.


ಬಿಎಸ್‌ಇ ಸೆನ್ಸೆಕ್ಸ್ 2022ರಲ್ಲಿ ಇದುವರೆಗೆ ಶೇ 6.47 (3,772 ಅಂಶ) ಕುಸಿತ ಕಂಡಿದೆ. ಜೂನ್ 17ರಂದು 52 ವಾರಗಳ ಕನಿಷ್ಠ ಮಟ್ಟ 50,921 ಅಂಶಗಳಿಗೆ ತಲುಪಿತ್ತು.

ಐ.ಟಿ. ಕಂಪನಿಗಳು ನೌಕರರಿಗೆ ಗರಿಷ್ಠ ಪ್ರಮಾಣದಲ್ಲಿ ವೇತನ ಹೆಚ್ಚಳ ಮಾಡುತ್ತಿರುವುದರಿಂದ ಕಾರ್ಯಾಚರಣಾ ವರಮಾನ ಕಡಿಮೆ ಆಗುತ್ತಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

‘ಅಮೆರಿಕ ಮತ್ತು ಯುರೋಪ್‌ನಲ್ಲಿ ಆರ್ಥಿಕ ಸ್ಥಿತಿಯು ಕೆಟ್ಟದಾಗಿದೆ. ಇದು ಐ.ಟಿ. ವಲಯದ ಮೇಲೆ ಪರಿಣಾಮ ಬೀರಬಹುದು. ಐ.ಟಿ. ಷೇರುಗಳು ಒತ್ತಡ ಎದುರಿಸಬೇಕಾಗಬಹುದು’ ಎಂದು ಬ್ರೋಕರೇಜ್ ಸಂಸ್ಥೆ ಪ್ರಭುದಾಸ್ ಲೀಲಾಧರ್‌ನ ಸಹಾಯಕ ಸಂಶೋಧಕಿ ಅದಿತಿ ಪಾಟೀಲ್ ಹೇಳಿದ್ದಾರೆ.

‘ಅಮೆರಿಕವು ಆರ್ಥಿಕ ಹಿಂಜರಿತ ಅನುಭವಿಸುವ ಸಾಧ್ಯತೆ ಮತ್ತು ಇತರೆ ಪ್ರಮುಖ ಮಾರುಕಟ್ಟೆಗಳ ಮಂದಗತಿಯು ಕಳವಳ ಮೂಡಿಸಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

‘ವರಮಾನ ಸ್ಥಿತಿ ಉತ್ತಮವಾಗಿದೆ ಎನ್ನುವುದನ್ನು ಟಿಸಿಎಸ್‌ನ ಮೊದಲ ತ್ರೈಮಾಸಿಕದ ಫಲಿತಾಂಶವು ಸೂಚಿಸುತ್ತಿದೆಯಾದರೂ ಸಿಬ್ಬಂದಿಯ ವೇತನ ಹೆಚ್ಚಳವು ವರಮಾನ ಹೆಚ್ಚಳ ಪ್ರಮಾಣವನ್ನು ತಗ್ಗಿಸುತ್ತಿದೆ’ ಎಂದು ಅವರು ತಿಳಿಸಿದ್ದಾರೆ.



ನವೋದ್ಯಮಗಳಲ್ಲಿ ಹೂಡಿಕೆ ಶೇಕಡ 40ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಭಾರತದ ನವೋದ್ಯಮಗಳಿಗೆ ಹರಿದುಬಂದಿರುವ ಬಂಡವಾಳದ ಪ್ರಮಾಣ ಶೇಕಡ 40ರಷ್ಟು ಕಡಿಮೆ ಆಗಿದೆ. ಈ ಅವಧಿಯಲ್ಲಿ ನವೋದ್ಯಮಗಳಿಗೆ ಒಟ್ಟು 6.8 ಬಿಲಿಯನ್ ಅಮೆರಿಕನ್ ಡಾಲರ್ (ಅಂದಾಜು ₹ 53,917 ಕೋಟಿ) ಬಂಡವಾಳ ಹರಿದುಬಂದಿದೆ.

ಜಾಗತಿಕ ಮಟ್ಟದಲ್ಲಿನ ರಾಜಕೀಯ ಅಸ್ಥಿರತೆಯು ನವೋದ್ಯಮಗಳಲ್ಲಿನ ಹೂಡಿಕೆಯ ಮೇಲೆ ಪರಿಣಾಮ ಉಂಟುಮಾಡುತ್ತಿರಬಹುದು ಎಂದು ಪ್ರೈಸ್‌ವಾಟರ್ ಕೂಪರ್ಸ್ (ಪಿಡಬ್ಲ್ಯುಸಿ) ಇಂಡಿಯಾ ವರದಿಯು ಹೇಳಿದೆ.

‘ಸತತ ಮೂರು ತ್ರೈಮಾಸಿಕಗಳಿಂದ ಬಂಡವಾಳ ಹೂಡಿಕೆಯು 10 ಬಿಲಿಯನ್ ಡಾಲರ್‌ಗಿಂತ (₹ 79,290 ಕೋಟಿ) ಹೆಚ್ಚಿತ್ತು’ ಎಂದೂ ವರದಿಯು ಹೇಳಿದೆ.

‘ಜಾಗತಿಕ ಮಟ್ಟದಲ್ಲಿ ಆರ್ಥಿಕತೆಯು ಮಂದವಾಗಿರುವುದು, ತಂತ್ರಜ್ಞಾನ ಕಂಪನಿಗಳ ಷೇರುಮೌಲ್ಯ ಕಡಿಮೆ ಆಗಿರುವುದು ಹಾಗೂ ಹಣದುಬ್ಬರ ಹೆಚ್ಚಳ ಕೂಡ ಬಂಡವಾಳ ಹರಿವು ಕಡಿಮೆ ಆಗಲು ಕಾರಣಗಳು’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಹಣಕಾಸಿನ ಬಂಡವಾಳದ ಪರಿಸ್ಥಿತಿಯು ಇನ್ನು 12ರಿಂದ 18 ತಿಂಗಳುಗಳಲ್ಲಿ ಸ್ಥಿರವಾಗುವ ನಿರೀಕ್ಷೆ ಇದೆ’ ಎಂದು ಪಿಡಬ್ಲ್ಯುಸಿ ಇಂಡಿಯಾ ಸಂಸ್ಥೆಯ ಅಮಿತ್ ನವ್ಕಾ ಹೇಳಿದ್ದಾರೆ.

ಬೆಂಗಳೂರು, ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್) ಮತ್ತು ಮುಂಬೈ ನವೋದ್ಯಮಗಳ ಪಾಲಿಗೆ ದೇಶದ ಪ್ರಮುಖ ನಗರಗಳಾಗಿರಲಿವೆ. ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಆಗಿರುವ ಬಂಡವಾಳ ಹೂಡಿಕೆಯಲ್ಲಿ ಅಂದಾಜು ಶೇಕಡ 95ರಷ್ಟು ಇಲ್ಲಿಯೇ ಆಗಿದೆ. ಚೆನ್ನೈ ಮತ್ತು ಪುಣೆ ನಂತರದ ಸ್ಥಾನಗಳಲ್ಲಿವೆ.

ಬೆಂಗಳೂರಿನ ಡೈಲಿಹಂಟ್, ರ‍್ಯಾಪಿಡೊ, ಲೀಡ್‌ಸ್ಕ್ವೇರ್ಡ್, ಲೆನ್ಸ್‌ಕಾರ್ಟ್, ಕ್ರೆಡ್, ಏಥರ್ ಎನರ್ಜಿ ಮತ್ತು ಒಬ್ಸರ್ವ್.ಎಐ ಕಂಪನಿಗಳು ತಲಾ 100 ಮಿಲಿಯನ್ ಡಾಲರ್‌ಗಿಂತ (₹ 792 ಕೋಟಿ) ಹೆಚ್ಚು ಬಂಡವಾಳ ಸಂಗ್ರಹ ಮಾಡಿವೆ.



ಕಾರಣಗಳು
- ಜಾಗತಿಕ ರಾಜಕೀಯ ಅಸ್ಥಿರತೆ
- ಹಣದುಬ್ಬರದ ಹೆಚ್ಚಳ
- ತಂತ್ರಜ್ಞಾನ ಕಂಪನಿಗಳ ಷೇರು ಮೌಲ್ಯ ಇಳಿಕೆ

ಸಂಪತ್ತಿನ ಗಣಿ ‘ಕಾಫಿ ಕ್ಯಾನ್ ಹೂಡಿಕೆ’



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಸಂಪತ್ತು ಸೃಷ್ಟಿಸಲು ನೆರವಾಗುವ ಹಲವಾರು ಸೂತ್ರಗಳ ಬಗ್ಗೆ ನೀವು ಕೇಳಿರಬಹುದು. ಅವುಗಳಲ್ಲಿ ಒಂದಾಗಿರುವ ‘ಕಾಫಿ ಕ್ಯಾನ್ ಹೂಡಿಕೆ’ ಸೂತ್ರದ ಬಗ್ಗೆ ನಿಮಗೆ ಗೊತ್ತೇ? 2018ರಿಂದ ಈಚೆಗೆ ಭಾರತದಲ್ಲಿ ಈ ಬಗೆಯ ಹೂಡಿಕೆ ಪದ್ಧತಿ ಮುನ್ನೆಲೆಗೆ ಬಂದಿದೆ. ಉತ್ತಮ ಕಂಪನಿಗಳ ಷೇರುಗಳನ್ನು ಕಡಿಮೆ ಬೆಲೆಗೆ ಖರೀದಿಸಿ ದೀರ್ಘಾವಧಿಗೆ ಇಟ್ಟುಕೊಂಡು ಲಾಭ ಗಳಿಸಿಕೊಳ್ಳುವ ಹೂಡಿಕೆ ಪದ್ಧತಿಯನ್ನು ‘ಕಾಫಿ ಕ್ಯಾನ್ ಹೂಡಿಕೆ’ ಎಂದು ಕರೆಯುತ್ತಾರೆ. ಸಂಪತ್ತು ಸೃಷ್ಟಿಯ ಗಣಿ ಎಂದೇ ಕರೆಸಿಕೊಂಡಿರುವ ‘ಕಾಫಿ ಕ್ಯಾನ್ ಹೂಡಿಕೆ’ ಬಗ್ಗೆ ಮತ್ತಷ್ಟು ತಿಳಿಯೋಣ.

‘ಕಾಫಿ ಕ್ಯಾನ್ ಹೂಡಿಕೆ’ ಅಂದರೆ: ಉತ್ತಮ ಕಂಪನಿಯ ಷೇರುಗಳನ್ನು ಗುರುತಿಸಿ ಅವುಗಳಲ್ಲಿ ಹೂಡಿಕೆ ಮಾಡಿ, ಕನಿಷ್ಠ 10 ವರ್ಷಗಳ ಕಾಲವಾದರೂ ಅವುಗಳನ್ನು ಹಾಗೇ ಇರಿಸಿಕೊಳ್ಳುವುದೇ ‘ಕಾಫಿ ಕ್ಯಾನ್ ಹೂಡಿಕೆ’. ಉದಾಹರಣೆಗೆ, 2002ರಲ್ಲಿ ₹ 2 ಸಾವಿರ ಖರ್ಚು ಮಾಡಿ ಟೈಟನ್ ಕಂಪನಿಯ ಒಂದು ಸಾವಿರ ಷೇರುಗಳನ್ನು ಖರೀದಿಸಿದ್ದರೆ ಇವತ್ತು ನಿಮ್ಮ ಬಳಿ ₹ 21 ಲಕ್ಷಕ್ಕೂ ಹೆಚ್ಚು ಹಣ ಇರುತ್ತಿತ್ತು. 2002ರಲ್ಲಿ ಟೈಟನ್ ಕಂಪನಿಯ ಪ್ರತಿ ಷೇರಿನ ಬೆಲೆ ₹ 2 ಆಗಿತ್ತು. ಈಗ ಅದರ ಬೆಲೆ ₹ 2,100ಕ್ಕೂ ಹೆಚ್ಚು. ಖರೀದಿಸಿ ಮತ್ತು ಮರೆತುಬಿಡಿ ಎನ್ನುವುದೇ ‘ಕಾಫಿ ಕ್ಯಾನ್ ಹೂಡಿಕೆ’ಯ ತತ್ವ.

ಉತ್ತಮ ಷೇರುಗಳನ್ನು ದೀರ್ಘಾವಧಿಗೆ ಖರೀದಿಸಿ ಇಟ್ಟುಕೊಂಡಾಗ ಹೂಡಿಕೆದಾರನಿಗೆ ದೊಡ್ಡ ಮೊತ್ತದ ಲಾಭ ಸಿಗುವ ಸಾಧ್ಯತೆ ಹೆಚ್ಚು ಎನ್ನುವುದೇ ಇದರ ಹಿಂದಿನ ಲೆಕ್ಕಾಚಾರ. ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಬೇಕು ಎಂದು ಬಯಸುವವರಿಗೆ ಇದೊಂದು ಒಳ್ಳೆಯ ಹೂಡಿಕೆ ವಿಧಾನ.

‘ಕಾಫಿ ಕ್ಯಾನ್ ಹೂಡಿಕೆ’ ಹುಟ್ಟು: 1984ರಲ್ಲಿ ಅಮೆರಿಕದ ಹೂಡಿಕೆ ತಜ್ಞ ರಾಬರ್ಟ್ ಜಿ. ಕರ್ಬಿ ‘ಕಾಫಿ ಕ್ಯಾನ್ ಹೂಡಿಕೆ’ ಪದ್ಧತಿಯನ್ನು ಪರಿಚಯಿಸಿದರು. ಪಶ್ಚಿಮ ಅಮೆರಿಕದಲ್ಲಿ ಜನರು ಅಮೂಲ್ಯ ವಸ್ತುಗಳನ್ನು ಕಾಫಿ ಡಬ್ಬದಲ್ಲಿ ಬಚ್ಚಿಡುತ್ತಿದ್ದರು. ಆ ಕಾರಣದಿಂದ ಈ ಪರಿಕಲ್ಪನೆಗೆ ‘ಕಾಫಿ ಕ್ಯಾನ್ ಹೂಡಿಕೆ’ ಎನ್ನುವ ಹೆಸರು ಬಂತು. ಭಾರತೀಯರು ಚಿನ್ನ, ರಿಯಲ್ ಎಸ್ಟೇಟ್ ಮತ್ತಿತರ ಹೂಡಿಕೆಗಳಲ್ಲಿ ‘ಕಾಫಿ ಕ್ಯಾನ್ ಹೂಡಿಕೆ’ ಪದ್ಧತಿಯನ್ನು ಅದಾಗಲೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಈಗ ಅದು ಷೇರು ಹೂಡಿಕೆಗೂ ಬಂದಿದೆ.

ಭಾರತದಲ್ಲಿ ಆಂಬಿಟ್ ಕ್ಯಾಪಿಟಲ್‌ನ ಸೌರಬ್ ಮುಖರ್ಜಿ ‘ಕಾಫಿ ಕ್ಯಾನ್ ಹೂಡಿಕೆ’ಯನ್ನು 2018ರಲ್ಲಿ ಮುನ್ನೆಲೆಗೆ ತಂದರು.

ಈ ಮೂರು ಅಂಶಗಳು ಮುಖ್ಯ

1. ಕಂಪನಿಯ ಮಾರುಕಟ್ಟೆ ಮೌಲ್ಯ ₹ 500 ಕೋಟಿಗಿಂತ ಹೆಚ್ಚಿರಬೇಕು: ‘ಕಾಫಿ ಕ್ಯಾನ್’ ಪದ್ಧತಿಯಲ್ಲಿ ಹೂಡಿಕೆಗೆ ನಾವು ಆಯ್ಕೆ ಮಾಡಿಕೊಳ್ಳುವ ಕಂಪನಿಯ ಮಾರುಕಟ್ಟೆ ಮೌಲ್ಯ (ಮಾರ್ಕೆಟ್ ಕ್ಯಾಪಿಟಲೈಸೇಷನ್) ₹ 500 ಕೋಟಿಗೂ ಹೆಚ್ಚಿಗೆ ಇರಬೇಕು. ಅದಕ್ಕಿಂತ ಕಡಿಮೆ ಮೌಲ್ಯದ ಕಂಪನಿಯ ಷೇರುಗಳನ್ನು ಪರಿಗಣಿಸಬಾರದು. ಕಂಪನಿಯೊಂದರ ಒಟ್ಟು ಷೇರುಗಳನ್ನು ಆ ಷೇರಿನ ಪ್ರಸ್ತುತ ಬೆಲೆಯೊಂದಿಗೆ ಗುಣಿಸಿದಾಗ ಕಂಪನಿಯ ಮಾರುಕಟ್ಟೆ ಮೌಲ್ಯ ತಿಳಿಯುತ್ತದೆ.

2. ಸ್ಥಿರ ಲಾಭ ಕೊಡುವ ಷೇರು ಆಯ್ಕೆ ಮುಖ್ಯ: ‘ಕಾಫಿ ಕ್ಯಾನ್’ ಹೂಡಿಕೆ ಮಾಡುವಾಗ ಸ್ಥಿರವಾಗಿ ಲಾಭ ತಂದುಕೊಡುತ್ತಿರುವ ಕಂಪನಿಗಳ ಷೇರುಗಳನ್ನು ಮಾತ್ರ ಪರಿಗಣಿಸಬೇಕು. ಕಳೆದ 5ರಿಂದ 10 ವರ್ಷಗಳಲ್ಲಿ ನಿರ್ದಿಷ್ಟ ಕಂಪನಿಯ ಗಳಿಕೆ (ರೆವಿನ್ಯೂ) ಸರಾಸರಿ ಶೇಕಡ 10ರಷ್ಟು ಇರಲೇಬೇಕು.

3. ಹೂಡಿಕೆ ಮೇಲಿನ ಗಳಿಕೆ: ಷೇರು ಆಯ್ಕೆ ಮಾಡಿಕೊಳ್ಳುವಾಗ ಆ ಷೇರಿನ ಹೂಡಿಕೆ ಮೇಲಿನ ಗಳಿಕೆ ಕಳೆದ ಐದು ವರ್ಷಗಳ ಅವಧಿಯಲ್ಲಿ ಕನಿಷ್ಠ ಶೇ 15ರಷ್ಟು ಇರುವಂತೆ ನೋಡಿಕೊಳ್ಳಿ.

4. ದೀರ್ಘಾವಧಿಯ ಮಹತ್ವ: ‘ಕಾಫಿ ಕ್ಯಾನ್ ಹೂಡಿಕೆ’ ಮಾಡುವಾಗ ದೀರ್ಘಾವಧಿ ಲೆಕ್ಕಾಚಾರ ಇರಬೇಕು. ಮಾರುಕಟ್ಟೆ ಏರಿಳಿತಕ್ಕೆ ತಲೆಕೆಡಿಸಿಕೊಳ್ಳದೆ ನಿರಂತರವಾಗಿ ಹೂಡಿಕೆ ಮಾಡುತ್ತ ಮುನ್ನಡೆಯುವ ಮನಃಸ್ಥಿತಿ ನಿಮ್ಮದಾಗಿರಬೇಕು.

ನೆನಪಿಡಿ: ‘ಕಾಫಿ ಕ್ಯಾನ್ ಹೂಡಿಕೆ’ ಮಾಡುವಾಗ ಸೂಕ್ತ ಷೇರುಗಳ ಆಯ್ಕೆ ಬಹಳ ಮುಖ್ಯ. ವಿವಿಧ ಆನ್‌ಲೈನ್ ಉಪಕರಣಗಳನ್ನು, ಕೆಲವು ವಿಶ್ವಾಸಾರ್ಹ ವೆಬ್‌ಸೈಟ್‌ಗಳಲ್ಲಿನ ಮಾಹಿತಿ ಬಳಸಿ ಮೇಲೆ ಸೂಚಿಸಿರುವ ನಿಯಮದ ಆಧಾರದಲ್ಲಿ ಉತ್ತಮ ಕಂಪನಿಗಳನ್ನು ಪತ್ತೆ ಮಾಡಬಹುದು. ನಿಮಗೆ ಅದು ತಿಳಿಯದಿದ್ದಲ್ಲಿ ವೃತ್ತಿಪರ, ಸ್ವತಂತ್ರ ಹಣಕಾಸು ಮತ್ತು ಹೂಡಿಕೆ ಸಲಹೆಗಾರರ ನೆರವು ಪಡೆದು ಮುನ್ನಡೆಯಿರಿ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ ಸೂಚ್ಯಂಕಗಳ ಓಟ



ಜುಲೈ 9ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 54,481 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 2.97ರಷ್ಟು ಜಿಗಿದಿದೆ.

16,220 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ–50 ಸೂಚ್ಯಂಕ ಶೇ 2.97ರಷ್ಟು ಹೆಚ್ಚಳ ದಾಖಲಿಸಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಚೇತರಿಕೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಲ್ಲಿ ಕಡಿಮೆಯಾದ ಮಾರಾಟದ ಒತ್ತಡ, ತೈಲ ಬೆಲೆ ಇಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕೊಡುಗೆ ನೀಡಿವೆ.

ವಲಯವಾರು ಪ್ರಗತಿಯಲ್ಲಿ ಎಲ್ಲ ಕ್ಷೇತ್ರಗಳ ಸೂಚ್ಯಂಕಗಳಲ್ಲೂ ಸುಧಾರಣೆ ಕಂಡುಬಂದಿದೆ. ಬಿಎಸ್‌ಇ ಕನ್ಸ್ಯೂಮರ್ ಡ್ಯೂರೆಬಲ್ ಸೂಚ್ಯಂಕ ಶೇ 6.5ರಷ್ಟು ಹೆಚ್ಚಳವಾಗಿದೆ. ಬಿಎಸ್‌ಇ ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 6ರಷ್ಟು ಹೆಚ್ಚಳವಾಗಿದೆ. ಬಿಎಸ್‌ಇ ಎಫ್‌ಎಂಸಿಜಿ ವಲಯ ಶೇ 5ರಷ್ಟು ಜಿಗಿದಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರು ₹ 2,218.38 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,910.33 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಗಳಿಕೆ: ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 3.6ರಷ್ಟು ಗಳಿಸಿಕೊಂಡಿದೆ. ಈ ವಲಯದಲ್ಲಿ ಕೆನರಾ ಬ್ಯಾಂಕ್, ಎಬಿಬಿ ಇಂಡಿಯಾ, ಮಹಿಂದ್ರ ಆ್ಯಂಡ್ ಮಹಿಂದ್ರ ಫೈನಾನ್ಶಿಯಲ್ ಸರ್ವಿಸಸ್, ಇಮಾಮಿ, ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ, ಕುಮಿನ್ಸ್ ಇಂಡಿಯಾ, ಹನಿವೆಲ್ ಆಟೋಮೇಷನ್, ಯುನೈಟೆಡ್ ಬ್ರೆವರಿಸ್ ಮತ್ತು ಒಬೆರಾಯ್ ರಿಯಾಲ್ಟಿ ಒಳ್ಳೆಯ ಗಳಿಕೆ ದಾಖಲಿಸಿವೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.3ರಷ್ಟು ಸುಧಾರಿಸಿದೆ. ಹಿಮಾದ್ರಿ ಸ್ಪೆಷಾಲಿಟಿ ಕೆಮಿಕಲ್, ಪಿಸಿ ಜ್ಯುವೆಲರ್ಸ್, ಸ್ಟೀಲ್ ಎಕ್ಸ್‌ಚೇಂಜ್ ಇಂಡಿಯಾ, ಶೋಭಾ, ಟಾರ್ಸನ್ಸ್ ಪ್ರಾಡಕ್ಟ್ಸ್, ಸಿಯೇಟ್, ಎಎಂಐ ಆರ್ಗ್ಯಾನಿಕ್ಸ್, ಟಿಸಿಪಿಎಲ್ ಪ್ಯಾಕಿಂಗ್, ಡಿಬಿ ರಿಯಾಲ್ಟಿ, ಬಟರ್ ಫ್ಲೈ ಗಾಂಧಿಮತಿ ಅಪ್ಲಯೆನ್ಸಸ್ ತಲಾ ಶೇ 15ರಷ್ಟು ಗಳಿಸಿಕೊಂಡಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಡಿಮಾರ್ಟ್, ಸ್ಟಾರ್ ಹೆಲ್ತ್, ಐಸಿಐಸಿಐ ಲೊಂಬಾರ್ಡ್, ಸೀಮೆನ್ಸ್, ಟಾಟಾ ಮೋಟರ್ಸ್ – ಡಿವಿಆರ್, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್, ಟೈಟನ್ ಕಂಪನಿಗಳು ಶೇ 10ರಿಂದ ಶೇ 16ರವರೆಗೆ ಜಿಗಿತ ಕಂಡಿವೆ.

ಮುನ್ನೋಟ: ಸೂಚ್ಯಂಕಗಳು ಕಳೆದ ವಾರ ಭಾರೀ ಚೇತರಿಕೆ ಕಂಡಿವೆ ಎಂದಮಾತ್ರಕ್ಕೆ ಪೇಟೆಯಲ್ಲಿ ಗೂಳಿಯ ಓಟ ಶುರುವಾಗಿದೆ ಎಂದಲ್ಲ. ಷೇರುಪೇಟೆಯಲ್ಲಿ ಅನಿಶ್ಚಿತತೆ ಇದ್ದೇ ಇದೆ. ಫೈಪೈಸಾ, ಮೈಂಡ್ ಟ್ರೀ, ಎಚ್‌ಸಿಎಲ್ ಟೆಕ್, ಎಸಿಸಿ, ಬಟರ್ ಫ್ಲೈ, ಜಿಂದಾಲ್ ಸ್ಟೀಲ್, ಫೆಡರಲ್ ಬ್ಯಾಂಕ್, ಬಿಇಎಲ್, ಎಚ್‌ಡಿಎಫ್‌ಸಿ ಬ್ಯಾಂಕ್, ಸಹರಾ, ಐಸಿಐಸಿಐ ಪ್ರುಡೆನ್ಶಿಯಲ್, ಆನಂದ್ ರಾಠಿ, ಡೆಲ್ಟಾ ಕಾರ್ಪ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ದೇಶದಾದ್ಯಂತ ಏಕಕಾಲಕ್ಕೆ ಪಿಂಚಣಿ ವಿತರಣೆ ಶೀಘ್ರ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ವ್ಯಾಪ್ತಿಗೆ ಬರುವ 73 ಲಕ್ಷಕ್ಕೂ ಅಧಿಕ ಪಿಂಚಣಿದಾರರಿಗೆ ಏಕಕಾಲಕ್ಕೆ ಪಿಂಚಣಿ ಮೊತ್ತ ವಿತರಣೆ ಮಾಡುವ ಕೇಂದ್ರೀಕೃತ ವ್ಯವಸ್ಥೆ ಶೀಘ್ರವೇ ಜಾರಿಗೆ ಬರಲಿದೆ.

ಜುಲೈ 29 ಮತ್ತು 30ರಂದು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿ ಸಭೆ ನಡೆಯಲಿದ್ದು, ಕೇಂದ್ರೀಕೃತ ವ್ಯವಸ್ಥೆ ಜಾರಿಗೆ ತರುವ ಪ್ರಸ್ತಾವಕ್ಕೆ ಒಪ್ಪಿಗೆ ದೊರೆಯಲಿದೆ ಎಂದು ಮೂಲಗಳು ತಿಳಿಸಿವೆ.

ಈಗ, ದೇಶದಾದ್ಯಂತ ಇರುವ ಇಪಿಎಫ್‌ಒನ 138ಕ್ಕೂ ಅಧಿಕ ಪ್ರಾದೇಶಿಕ ಕಚೇರಿಗಳು ಪಿಂಚಣಿ ಮೊತ್ತವನ್ನು ಪ್ರತ್ಯೇಕವಾಗಿ ವಿತರಿಸುತ್ತಿವೆ. ಇದರಿಂದಾಗಿ ಪಿಂಚಣಿ ವಿತರಣೆಯ ಸಮಯ ಅಥವಾ ದಿನದಲ್ಲಿ ವ್ಯತ್ಯಾಸ ಆಗುತ್ತಿದೆ.

ಪಿಎಫ್ ಖಾತೆಗಳು ನಕಲು ಆಗದಂತೆ ತಡೆಯಲು ಮತ್ತು ಯಾವುದೇ ಸದಸ್ಯನ ಒಂದಕ್ಕಿಂತ ಹೆಚ್ಚಿನ ಪಿಎಫ್ ಖಾತೆಗಳ ವಿಲೀನವು ಇದರಿಂದ ಸುಲಭವಾಗಲಿದೆ. ನೌಕರ ಉದ್ಯೋಗ ಬದಲಿಸಿದ ಸಂದರ್ಭದಲ್ಲಿ ಪಿಎಫ್ ಖಾತೆ ವರ್ಗಾಯಿಸಬೇಕಾದ ಅಗತ್ಯವನ್ನೂ ಇದು ತಪ್ಪಿಸಲಿದೆ.

ಮಾಹಿತಿ ತಂತ್ರಜ್ಞಾನ ಆಧಾರಿತ ಕೇಂದ್ರೀಕೃತ ವ್ಯವಸ್ಥೆ ಅಭಿವೃದ್ಧಿಪಡಿಸಲು ಸಿ–ಡಾಕ್ ಕಂಪನಿಗೆ 2021ರ ನವೆಂಬರ್ 20ರಂದು ನಡೆದಿದ್ದ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು.



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹500
12 ಮೊಟ್ಟೆಗೆ ₹68
ಮೈಸೂರು
100 ಮೊಟ್ಟೆಗೆ ₹500

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹100-428
ದ್ವಿತಳಿ (ಬಿ.ವಿ) ₹225-633

ರಾಜ್ಯ ನಾಯಕರಿಗೆ ಪೀಕಲಾಟ; ಪಕ್ಷದೊಳಗೆ ಅಸಮಾಧಾನದ ಹೊಗೆ

ಕಾಂಗ್ರೆಸ್ ಹೈಕಮಾಂಡ್‌ಗೆ ಜೆಡಿಎಸ್ ಮೇಲೆ ಪ್ರೀತಿ

ನವದೆಹಲಿ: ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರದ ವೇಳೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಅವರ ಕುಟುಂಬದವರ ಬಗ್ಗೆ ವೈಯಕ್ತಿಕ ಟೀಕೆ ಮಾಡದಂತೆ ಪಕ್ಷದ ರಾಜ್ಯ ನಾಯಕರಿಗೆ ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನ ನೀಡಿದೆ. ಹೈಕಮಾಂಡ್‌ನ ಜೆಡಿಎಸ್ ಪ್ರೀತಿಗೆ ಪಕ್ಷದೊಳಗೇ ಅಸಮಾಧಾನ ವ್ಯಕ್ತವಾಗಿದೆ.

ಚುನಾವಣಾ ತಂತ್ರಗಾರಿಕೆ ಹಾಗೂ ಪಕ್ಷದಲ್ಲಿನ ಕೆಲವು ಗೊಂದಲಗಳನ್ನು ನಿವಾರಿಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಇತ್ತೀಚೆಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಈ ವೇಳೆ ರಾಹುಲ್ ಗಾಂಧಿ ಅವರು ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ವೈಯಕ್ತಿಕ ಟೀಕೆ ಮಾಡದಂತೆ ಸೂಚಿಸಿದರು. ಇದರಿಂದ ಪಕ್ಷಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು. ಪಕ್ಷದ ವಿರುದ್ಧ ಒಕ್ಕಲಿಗ ಸಮುದಾಯ ತಿರುಗಿ ಬೀಳಬಹುದು ಎಂಬ ಕಿವಿಮಾತನ್ನೂ ಹೇಳಿದರು ಎಂದು ಪಕ್ಷದ ಹಿರಿಯ ನಾಯಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ದಕ್ಷಿಣ ಕರ್ನಾಟಕದಲ್ಲಿ ದೇವೇಗೌಡರಿಗೆ ದೊಡ್ಡ ಅಭಿಮಾನಿ ಬಳಗ ಇದೆ. ಅವರನ್ನು ನಿರಂತರವಾಗಿ ಟೀಕಿಸಿದರೆ ಒಕ್ಕಲಿಗ ಸಮುದಾಯ ಕಾಂಗ್ರೆಸ್‌ನ ವಿರುದ್ಧ ನಿಲ್ಲಬಹುದು. 2018ರ ವಿಧಾನ ಸಭಾ ಚುನಾವಣೆಯ ಮಾದರಿಯಲ್ಲೇ ನಾಲ್ಕೈದು ಜಿಲ್ಲೆಗಳಲ್ಲಿ ಪಕ್ಷಕ್ಕೆ ಹಿನ್ನಡೆ ಉಂಟಾಗಬಹುದು’ ಎಂದು ಚುನಾವಣಾ ತಂತ್ರಜ್ಞ ಸುನಿಲ್ ಕನಗೋಳ್ ಅವರು ರಾಹುಲ್ ಗಾಂಧಿ ಗಮನಕ್ಕೆ ತಂದರು. ಬಳಿಕ ರಾಹುಲ್ ಈ ಸೂಚನೆ ನೀಡಿದರು’ ಎಂದು ಹೇಳಿದರು. ‘ಕರ್ನಾಟಕ ವಿಧಾನಸಭಾ ಚುನಾ ವಣೆಯಲ್ಲಿ ಪಕ್ಷ 100ರಿಂದ 120 ಸ್ಥಾನ ಗೆಲ್ಲಬಹುದು ಎಂದು ಕಾಂಗ್ರೆಸ್ ನಡೆಸಿರುವ ಆಂತರಿಕ ಸಮೀಕ್ಷೆ ತಿಳಿಸಿದೆ. ಈಗಿನ ಸನ್ನಿವೇಶದಲ್ಲಿ ಜೆಡಿಎಸ್ ಕನಿಷ್ಠ 25 ಸ್ಥಾನಗಳನ್ನು ಗೆಲ್ಲಬಹುದು ಎಂಬ ಲೆಕ್ಕಾಚಾರ ಇದೆ. ಒಂದು ವೇಳೆ ಕಾಂಗ್ರೆಸ್ ಬಹುಮತ ಗಳಿಸದಿದ್ದರೆ ಜೆಡಿಎಸ್ ಜತೆಗೆ ಸ್ನೇಹಹಸ್ತ ಚಾಚಬಹುದು ಎಂಬ ಲೆಕ್ಕಾಚಾರ ಇದೆ. ಹೀಗಾಗಿ, ಜೆಡಿಎಸ್ ಬಗ್ಗೆ ನಿರಂತರ ಟೀಕೆ ಮಾಡುವುದರ ಬದಲು ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಬೆಲೆ ಏರಿಕೆಯಂತಹ ವಿಚಾರಗಳ ಕುರಿತು ದೊಡ್ಡ ಮಟ್ಟದ ಹೋರಾಟ ಮಾಡುವಂತೆ ರಾಹುಲ್ ನಿರ್ದೇಶನ ನೀಡಿದರು’ ಎಂದು ಮಾಹಿತಿ ನೀಡಿದರು.

ಸಿದ್ದರಾಮಯ್ಯ ಲೆಕ್ಕಾಚಾರವೇನು?

ಬಿಜೆಪಿ ಹಾಗೂ ಜೆಡಿಎಸ್ ಅನ್ನು ಸಮಾನ ಎದುರಾಳಿಗಳು ಎಂದು ಭಾವಿಸಿ ಚುನಾವಣೆ ಎದುರಿಸಬೇಕು ಎಂದು ಸಿದ್ದರಾಮಯ್ಯ ಅವರು ಸಭೆಯಲ್ಲೇ ಹೇಳಿದರು. ‘ಮಂಡ್ಯ, ಹಾಸನ, ರಾಮನಗರ, ಕೋಲಾರ, ತುಮಕೂರು ಸೇರಿ ಹಲವು ಜಿಲ್ಲೆಗಳಲ್ಲಿ ನಮ್ಮ ಪಕ್ಷಕ್ಕೆ ಜೆಡಿಎಸ್ ನೇರ ಎದುರಾಳಿ. ಜೆಡಿಎಸ್ ಬಗ್ಗೆ ಮೃದು ಧೋರಣೆ ತಳೆದರೆ ಈ ಜಿಲ್ಲೆಗಳಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವುದು ಕಷ್ಟ. ಇಲ್ಲಿ ಅಧಿಕ ಸ್ಥಾನಗಳನ್ನು ಗೆದ್ದರೆ ಮ್ಯಾಜಿಕ್ ಸಂಖ್ಯೆ ತಲುಪಲು ಅನುಕೂಲವಾಗುತ್ತದೆ ಎಂದು ಸಿದ್ದರಾಮಯ್ಯ ಅವರು ರಾಹುಲ್ ಅವರ ಗಮನಕ್ಕೆ ತಂದರು. 2018ರ ವಿಧಾನಸಭಾ ಚುನಾವಣೆಯ ನಂತರ ಜೆಡಿಎಸ್ ಜೊತೆಗೆ ಮೈತ್ರಿ ಮಾಡಿಕೊಂಡಿದ್ದರಿಂದ ಪಕ್ಷಕ್ಕೆ ಆದ ಹಾನಿಗಳನ್ನೂ ಸಿದ್ದರಾಮಯ್ಯ ವಿವರಿಸಿದರು. 2019ರ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿದ್ದರಿಂದ ಪಕ್ಷ ಒಂದೇ ಸ್ಥಾನ ಗೆದ್ದಿತು. ಪ್ರತ್ಯೇಕವಾಗಿ ಸ್ಪರ್ಧಿಸಿದ್ದರೆ ಕಾಂಗ್ರೆಸ್ ಕನಿಷ್ಠ ಏಳೆಂಟು ಸ್ಥಾನ ಗೆಲ್ಲುತ್ತಿತ್ತು ಎಂಬುದನ್ನು ಮನದಟ್ಟು ಮಾಡಿದರು’ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಜೆಡಿಎಸ್ ಬಗ್ಗೆ ನಮ್ಮ ಪಕ್ಷದ ರಾಷ್ಟ್ರೀಯ ನಾಯಕರಿಗೆ ತಪ್ಪು ಕಲ್ಪನೆ ಇದೆ. ಜಾತ್ಯತೀತ ಪಕ್ಷ ಎಂಬ ಕಾರಣಕ್ಕೆ ಜೆಡಿಎಸ್ ಬಗ್ಗೆ ಮೃದುಧೋರಣೆ ಹೊಂದಿದ್ದಾರೆ. ಆದರೆ, ರಾಜ್ಯದ ಸನ್ನಿವೇಶ ವಿಭಿನ್ನವಾಗಿದೆ. ಕನಿಷ್ಠ 30 ಕ್ಷೇತ್ರಗಳಲ್ಲಿ ಜೆಡಿಎಸ್ ಜತೆಗೆ ನಾವು ಬಡಿದಾಡಿ ಗೆಲ್ಲಬೇಕು. ಜತೆಗೆ, ಜೆಡಿಎಸ್‌ನ ಕೆಲವು ನಾಯಕರಿಗೆ ಕಾಂಗ್ರೆಸ್‌ಗಿಂತ ಬಿಜೆಪಿ ಮೇಲೆಯೇ ಹೆಚ್ಚು ಪ್ರೀತಿ. ಅದನ್ನು ನಮ್ಮ ರಾಷ್ಟ್ರೀಯ ನಾಯಕರು ಇನ್ನೂ ಅರ್ಥ ಮಾಡಿಕೊಂಡಿಲ್ಲ’ ಎಂದು ಪಕ್ಷದ ಮತ್ತೊಬ್ಬ ಹಿರಿಯ ನಾಯಕರು ಬೇಸರ ವ್ಯಕ್ತಪಡಿಸಿದರು.

ದೇವೇಗೌಡರು ಪ್ರಧಾನಿಯಾಗಲು ಹಿಂದೆ ಕಾಂಗ್ರೆಸ್ ಪಕ್ಷವೇ ಬೆಂಬಲ ನೀಡಿತ್ತು. ಅವರ ಬಗ್ಗೆ ಕೀಳು ಮಟ್ಟದ ಟೀಕೆ ಮಾಡದಂತೆ ಪಕ್ಷದ ಮುಖಂಡರಿಗೆ ಸೂಚಿಸಲಾಗಿದೆ.
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಯಾವುದೇ ಪಕ್ಷದ ಜತೆಗೆ ಮೈತ್ರಿ ಮಾಡಿಕೊಳ್ಳದೆ ಪಕ್ಷ ಚುನಾವಣೆ ಎದುರಿಸಲಿದೆ. ಪಕ್ಷ ಕನಿಷ್ಠ 130 ಸ್ಥಾನ ಗೆದ್ದು ಸರ್ಕಾರ ರಚಿಸಲಿದೆ.
ಸಿದ್ದರಾಮಯ್ಯ, ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಅಬೆ ಹತ್ಯೆ ಶೋಕದ ಮಧ್ಯೆ ಮತದಾನ

ಟೋಕಿಯೊ (ಎಪಿ): ಮಾಜಿ ಪ್ರಧಾನಿ, ಪ್ರಭಾವಿ ಜನನಾಯಕ ಶಿಂಜೊ ಅಬೆ ಅವರ ಹತ್ಯೆಯಿಂದ ಜಪಾನ್‌ನಲ್ಲಿ ಕವಿದಿರುವ ಶೋಕದ ಛಾಯೆಯ ನಡುವೆಯೇ ದೇಶದ ಸಂಸತ್‌ನ ಮೇಲ್ಮನೆಯ ಪ್ರಮುಖ ಚುನಾವಣೆಯ ಮತದಾನ ಭಾನುವಾರ ನಡೆಯಿತು.

ಯುದ್ಧಾನಂತರದ ಜಪಾನ್‌ನಲ್ಲಿ ಹತ್ಯೆಗೀಡಾದ ಮೊದಲ ಜನನಾಯಕ ಶಿಂಜೊ ಅಬೆ. ಸಂಸತ್ ಚುನಾವಣೆಗೆ ತಮ್ಮ ಪಕ್ಷದ ಪರ ಪ್ರಚಾರ ಭಾಷಣ ಮಾಡುತ್ತಿದ್ದಾಗಲೇ ಹಂತಕನ ಗುಂಡೇಟಿಗೆ ಬಲಿಯಾಗಿದ್ದರು. ಅಬೆ ಅವರ ಹತ್ಯೆಯ ಆಘಾತದಿಂದ ಚೇತರಿಸಿಕೊಳ್ಳುತ್ತಿರುವ ಜಪಾನಿಗರಲ್ಲಿ ದುಃಖ ಮತ್ತು ಆತಂಕ ಇನ್ನೂ ಮಡುಗಟ್ಟಿಯೇ ಇದೆ.

ದುರ್ಬಲ ವಿರೋಧ ಪಕ್ಷದ ಎದುರು ಆಡಳಿತ ನಡೆಸುತ್ತಿರುವ ಲಿಬರಲ್ ಡೆಮಾಕ್ರಟಿಕ್ ಪಕ್ಷಕ್ಕೆ ಪ್ರಮುಖ ವಿಜಯ ಲಭಿಸಲಿದೆ ಎಂದು ಮಾಧ್ಯಮಗಳ ಸಮೀಕ್ಷೆಗಳು ಅಂದಾಜಿಸಿದ್ದರೂ ಅಬೆ ಅವರ ಹತ್ಯೆಯಿಂದ ದೇಶದಲ್ಲಿ ಉಂಟಾಗಿರುವ ಅನುಕಂಪದ ಅಲೆಯಿಂದ, ಪ್ರಧಾನಿ ಫುಮಿಯೊ ಕಿಶಿಡಾ ಅವರಿಗೆ ಸಂಸತ್‌ನಲ್ಲಿ ಬೇಕಿದ್ದ ಸರಳ ಬಹುಮತದ ಗುರಿಗಿಂತಲೂ ಬಹುದೊಡ್ಡ ವಿಜಯವೇ ಲಭಿಸುವ ನಿರೀಕ್ಷೆ ಇದೆ.

ಮತದಾರರು ಇತ್ತ ತಮ್ಮ ಮತದಾನದ ಹಕ್ಕು ಚಲಾಯಿಸುವಲ್ಲಿ ನಿರತರಾಗಿದ್ದರೆ, ಅತ್ತ, ಪಶ್ಚಿಮ ಜಪಾನ್ ಪೊಲೀಸರು ಅಬೆ ಹಂತಕನನ್ನು ವಿಚಾರಣೆಗಾಗಿ ಸ್ಥಳೀಯ ಪ್ರಾಸಿಕ್ಯೂಟರ್ ಕಚೇರಿಗೆ ಬಿಗಿಭದ್ರತೆಯಲ್ಲಿ ಕರೆದೊಯ್ದರು.



ಜಪಾನ್ ಸಂಸತ್ ಮೇಲ್ಮನೆಗೆ ಭಾನುವಾರ ನಡೆದ ಚುನಾವಣೆಯಲ್ಲಿ ಮಹಿಳೆಯರು ಮತ ಚಲಾಯಿಸಿದರು –ಎಎಫ್‌ಪಿ ಚಿತ್ರ



ಉಕ್ರೇನ್ ಪೂರ್ವದ ಬಾಖ್‌ಮುಟ್ ಜಿಲ್ಲೆಯ ಚೆಸಿವ್ ಯಾರ್ ನಗರದಲ್ಲಿ ನಾಲ್ಕು ಮಹಡಿಯ ಅಪಾರ್ಟ್‌ಮೆಂಟ್ ಕಟ್ಟಡ ರಷ್ಯಾದ ಕ್ಷಿಪಣಿ ದಾಳಿಗೆ ಧ್ವಂಸಗೊಂಡಿದೆ. ಘಟನೆಯಲ್ಲಿ 15 ನಾಗರಿಕರು ಮೃತಪಟ್ಟಿದ್ದಾರೆ — ಎಎಫ್‌ಪಿ ಚಿತ್ರ

‘ದೇಶಕ್ಕೆ ಕಾಳಿ ಕೃಪೆ ಇರಲಿದೆ’

ಕೋಲ್ಕತ್ತ/ನವದೆಹಲಿ (ಪಿಟಿಐ): ‘ಕಾಳಿ ಮಾತೆಯ ಆಶೀರ್ವಾದ ದೇಶದ ಮೇಲೆ ಸದಾ ಇರಲಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ರಾಮಕೃಷ್ಣ ಮಿಷನ್ ಭಾನುವಾರ ಹಮ್ಮಿಕೊಂಡಿದ್ದ ಸ್ವಾಮಿ ಆತ್ಮಸ್ಥಾನಾನಂದ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ವರ್ಚುವಲ್ ಆಗಿ ಪಾಲ್ಗೊಂಡು ಮಾತನಾಡಿದರು.

‘ರಾಮಕೃಷ್ಣ ಪರಮಹಂಸ ಅವರು ಕಾಳಿ ಮಾತೆ ಕುರಿತು ಸ್ಪಷ್ಟ ಕಲ್ಪನೆ ಹೊಂದಿದ್ದರು. ಸ್ವಾಮಿ ವಿವೇಕಾನಂದ ಕೂಡ ಆಧ್ಯಾತ್ಮಿಕ ದೃಷ್ಟಿಕೋನ ಹೊಂದಿದ್ದರು. ಇದು ಅವರಲ್ಲಿ ಅಸಾಧಾರಣ ಶಕ್ತಿ ತುಂಬಿತ್ತು’ ಎಂದರು.

‘ನಂಬಿಕೆ ಪವಿತ್ರವಾಗಿದ್ರೆ ಅಗೋಚರ ಶಕ್ತಿ ನಮಗೆ ಅರಿವಿಲ್ಲದಂತೆಯೇ ಸರಿದಾರಿಯಲ್ಲಿ ಕೊಂಡೊಯ್ಯುತ್ತದೆ. ಕಾಳಿ ಮಾತೆಯ ಕೃಪೆ ಭಾರತದ ಮೇಲೆ ಇದೆ’ ಎಂದಿದ್ದಾರೆ.

‘ಕಾಳಿ ಮಾತೆಯು ಮಾಂಸ ತಿನ್ನುವ, ಮದ್ಯ ಸ್ವೀಕರಿಸುವ ದೇವತೆಯಾಗಿ ನನಗೆ ಕಾಣುತ್ತಾಳೆ’ ಎಂದು ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಇತ್ತೀಚೆಗೆ ನೀಡಿದ್ದ ಹೇಳಿಕೆ ಉಲ್ಲೇಖಿಸದೆಯೇ ಮೋದಿ ಅವರು ಕಾಳಿ ಮಾತೆಯ ಶಕ್ತಿಯ ಕುರಿತು ಮಾತನಾಡಿದ್ದಾರೆ.

ಶಿವಸೇನಾದ 53 ಶಾಸಕರಿಗೆ ನೋಟಿಸ್

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯ ಕಾರ್ಯದರ್ಶಿಯು ಶಿವಸೇನಾದ 53 ಶಾಸಕರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಇವರಲ್ಲಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ಬಣದ 39 ಶಾಸಕರು, ಉದ್ಧವ್ ಠಾಕ್ರೆ ಬಣದ 14 ಶಾಸಕರು ಸೇರಿದ್ದಾರೆ.

ಉದ್ಧವ್ ಠಾಕ್ರೆ ಬಣದಲ್ಲಿದ್ದ ಶಾಸಕ ಸಂತೋಷ್ ಬಂಗಾರ್, ಕೊನೆಕ್ಷಣದಲ್ಲಿ ಶಿಂಧೆ ಬಣ ಸೇರಿದರು. ನೋಟಿಸ್ ಜಾರಿ ಆಗಿರುವುದನ್ನ ಉಭಯ ಬಣ ದೃಢಪಡಿಸಿವೆ. ಮಹಾರಾಷ್ಟ್ರ ವಿಧಾನಸಭೆ (ಪಕ್ಷಾಂತರಕ್ಕಾಗಿ ಅನರ್ಹತೆ) ನಿಯಮಗಳ ಅನುಸಾರ ನೋಟಿಸ್ ಜಾರಿಗೊಳಿಸಲಾಗಿದೆ. ಏಳು ದಿನಗಳಲ್ಲಿ ಉತ್ತರಿಸಬೇಕು ಎಂದು ಶಾಸಕರಿಗೆ ಸೂಚಿಸಲಾಗಿದೆ.

‘ಪಕ್ಷಕ್ಕೆ ಮರಳಿ ಬಂದರೆ ಸ್ವಾಗತ’: ನಂಬಿದವರೇ ಪಕ್ಷಕ್ಕೆ ದ್ರೋಹ ಬಗೆದ ಹೊರತಾಗಿಯೂ ಶಿವಸೇನಾದ ತಳಮಟ್ಟದ ಕಾರ್ಯಕರ್ತರು ಸಂಘಟನೆಯೊಂದಿಗೆ ದೃಢವಾಗಿ ಇದ್ದಾರೆ ಎಂದು ಶಾಸಕ ಆದಿತ್ಯ ಠಾಕ್ರೆ ಹೇಳಿದರು.

‘ನಿಷ್ಠಾ ಯಾತ್ರೆ’ಯ ಭಾಗವಾಗಿ ಮುಂಬೈ ಉಪನಗರ ದಹಿಸರ್‌ನಲ್ಲಿ ಮಾತನಾಡಿ ಅವರು, ಪಕ್ಷ ತೊರೆಯಲು ಬಯಸಿದವರು ಹೋಗಿದ್ದಾರೆ. ಪ್ರತಿ ಕ್ಷೇತ್ರದಲ್ಲಿ ಎರಡರಿಂದ ಮೂರು ಶಿವ ಸೈನಿಕರು ಇದ್ದಾರೆ ಎಂದು ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಂತಿರುಗಲು ಬಯಸುವ ಎಲ್ಲರಿಗೂ 'ಮಾತೋಶ್ರೀ' (ಠಾಕ್ರೆ ಖಾಸಗಿ ನಿವಾಸ) ಬಾಗಿಲು ತೆರೆದಿರುತ್ತದೆ’ ಎಂದು ಹೇಳಿದರು.

ಉದ್ಧವ್ ಮೇಲೆ ಒತ್ತಡ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾದಲ್ಲಿ ಮತ್ತೆ ಬಿರುಕು ಕಾಣಿಸಿಕೊಂಡಿದೆ. ಸೇನಾ ಸಂಸದರ ಪೈಕಿ ಬಹುತೇಕರು ಮುಂಬರುವ ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸುವಂತೆ ಠಾಕ್ರೆ ಮೇಲೆ ಒತ್ತಡ ಹೇರಿದ್ದಾರೆ. ಶಿವಸೇನಾ 18 ಲೋಕಸಭಾ ಹಾಗೂ ಮೂವರು ರಾಜ್ಯಸಭಾ ಸದಸ್ಯರನ್ನು ಹೊಂದಿದೆ.

‘ಮೈತ್ರಿ ಪಕ್ಷಗಳು ಒಟ್ಟಾಗಿ ಸ್ಪರ್ಧಿಸಲಿ’

ಔರಂಗಾಬಾದ್ (ಪಿಟಿಐ): ‘ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದ ಮೂರು ಪಕ್ಷಗಳೂ 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ’ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

‘ನಮ್ಮ ಪಕ್ಷದ ನಾಯಕರು, ಶಿವಸೇನಾ ಹಾಗೂ ಕಾಂಗ್ರೆಸ್ ಪಕ್ಷಗಳ ನಾಯಕರ ಜೊತೆ ಚರ್ಚಿಸಿದ ನಂತರ ಈ ಕುರಿತು ಸ್ಪಷ್ಟ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ’ ಎಂದು ತಿಳಿಸಿದ್ದಾರೆ.

ಬೀದಿ ನಾಟಕ: ಶಿವ ವೇಷಧಾರಿ ಬಂಧನ, ಬಿಡುಗಡೆ

ಗುವಾಹಟಿ (ಪಿಟಿಐ): ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ನಡೆದ ಬೀದಿ ನಾಟಕದಲ್ಲಿ ಶಿವನ ವೇಷ ಧರಿಸಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಸಾಮಾಜಿಕ ಕಾರ್ಯಕರ್ತ ಬಿರಿಂಚಿ ಬೊರಾ ಎಂಬುವರನ್ನು ಬಂಧಿಸಿರುವ ಘಟನೆ ಅಸ್ಸಾಂನಲ್ಲಿ ನಡೆದಿದೆ.

ಶನಿವಾರ ಬೆಲೆ ಏರಿಕೆ ಮತ್ತು ನಿರುದ್ಯೋಗ ವಿಚಾರವಾಗಿ ಬೊರಾ ಮತ್ತಿತರರು ಬೀದಿ ನಾಟಕ ಪ್ರದರ್ಶಿಸಿದ್ದರು. ನಾಟಕದಲ್ಲಿ, ಮೋಟಾರ್ ಬೈಕ್‌ನಲ್ಲಿ ಪೆಟ್ರೋಲ್ ಖಾಲಿಯಾದಾಗ ಶಿವ ವೇಷಧಾರಿ ವ್ಯಕ್ತಿ, ಪಾರ್ವತಿ ದೇವಿ ಪಾತ್ರಧಾರಿಯೊಂದಿಗೆ ಜಗಳವಾಡುವ ಸನ್ನಿವೇಶ ಇತ್ತು ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ, ಪ್ರಚಲಿತ ಸಮಸ್ಯೆಗಳ ಬಗ್ಗೆ ಬೀದಿ ನಾಟಕ ಪ್ರದರ್ಶಿಸುವುದು ಧರ್ಮ ನಿಂದನೆಯಲ್ಲ ಟ್ವೀಟ್ ಮಾಡಿದ್ದಾರೆ.

ಕಡಿಮೆ ವೇತನ: ಇಂಡಿಗೊ ಸಿಬ್ಬಂದಿ ರಜೆ

ನವದೆಹಲಿ (ಪಿಟಿಐ): ಹೈದರಾಬಾದ್ ಮತ್ತು ದೆಹಲಿಯಲ್ಲಿ ಇಂಡಿಗೊ ವಿಮಾನ ನಿರ್ವಹಣಾ ತಂತ್ರಜ್ಞರು ಕಡಿಮೆ ವೇತನ ವಿರೋಧಿಸಿ ಪ್ರತಿಭಟನಾರ್ಥವಾಗಿ ಕಳೆದ ಎರಡು ದಿನಗಳಿಂದ ಅನಾರೋಗ್ಯ ರಜೆ (ಸಿಕ್ ಲೀವ್) ಮೇಲೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಏರ್ ಇಂಡಿಯಾ ವಿಮಾನ ಸಂಸ್ಥೆ ನಡೆಸಿದ ನೇಮಕಾತಿಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಇಂಡಿಗೊದ ವಿಮಾನ ಕ್ಯಾಬಿನ್ ಸಿಬ್ಬಂದಿಯಲ್ಲಿ ಬಹುತೇಕರು ಅನಾರೋಗ್ಯ ರಜೆ ಪಡೆದಿದ್ದರಿಂದ ಜುಲೈ 2 ರಂದು ಇಂಡಿಗೊ ಸಂಸ್ಥೆಯ ಶೇ 55 ದೇಶಿಯ ವಿಮಾನಗಳ ಸಂಚಾರದಲ್ಲಿ ವಿಳಂಬವಾಗಿತ್ತು.

ಕೋವಿಡ್ 19 ಸಾಂಕ್ರಾಮಿಕ ರೋಗ ಉತ್ತುಂಗದಲ್ಲಿದ್ದಾಗ ಇಂಡಿಗೊ ತನ್ನ ಉದ್ಯೋಗಿಗಳ ಸಂಬಳ ಕಡಿತಗೊಳಿಸಿತ್ತು. ಶಿಸ್ತು ಕ್ರಮ ಕೈಗೊಳ್ಳದಂತೆ ಇಂಡಿಗೊ ತಂತ್ರಜ್ಞರು ಅನಾರೋಗ್ಯ ರಜೆ ಮೇಲೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಇಂಡಿಗೊ ಸಂಸ್ಥೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ. ಆಕಾಶ ಏರ್, ನವೀಕರಿಸಿದ ಜೆಟ್ ಏರ್‌ವೇಸ್, ಟಾಟಾ ಸಮೂಹ-ಮಾಲೀಕತ್ವದ ಏರ್ ಇಂಡಿಯಾ ನೇಮಕಾತಿ ಪ್ರಾರಂಭಿಸಿವೆ.

ಪ್ರಧಾನಿ ಹುದ್ದೆ: ಮುನ್ನಡೆ ಕಾಯ್ದುಕೊಂಡ ರಿಷಿ ಸುನಕ್

ಲಂಡನ್: ಬ್ರಿಟನ್ ಪ್ರಧಾನಿ ಸ್ಪರ್ಧೆಯಲ್ಲಿ ಭಾನುವಾರ ಒಂಬತ್ತು ಅಭ್ಯರ್ಥಿಗಳ ಹೆಸರು ಕೇಳಿಬಂದಿದ್ದು, ಮಾಜಿ ಸಚಿವ ರಿಷಿ ಸುನಕ್ ಅವರು ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನದ ಜೊತೆಗೆ ಪ್ರಧಾನಿ ಹುದ್ದೆಯ ಆಕಾಂಕ್ಷಿಗಳ ಪಟ್ಟಿಯಲ್ಲೂ ಮುನ್ನಡೆ ಕಾಯ್ದುಕೊಂಡಿದ್ದಾರೆ.

ಪ್ರಧಾನಿ ಸ್ಥಾನಕ್ಕೆ ಈ ಹಿಂದೆ ಕೇಳಿಬಂದಿದ್ದ ಪ್ರಮುಖ ಅಭ್ಯರ್ಥಿಗಳ ಪಟ್ಟಿಗೆ ಭಾನುವಾರ ವಾಣಿಜ್ಯ ಸಚಿವ ಪೆನಿ ಮೊರ್ಡಾಂಟ್ ಹೆಸರು ಸೇರಿದೆ. ಬ್ರಿಟನ್‌ನ ಸಾರಿಗೆ ಕಾರ್ಯದರ್ಶಿ ಗ್ರ್ಯಾಂಟ್ ಶಾಪ್ಸ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಜೆರೆಮಿ ಹಂಟ್ ಮತ್ತು ಪಾಕಿಸ್ತಾನ ಮೂಲದ ಮಾಜಿ ಆರೋಗ್ಯ ಸಚಿವ ಸಾಜಿದ್ ಜಾವಿದ್ ಅವರ ಉಮೇದುವಾರಿಕೆಯ ಬಳಿಕ ಪೆನಿ ಅವರು ‘ಪಿಎಂ4ಪಿಎಂ’ ಎನ್ನುವ ಹ್ಯಾಷ್‌ಟ್ಯಾಗ್‌ವುಳ್ಳ ವಿಡಿಯೊ ಹಂಚಿಕೊಂಡು ತಮ್ಮ ಉಮೇದುವಾರಿಕೆ ಘೋಷಿಸಿದ್ದಾರೆ.

‘ಪ್ರಧಾನಿಯಾದರೆ, ಮಹಿಳೆಯರ ಹಕ್ಕು ರಕ್ಷಿಸುತ್ತೇನೆ. ಆಕ್ರಮಣ ಮತ್ತು ನಿಂದನೆ ರಹಿತ ಪರಿಸರದಲ್ಲಿ ಪುರುಷರು ಅನುಭವಿಸುತ್ತಿರುವ ಸಂತಸದ ವಾತಾವರಣ ಹೆಣ್ಣುಮಕ್ಕಳಿಗೂ ಕಲ್ಪಿಸುತ್ತೇನೆ’ ಎಂದು ಪೆನಿ ಹಂಚಿಕೊಂಡಿರುವ ವಿಡಿಯೊದಲ್ಲಿ ಭರವಸೆ ನೀಡಿದ್ದಾರೆ.

ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಶೀಘ್ರದಲ್ಲೇ ತನ್ನ ಉಮೇದುವಾರಿಕೆಯನ್ನು ಘೋಷಿಸುವ ನಿರೀಕ್ಷೆಯಿದೆ. ಪ್ರಧಾನಿ ಸ್ಥಾನದ ಇತರ ಆಕಾಂಕ್ಷಿಗಳಲ್ಲಿ ಗೋವಾ ಮೂಲದ ಅಟಾರ್ನಿ ಜನರಲ್ ಸುವೆಲ್ಲಾ ಬ್ರೇವರ್‌ಮನ್, ಇರಾಕ್ ಮೂಲದ ನದಿಮ್ ಝುಹಾವಿ, ನೈಜೀರಿಯಾ ಮೂಲದ ಕೆಮಿ ಬೆಡಾನೋಚ್ ಮತ್ತು ಟಾಮ್ ತುಗೆಂಧತ್ ಸೇರಿದ್ದಾರೆ.


ಬಾರ್‌ನಲ್ಲಿ ಗುಂಡಿನ ದಾಳಿ: 15 ಸಾವು

ಜೋಹಾನ್ಸ್‌ಬರ್ಗ್(ದಕ್ಷಿಣ ಆಫ್ರಿಕಾ): ಇಲ್ಲಿನ ಬಾರೊಂದರಲ್ಲಿ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ 15 ಮಂದಿಯನ್ನು ಹತ್ಯೆಗೈದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ತಡರಾತ್ರಿ ಸೊವೆಟೊ ಹೊರವಲಯದ ಬಾರ್‌ನಲ್ಲಿ ಪಾರ್ಟಿ ಮಾಡುತ್ತಿದ್ದವರ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ಒಂಬತ್ತು ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದಿದ್ದಾರೆ.

ಮಿನಿ ಬಸ್ ಹಾಗೂ ಜೀಪ್‌ನಲ್ಲಿ ಬಂದಿದ್ದ 10 ರಿಂದ 15 ಜನರು ಈ ಕೃತ್ಯ ಎಸಗಿದ್ದಾರೆ ಎಂದು ಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಪ್ರಕರಣ– ನಾಲ್ವರ ಸಾವು: ಕ್ವಾಝುಲು-ನಟಾಲ್ ಪ್ರಾಂತ್ಯದ ಪೀಟರ್‌ಮರಿಟ್ಜ್ ಬರ್ಗ್‌ನ ಬಾರ್‌ನಲ್ಲಿ ಇಬ್ಬರು ವ್ಯಕ್ತಿಗಳು ಗ್ರಾಹಕರ ಮೇಲೆ ಗುಂಡಿನ ದಾಳಿ ನಡೆಸಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಎಂಟು ಮಂದಿ ಗಾಯ ಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ನೊವಾಕ್‌ಗೆ ಏಳನೇ ಕಿರೀಟ

ವಿಂಬಲ್ಡನ್: ಸರ್ಬಿಯಾ ಆಟಗಾರನಿಗೆ 21ನೇ ಗ್ರ್ಯಾನ್‌ಸ್ಲಾಂ; ನಿಕ್‌ಗೆ ನಿರಾಶೆ

ಲಂಡನ್ (ಎಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಭಾನುವಾರ ತಮ್ಮ ಎದುರಾಳಿ ನಿಕ್ ಕಿರ್ಗಿಯೊಸ್ ಏಕಾಗ್ರತೆ ಕಳೆದುಕೊಳ್ಳುವುದನ್ನು ಕಾದರು. ಅವರ ತಾಳ್ಮೆಗೆ ಕೊನೆಗೂ ಅದರ ಫಲ ಸಿಕ್ಕಿತು.

ಸೆಂಟರ್‌ಕೋರ್ಟ್‌ನಲ್ಲಿ ನಡೆದ ರೋಚಕ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ನೊವಾಕ್ 4-6, 6-3, 6-4, 7-6 ರಿಂದ ಟೈಬ್ರೇಕರ್‌ನಲ್ಲಿ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ವಿರುದ್ಧ ಜಯಿಸಿದರು. ಸತತ ನಾಲ್ಕನೇ ವರ್ಷ ಹಾಗೂ ಒಟ್ಟಾರೆ ಏಳನೇ ಬಾರಿ ವಿಂಬಲ್ಡನ್ ಟ್ರೋಫಿಗೆ ಮುತ್ತಿಕ್ಕಿದರು. ಅದರೊಂದಿಗೆ 21ನೇ ಗ್ರ್ಯಾನ್‌ಸ್ಲಾಂ ಕಿರೀಟ ಧರಿಸಿದರು. ರೋಜರ್ ಫೆಡರರ್ ದಾಖಲೆಯನ್ನು ಸರಿಗಟ್ಟಿದರು. ರಫೆಲ್ ನಡಾಲ್ 22 ಪ್ರಶಸ್ತಿ ಜಯಿಸಿದ ದಾಖಲೆ ಹೊಂದಿದ್ದಾರೆ. ಆದರೆ ವಿಂಬಲ್ಡನ್ ಪ್ರಶಸ್ತಿಯನ್ನು ರೋಜರ್ ಎಂಟು ಸಲ ಗೆದ್ದಿದ್ದು, ನೊವಾಕ್ ಎರಡನೇ ಸ್ಥಾನದಲ್ಲಿದ್ದಾರೆ.

ಅಗ್ರಶ್ರೇಯಾಂಕದ ಆಟಗಾರ ನೊವಾಕ್ ಹುಲ್ಲಿನಂಕಣದಲ್ಲಿ ಸತತ 28ನೇ ಪಂದ್ಯದಲ್ಲಿ ಅಜೇಯ ಓಟ ದಾಖಲಿಸಿದರು.

ಮಧ್ಯಾಹ್ನದ ಚುರುಕು ಬಿಸಿಲಿನಲ್ಲಿ ಆರಂಭವಾದ ಪಂದ್ಯದ ಮೊದಲ ಸೆಟ್‌ನಲ್ಲಿ ನಿಕ್ ಮೇಲುಗೈ ಸಾಧಿಸಿದರು. ಆದರೆ ಈ ಹಿನ್ನಡೆಯನ್ನೇ ತಮ್ಮ ಗೆಲುವಿಗೆ ಮೆಟ್ಟಿಲಾಗಿಸಿಕೊಂಡ ಅನುಭವಿ ನೊವಾಕ್, ಕೌಶಲಭರಿತ ಆಟದೊಂದಿಗೆ ಕಿರ್ಗಿಯೊಸ್ ಬಸವಳಿಯುವಂತೆ ಮಾಡಿದರು.

35 ವರ್ಷದ ನೊವಾಕ್ ಎರಡು ಮತ್ತು ಮೂರನೇ ಸೆಟ್‌ಗಳಲ್ಲಿ ತಮ್ಮ ಚುರುಕಾದ ಆಟದ ಮೂಲಕ ಎದುರಾಳಿಯನ್ನು ಹಣಿದರು. ಬ್ಯಾಕ್‌ಹ್ಯಾಂಡ್ ಮತ್ತು ಫೋರ್‌ಹ್ಯಾಂಡ್ ಹೊಡೆತಗಳ ರಸದೌತಣ ನೀಡಿದರು.

ಕ್ವಾರ್ಟರ್‌ಫೈನಲ್‌ನಲ್ಲಿಯೂ ನೊವಾಕ್ ಅವರು ಜೆನಿಕ್ ಸಿನ್ನರ್ ಎದುರು ಎರಡು ಸೆಟ್‌ಗಳ ಹಿನ್ನಡೆ ಅನುಭವಿಸಿ ನಂತರ ತಿರುಗೇಟು ನೀಡಿದ್ದರು. ಸೆಮಿಫೈನಲ್‌ನಲ್ಲಿಯೂ ಕ್ಯಾಮರಾನ್ ನೊರಿ ವಿರುದ್ಧ ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ್ದರು.

ಹೋದ ವರ್ಷದ ಟೂರ್ನಿಯ ಫೈನಲ್‌ನಲ್ಲಿಯೂ ಜೊಕೊವಿಚ್ ಆರಂಭಿಕ ಸೆಟ್‌ನಲ್ಲಿ ಸೋತು ನಂತರ ತಿರುಗೇಟು ನೀಡಿದ್ದರು. 2019ರ ಫೈನಲ್‌ನಲ್ಲಿ ಫೆಡರರ್ ವಿರುದ್ಧ ರೋಚಕ ಜಯ ಸಾಧಿಸಿದ್ದರು.

ಆದರೆ ಇಲ್ಲಿ ಕೊನೆಯ ಸೆಟ್‌ನಲ್ಲಿ ನಿಕ್ ಕಠಿಣ ಪೈಪೋಟಿಯೊಡ್ಡಿದರು. 6–6ರವರೆಗೂ ಸೆಟ್ ತುರುಸಿನಿಂದ ಕೂಡಿತ್ತು. ಕೊನೆಯ ಸೆಟ್ ಟೈಬ್ರೇಕರ್‌ನಲ್ಲಿ ನಿಕ್ ಮಾಡಿದ ತಪ್ಪುಗಳು ದುಬಾರಿಯಾದವು. ನೊವಾಕ್ ಇದರ ಲಾಭ ಪಡೆದರು.

ಸೂರ್ಯ ಶತಕ: ಭಾರತಕ್ಕೆ ಸರಣಿ; ಕೊನೆ ಪಂದ್ಯದಲ್ಲಿ ಇಂಗ್ಲೆಂಡ್ ಮೇಲುಗೈ

ಡೇವಿಡ್, ರೀಸ್ ಆಟಕ್ಕೆ ಒಲಿದ ಜಯ

ನಾಟಿಂಗ್‌ಹ್ಯಾಮ್ (ಪಿಟಿಐ): ಸೂರ್ಯಕುಮಾರ್ ಯಾದವ್ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದರು. ಆದರೂ ಭಾರತ ತಂಡಕ್ಕೆ ಇಂಗ್ಲೆಂಡ್ ಎದುರು ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧನೆ ಮಾಡಲು ಸಾಧ್ಯವಾಗಲಿಲ್ಲ.

ಭಾನುವಾರ ಟ್ರೆಂಟ್ ಬ್ರಿಜ್‌ನಲ್ಲಿ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮಲಾನ್ (77; 39ಎ, 4X6, 6X5) ಮತ್ತು ಲಿಯಾಮ್ (ಔಟಾಗದೆ 42; 29ಎ, 6X4) ಜೊತೆಯಾಟದ ಬಲದಿಂದ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 215 ರನ್ ಗಳಿಸಿತು. ಈ ಬೃಹತ್ ಮೊತ್ತವನ್ನು ಬೆನ್ನಟ್ಟಿದ ಭಾರತ ತಂಡಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 198 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಆತಿಥೇಯ ತಂಡವು 17 ರನ್‌ಗಳಿಂದ ಜಯಿಸಿತು. ಭಾರತವು 2–1ರಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಮುಂಬೈಕರ್ ಸೂರ್ಯಕುಮಾರ್ ಯಾದವ್ (117; 55ಎಸೆತ, 4X14, 6X6) ಏಕಾಂಗಿ ಹೋರಾಟದಿಂದಾಗಿ ತಂಡದಲ್ಲಿ ಗೆಲುವಿನ ಆಸೆ ಚಿಗುರಿತ್ತು. ಆದರೆ, ಅಗ್ರಕ್ರಮಾಂಕದ ಮತ್ತು ಮಧ್ಯಮ ಕ್ರಮಾಂಕದ ಪ್ರಮುಖ ಬ್ಯಾಟರ್‌ಗಳಿಗೆ ಇಂಗ್ಲೆಂಡ್‌ನ ರೀಸ್ ಟಾಪ್ಲಿ (22ಕ್ಕೆ3) ಹಾಗೂ ಡೇವಿಡ್ ವಿಲಿ (40ಕ್ಕೆ2) ಕಡಿವಾಣ ಹಾಕಿದರು.

ಈ ಪಂದ್ಯದಲ್ಲಿಯೂ ಭಾರತಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ದೊಡ್ಡ ಮೊತ್ತ ಬೆನ್ನಟ್ಟಿದ ಭಾರತ ತಂಡದ ಆರಂಭಿಕ ಜೋಡಿ ರೋಹಿತ್ ಮತ್ತು ರಿಷಭ್ ಅಗ್ಗದ ಮೊತ್ತಕ್ಕೆ ವಿಕೆಟ್ ಚೆಲ್ಲಿದರು. ವಿರಾಟ್ ಕೊಹ್ಲಿಯ ವಿಫಲಯಾತ್ರೆ ಮುಂದುವರಿಯಿತು. ತಂಡವು 31 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ಹೊತ್ತಿನಲ್ಲಿ ಸೂರ್ಯ ಮಾತ್ರ ಪ್ರಖರವಾಗಿ ಬೆಳಗಿದರು. ಎಲ್ಲ ಬೌಲರ್‌ಗಳಿಗೂ ಬಿಸಿ ಮುಟ್ಟಿಸಿದರು. ಶ್ರೇಯಸ್ ಅಯ್ಯರ್ ಜೊತೆಗೆ ನಾಲ್ಕನೇ ವಿಕೆಟ್‌ಗೆ 119 ರನ್ ಸೇರಿಸಿದರು. ಅದರಲ್ಲಿ ಶ್ರೇಯಸ್ ಕಾಣಿಕೆ 28 ರನ್‌ಗಳು ಮಾತ್ರ. ಸೂರ್ಯ 48 ಎಸೆತಗಳಲ್ಲಿ ಶತಕದ ಗಡಿ ತಲುಪಿದರು.

ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಮಿಂಚಿದ್ದ ಭುವನೇಶ್ವರ್ ಕುಮಾರ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರಿಗೆ ವಿಶ್ರಾಂತಿ ನೀಡಲಾಯಿತು. ಅವರ ಬದಲಿಗೆ ಆವೇಶ್ ಖಾನ್ ಮತ್ತು ರವಿ ಬಿಷ್ಣೋಯಿ ಅವಕಾಶ ಪಡೆದರು. ಆವೇಶ್ ಮತ್ತು ಉಮ್ರಾನ್ ಉತ್ತಮ ಬೌಲಿಂಗ್‌ನಿಂದಾಗಿ ಇಂಗ್ಲೆಂಡ್ ತಂಡವು 84 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತ್ತು. ಆದರೆ, ಈ ಹಂತದಲ್ಲಿ ಜೊತೆಗೂಡಿದ ಮಲಾನ್ ಮತ್ತು ಲಿಯಾಮ್ ಇನಿಂಗ್ಸ್ ರೂಪವನ್ನೇ ಬದಲಿಸಿಬಿಟ್ಟರು.

ಹರ್ಷಲ್ ಪಟೇಲ್ ತಾವೇ ಹಾಕಿದ 6ನೇ ಓವರ್‌ನಲ್ಲಿ ಮಲಾನ್ ಕ್ಯಾಚ್ ಪಡೆಯುವಲ್ಲಿ ವಿಫಲರಾಗಿ ಜೀವದಾನ ನೀಡಿದರು. ಇದು ಇಂಗ್ಲೆಂಡ್‌ಗೆ ವರದಾನವಾಯಿತು. ಹರ್ಷಲ್ ಹಾಕಿದ 19ನೇ ಓವರ್‌ನಲ್ಲಿ ವಿರಾಟ್ ಕೊಹ್ಲಿ ಲಿವಿಂಗ್‌ಸ್ಟೋನ್ ಕ್ಯಾಚ್ ಕೈಚೆಲ್ಲಿದರು.

ಮಲಾನ್ ಅವರು ಉಮ್ರಾನ್ ವೇಗದ ಮತ್ತು ಜಡೇಜಾ ಹಾಕಿದ ನಿಧಾನಗತಿಯ ಎಸೆತಗಳನ್ನೂ ನಿರಾಯಾಸವಾಗಿ ಬೌಂಡರಿಗೆರೆ ದಾಟಿಸಿದರು. ಇನ್ನೊಂದೆಡೆ ಲಿಯಾಮ್ ಕೂಡ ಚೆಂಡನ್ನು ಸಿಕ್ಸರ್‌ಗೆತ್ತುವಲ್ಲಿ ನಿರತರಾದರು. ಇವರಿಬ್ಬರೂ 4ನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿದರು. 17ನೇ ಓವರ್‌ನಲ್ಲಿ ರವಿ ಸ್ಪಿನ್‌ಗೆ ಮಲಾನ್ ಔಟಾದರು.

ಸ್ಕೋರ್ ಕಾರ್ಡ್

ಇಂಗ್ಲೆಂಡ್ 7ಕ್ಕೆ 215 (20 ಓವರ್)

ಜೇಸನ್ ಸಿ ಪಂತ್ ಬಿ ಉಮ್ರನ್ 27 (26ಎ, 4X1, 6X2), ಬಟ್ಲರ್ ಬಿ ಆವೇಶ್ ಖಾನ್ 18 (9ಎ, 4X2, 6X1), ಮಲಾನ್ ಸಿ ಪಂತ್ ಬಿ ರವಿ 77 (39ಎ, 4X6, 6X5), ಫಿಲ್ ಬಿ ಹರ್ಷಲ್ 8 (6ಎ, 4X1), ಲಿವಿಂಗ್‌ಸ್ಟೋನ್ ಔಟಾಗದೆ 42 (29ಎ, 6X4), ಮೋಯಿನ್ ಸಿ ಹರ್ಷಲ್ ಬಿ ರವಿ 0 (1ಎ), ಹ್ಯಾರಿ ಸಿ ರವಿ ಬಿ ಹರ್ಷಲ್ 19 (9ಎ, 4X3). ಜೋರ್ಡಾನ್ ರನೌಟ್ (ಜಡೇಜ/ಪಂತ್) 11 (3ಎ, 4X1, 6X1)

ಇತರೆ (ಲೆಗ್‌ಬೈ 1, ಲೆಗ್‌ಬೈ 5, ನೋಬಾಲ್ 2, ವೈಡ್ 5) 13

ವಿಕೆಟ್ ಪತನ: 1-31 (ಜೋಸ್ ಬಟ್ಲರ್, 3.4), 2-61 (ಜೇಸನ್ ರಾಯ್, 7.1), 3-84 (ಫಿಲ್ ಸಾಲ್ಟ್, 9.3), 4-168 (ಡೇವಿಡ್ ಮಲಾನ್, 16.3), 5-169 (ಮೋಯಿನ್ ಅಲಿ, 16.5), 6-197 (ಹ್ಯಾರಿ, 18.5), 7-215 (ಕ್ರಿಸ್ ಜೋರ್ಡಾನ್, 19.6)

ಬೌಲಿಂಗ್: ಆವೇಶ್ ಖಾನ್ 4-0-43-1, ಉಮ್ರಾನ್ ಮಲಿಕ್ 4-0-56-1, ರವಿ ಬಿಷ್ಣೋಯಿ 4-0-30-2, ರವೀಂದ್ರ ಜಡೇಜ 4-0-45-0, ಹರ್ಷಲ್ ಪಟೇಲ್ 4-0-35-2

ಭಾರತ 9ಕ್ಕೆ 198 (20 ಓವರ್)

ರೋಹಿತ್ ಸಿ ಫಿಲ್ ಬಿ ಟೋಪ್ಲಿ 11 (12ಎ, 4X2), ರಿಷಭ್ ಸಿ ಬಟ್ಲರ್ ಬಿ ಟೋಪ್ಲಿ 1 (5ಎ), ಕೊಹ್ಲಿ ಸಿ ಜೇಸನ್ ಬಿ ವಿಲಿ 11 (6ಎ, 4X1, 6X1), ಸೂರ್ಯಕುಮಾರ್ ಸಿ ಫಿಲ್ ಬಿ ಮೋಯಿನ್ 117 (55ಎ, 4X14, 6X6), ಶ್ರೇಯಸ್ ಸಿ ಬಟ್ಲರ್ ಬಿ ಟೋಪ್ಲಿ 28 (23ಎ, 6X2), ದಿನೇಶ್ ಎಲ್‌ಬಿಡಬ್ಲ್ಯು ವಿಲಿ 6 (7ಎ, 4X1), ಜಡೇಜ ಎಲ್‌ಬಿಡಬ್ಲ್ಯು ಗ್ಲೀಸನ್ 7 (4ಎ, 6X1), ಹರ್ಷಲ್ ಸಿ ಗ್ಲೀಸನ್ ಬಿ ಜೋರ್ಡಾನ್ 5 (6ಎ, 4X1), ಆವೇಶ್ ಔಟಾಗದೆ 1 (1ಎ), ರವಿ ಬಿ ಜೋರ್ಡಾನ್ 2 (2ಎ)

ಇತರೆ (ಲೆಗ್‌ಬೈ 1, ನೋಬಾಲ್ 1, ವೈಡ್ 7) 9

ವಿಕೆಟ್ ಪತನ: 1-2 (ರಿಷಭ್ ಪಂತ್, 1.1), 2-13 (ವಿರಾಟ್ ಕೊಹ್ಲಿ, 2.4), 3-31 (ರೋಹಿತ್ ಶರ್ಮಾ, 4.6), 4-150 (ಶ್ರೇಯಸ್ ಅಯ್ಯರ್, 15.1), 5-166 (ದಿನೇಶ್ ಕಾರ್ತಿಕ್, 16.5), 6-173 (ರವೀಂದ್ರ ಜಡೇಜ, 17.3), 7-191 (ಸೂರ್ಯಕುಮಾರ್ ಯಾದವ್, 18.5), 8-196 (ಹರ್ಷಲ್ ಪಟೇಲ್, 19.4), 9-198 (ರವಿ ಬಿಷ್ಣೋಯಿ, 19.6)

ಬೌಲಿಂಗ್: ಡೇವಿಡ್ ವಿಲಿ 4-0-40-2, ರೀಸ್ ಟೋಪ್ಲಿ 4-0-22-3, ರಿಚರ್ಡ್ ಗ್ಲೀಸನ್ 4-0-31-1, ಕ್ರಿಸ್ ಜೋರ್ಡಾನ್ 4-0-37-2, ಲಿಯಾಮ್ ಲಿವಿಂಗ್‌ಸ್ಟೋನ್ 2-0-36-0, ಮೋಯಿನ್ ಅಲಿ 2-0-31-1

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 17 ರನ್‌ಗಳ ಜಯ, ಪಂದ್ಯ ಶ್ರೇಷ್ಠ: ರೀಸ್ ಟೋಪ್ಲಿ ಭಾರತಕ್ಕೆ 2-1ರಿಂದ ಸರಣಿ ಗೆಲುವು


ಸೂರ್ಯಕುಮಾರ್ ಯಾದವ್ ಶತಕ ಸಂಭ್ರಮ–ಎಎಫ್‌ಪಿ ಚಿತ್ರ


ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ ಮಹಾರಾಜಾಸ್ ಗೋಲ್ಡ್ ಕಪ್ ರೇಸ್‌ನಲ್ಲಿ ಪ್ರಶಸ್ತಿ ಜಯಿಸಿದ ಥಿಯೊನ್ ಅಶ್ವದ ಮಾಲೀಕರಾದ ಲಿಯೇನ್ ಎಂ. ಲುಥರಿಯಾ (ಎಡ) ಮತ್ತು ಮಿಲನ್ ಲುಥರಿಯಾ ಅವರಿಗೆ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ (ಮಧ್ಯೆ) ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿ ಚೇರ್ಮನ್ ಕೆ. ಉದಯ್ ಈಶ್ವರನ್ (ಎಡದಿಂದ ಎರಡನೆಯವರು) ಮತ್ತು ವ್ಯವಸ್ಥಾಪನಾ ಸಮಿತಿ ಸದಸ್ಯ ಅಶ್ವಿನ್ ಡಿ.ಕೆ. ಇದ್ದಾರೆ– ಪ್ರಜಾವಾಣಿ ಚಿತ್ರ

ಆರ್ಚರಿ ವಿಶ್ವ ಗೇಮ್ಸ್: ಮೆಕ್ಸಿಕೊ ಜೋಡಿ ಎದುರು ಜಯ

ಅಭಿಷೇಕ್– ಜ್ಯೋತಿಗೆ ಕಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಭಿಷೇಕ್ ವರ್ಮಾ ಹಾಗೂ ಜ್ಯೋತಿ ಸುರೇಖಾ ವೆನ್ನಂ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಗೇಮ್ಸ್ ಆರ್ಚರಿಯ ಕಂಪೌಂಡ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಕಂಚಿನ ಪದಕದ ಸುತ್ತಿನಲ್ಲಿ ಭಾರತದ ಜೋಡಿಯು 157–156 ರಿಂದ ಮೆಕ್ಸಿಕೊದ ಆ್ಯಂಡ್ರಿಯಾ ಬೆಸೆರ್ರಾ ಮತ್ತು ಮಿಗೆಲ್ ಅವ ರನ್ನು ಮಣಿಸಿತು.

ಮೂರು ಸುತ್ತುಗಳ ಹಣಾಹಣಿಯ ಮೊದಲ ಸುತ್ತಿನಲ್ಲಿ ಅಭಿಷೇಕ್– ಜ್ಯೋತಿ ಸಂಪೂರ್ಣ ಮೇಲುಗೈ ಸಾಧಿಸಿದರು. ಆದರೆ ಎರಡನೇ ಸುತ್ತಿನಲ್ಲಿ ತಿರುಗೇಟು ನೀಡಿದ ಮೆಕ್ಸಿಕೊ ಜೋಡಿ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ಆದರೆ ನಿರ್ಣಾಯಕ ಸುತ್ತಿನಲ್ಲಿ ಭಾರತದ ಬಿಲ್ಗಾರರು ಒತ್ತಡ ಮೀರುವಲ್ಲಿ ಯಶಸ್ವಿಯಾದರು.

ವಿಶ್ವ ಗೇಮ್ಸ್‌ನಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದು ಎಂದು ಭಾರತ ಆರ್ಚರಿ ಸಂಸ್ಥೆ ತಿಳಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿಷೇಕ್ ವರ್ಮಾ ಅವರಿಗೆ 50ನೇ 'ಪೋಡಿಯಂ ಫಿನಿಶ್' ಆಗಿದೆ. ವಿಶ್ವ ಗೇಮ್ಸ್, ವಿಶ್ವ ಚಾಂಪಿಯನ್‌ಷಿಪ್, ವಿಶ್ವಕಪ್ ಫೈನಲ್, ವಿಶ್ವಕಪ್, ಏಷ್ಯನ್ ಗೇಮ್ಸ್, ಏಷ್ಯನ್ ಚಾಂಪಿಯನ್‌ಷಿಪ್ ಈ ಎಲ್ಲ ಟೂರ್ನಿಗಳ ಕಂಪೌಂಡ್ ವಿಭಾಗದಲ್ಲಿ ಅಭಿಷೇಕ್ ಪದಕ ಜಯಿಸಿದಂತಾಗಿದೆ.

ವೈಯಕ್ತಿಕ ವಿಭಾಗದ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ಅಭಿಷೇಕ್ 141–143ರಿಂದ ಫ್ರಾನ್ಸ್‌ನ ಜೀನ್ ಫಿಲಿಪ್ ಬೌಲ್ಚ್ ಎದುರು ಸೋತರು. ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಅವರು 145-148ರಿಂದ ಕೆನಡಾದ ಕ್ರಿಸ್ಟೋಫರ್ ಪರ್ಕಿನ್ಸ್ ವಿರುದ್ಧ ಮಣಿದರು.


ಜ್ಯೋತಿ ವೆನ್ನಂ ಮತ್ತು ಅಭಿಷೇಕ್ ವರ್ಮಾ– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಸಂಕ್ಷಿಪ್ತ ಸುದ್ದಿ

ಚೆಸ್: ಇನಿಯನ್‌ಗೆ ಎರಡನೇ ಸ್ಥಾನ

ಲಾ ಪ್ಲಾನೆ, ಫ್ರಾನ್ಸ್ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಪಿ. ಇನಿಯನ್ ಇಲ್ಲಿ ನಡೆದ ಲಾ ಪ್ಲಾನೆ ಅಂತರರಾಷ್ಟ್ರೀಯ ಚೆಸ್ ಟೂರ್ನಿಯಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ.


ಪಿ. ಇನಿಯನ್

19 ವರ್ಷದ ಇನಿಯನ್, ಒಂಬತ್ತು ಸುತ್ತುಗಳಲ್ಲಿ ಏಳು ಪಾಯಿಂಟ್ಸ್ ಕಲೆಹಾಕಿ, ಉಕ್ರೇನ್‌ನ ವಿಟಾಲಿ ಸಿವುಕ್ (ಏಳು ಪಾಯಿಂಟ್ಸ್) ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದರು. ಆದರೆ ಟೈಬ್ರೇಕ್‌ನಲ್ಲಿ ಉತ್ತಮ ಸ್ಕೋರ್ ಗಳಿಸಿ ಉಕ್ರೇನ್ ಆಟಗಾರ ಪ್ರಶಸ್ತಿ ತಮ್ಮದಾಗಿಸಿಕೊಂಡರು.ಇನಿಯನ್ ಒಂಬತ್ತು ಸುತ್ತುಗಳಲ್ಲಿ ಅಜೇಯರಾಗುಳಿದರು. ಐದರಲ್ಲಿ ಜಯ ಮತ್ತು ನಾಲ್ಕರಲ್ಲಿ ಡ್ರಾ ಸಾಧಿಸಿದರು.

ಮೂರನೇ ಸ್ಥಾನವು ಭಾರತದ ಸಯಂತನ್ ದಾಸ್ (6.5) ಅವರ ಪಾಲಾಯಿತು.

ಮೋಟರ್‌ರೇಸ್: ಸರ್ವೇಶ್, ರಜನಿಕೃಷ್ಣ ಮಿಂಚು

ಚೆನ್ನೈ (ಪಿಟಿಐ): ಹುಬ್ಬಳ್ಳಿಯ ಸರ್ವೇಶ್ ಬಾಳಪ್ಪ ಮತ್ತು ಅನುಭವಿ ರಜನಿ ಕೃಷ್ಣನ್ ಅವರು ಇಲ್ಲಿ ನಡೆಯುತ್ತಿರುವ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಮೋಟರ್‌ಸೈಕಲ್ ರೇಸ್‌ನಲ್ಲಿ ಅಮೋಘಲಯ ಮುಂದುವರಿಸಿದರು.

ಅಕ್ಸರ್ ಸ್ಪಾರ್ಕ್ಸ್ ರೇಸಿಂಗ್ ತಂಡದ ಸರ್ವೇಶ್ ನೊವೈಸ್ ಸ್ಟಾಕ್ 165 ಸಿಸಿ ಎರಡನೇ ರೇಸ್‌ನಲ್ಲಿ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು. 13 ನಿ. 6.38 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಪ್ರೊ ಸ್ಟಾಕ್ 301–400 ಸಿಸಿ ಓಪನ್ ಚೆನ್ನೈನ, ಆರ್‌ಎಸಿಆರ್ ಕ್ಯಾಸ್ಟ್ರೋಲ್ ಪವರ್ ತಂಡದ ರಜಿನಿ ಕೃಷ್ಣನ್ (15 ನಿ. 15.889 ಸೆ.) ಮೊದಲ ಸ್ಥಾನ ಗಳಿಸಿದರು. 165 ಸಿಸಿ ಓಪನ್ ವಿಭಾಗದಲ್ಲಿ ಚೆನ್ನೈನ, ಪೆಟ್ರೊನಸ್ ಟಿವಿಎಸ್ ರೇಸಿಂಗ್ ತಂಡದ ಕೆ.ವೈ. ಅಹ್ಮದ್ (15 ನಿ. 55.678 ಸೆ.) ಮೊದಲ ಸ್ಥಾನ ತಮ್ಮದಾಗಿಸಿಕೊಂಡರು.

ಫುಟ್‌ಬಾಲ್: ಲೆಜೆಂಡ್ಸ್ ಡಿ ಸ್ಪೋರ್ಟಿಂಗ್‌ಗೆ ಪ್ರಶಸ್ತಿ

ಬೆಂಗಳೂರು: ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ತಂಡವು ಕೆಎಸ್‌ಎಫ್‌ಎ ಬಿ ಡಿವಿಷನ್ ಮಹಿಳಾ ಫುಟ್‌ಬಾಲ್ ಲೀಗ್‌ನಲ್ಲಿ ಪ್ರಶಸ್ತಿ ಜಯಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಅಂತಿಮ ಲೀಗ್ ಪಂದ್ಯದಲ್ಲಿ ಲೆಜೆಂಡ್ಸ್ 1–0ಯಿಂದ ಯಂಗ್‌ಸ್ಟಾರ್ಸ್ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಸಂಧ್ಯಾ (17ನೇ ನಿಮಿಷ) ಗೋಲು ಗಳಿಸಿದರು. ಯಂಗ್‌ಸ್ಟಾರ್ಸ್ ರನ್ನರ್‌ಅಪ್ ಸ್ಥಾನ ಗಳಿಸಿತು.

ಇನ್ನೊಂದು ಪಂದ್ಯದಲ್ಲಿ ಟೆಕ್ನಿಕೊ ಫುಟ್‌ಬಾಲ್ ಫೌಂಡೇಷನ್ 2–0ಯಿಂದ ಜಿಆರ್‌ಕೆ ಗ್ಲಿಟರಿಂಗ್ ಎದುರು ಗೆದ್ದಿತು. ಟಿಎಫ್‌ಎಫ್ ಪರ ಜೆಮಿರಾಹ್ ನೇತ್ರಾವತಿ ಶರ್ಮಾ (3ನೇ ನಿಮಿಷ) ಮತ್ತು ಆತ್ಮಿಕಾ ರಾಜೇಂದ್ರ (31ನೇ ನಿ.) ಗೋಲು ದಾಖಲಿಸಿದರು.

ಕೆಎಸ್‌ಪಿಗೆ ಜಯ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ತಂಡವು ಎಂ.ಸಿ. ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕೆಎಸ್‌ಪಿ 81–56ರಿಂದ ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಎದುರು ಗೆದ್ದಿತು. ವಿಜೇತ ತಂಡದ ಪರ ಮನೋಜ್ (31 ಪಾಯಿಂಟ್ಸ್) ಮತ್ತು ನವೀನ್ ಮಿಂಚಿದರು. ರಾಜ್‌ಮಹಲ್ ತಂಡಕ್ಕಾಗಿ ರೋಹಿತ್ ಮತ್ತು ಶಿಶಿರ್ ತಲಾ 12 ಪಾಯಿಂಟ್ಸ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸುಪ್ರದೀಪ್ ಗಳಿಸಿದ 40 ಪಾಯಿಂಟ್ಸ್ ನೆರವಿನಿಂದ ರೈಸಿಂಗ್ ಸ್ಟಾರ್ ಬಿ.ಸಿ. ಮೈಸೂರು ತಂಡವು 85–79ರಿಂದ ಕೋರಮಂಗಲ ಎಸ್‌ಸಿ ಎದುರು ಗೆದ್ದಿತು.

ಇನ್ನುಳಿದ ಪಂದ್ಯಗಳಲ್ಲಿ ಜೆಎಸ್‌ಸಿ 101–82ರಿಂದ ಪ್ರೊಟೆಕ್ ಅಸೋಸಿಯೇಷನ್ ಮೈಸೂರು ಎದುರು, ಬಿಎಸ್‌ಎನ್‌ಎಲ್ 63–62ರಿಂದ ಬಾಷ್ ಎದುರು ರೋಚಕ ಜಯ ಸಾಧಿಸಿದವು.

ಆಟಗಾರರೊಂದಿಗೆ ಧೋನಿ ಸಂವಾದ

ಬರ್ಮಿಂಗ್‌ಹ್ಯಾಮ್ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್ ತಂಡದ ಆಟಗಾರರೊಂದಿಗೆ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಮಾತುಕತೆ ನಡೆಸಿದರು.


ಶನಿವಾರ ರಾತ್ರಿ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ ಜಯಿಸಿದ ನಂತರ ಧೋನಿ ಕೆಲವು ಯುವ ಆಟಗಾರರೊಂದಿಗೆ ಮಾತನಾಡಿದರು. ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್, ಇಶಾನ್ ಕಿಶನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರಿಗೆ ಕೆಲವು ಸಲಹೆಗಳನ್ನು ನೀಡಿದರು.

ಧೋನಿಯವರೊಂದಿಗೆ ತಾವು ಮಾತನಾಡುತ್ತಿರುವ ಚಿತ್ರಗಳನ್ನು ರಿಷಭ್ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದಾರೆ.

'ದಿಗ್ಗಜ ಎಂ.ಎಸ್. ಧೋನಿ ಮಾತನಾಡುವಾಗ ಎಲ್ಲರ ಕಿವಿಗಳು ಅವರತ್ತಲೇ ಇರುತ್ತವೆ' ಎಂದು ಬಿಸಿಸಿಐ ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಸಂದೇಶ ಹಾಕಿದೆ.

ಬ್ಯಾಡ್ಮಿಂಟನ್: ಚಿಕೊಗೆ ಪ್ರಶಸ್ತಿ

ಕ್ವಾಲಾಲಂಪುರ (ಎಎಫ್‌ಪಿ): ಇಂಡೊನೇಷ್ಯಾದ ಚಿಕೊ ಔರಾ ದ್ವಿ ವರ್ದೊಯೊ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.


ಚಿಕೊ ಔರಾ

ಚಿಕೊ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ 22-20, 21-15ರಿಂದ ಹಾಂಕಾಂಗ್‌ನ ಆ್ಯಂಗಸ್ ಎಂಗ್ ಕಾ ಲಾಂಗ್ ಅವರನ್ನು ಮಣಿಸಿದರು. ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಆ್ಯನ್ ಸೆ ಯಂಗ್ 21-17, 21-5ರಿಂದ ಚೀನಾದ ಚೆನ್ ಯುಫೆ ಅವರನ್ನು ಸೋಲಿಸಿದರು.

ಚಾಂಡಿಮಲ್ ಶತಕ: ಲಂಕೆಗೆ ಮುನ್ನಡೆ

ಗಾಲ್ (ಪಿಟಿಐ): ಬಲಗೈ ಬ್ಯಾಟರ್ ದಿನೇಶ್ ಚಾಂಡಿಮಲ್ ಗಳಿಸಿದ ಅಮೋಘ ಶತಕದ ಬಲದಿಂದ ಶ್ರೀಲಂಕಾ ತಂಡವು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಗಾಲ್ ಅಂತರರಾಷ್ಟ್ರೀಯ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಭಾನುವಾರ ಲಂಕಾ ತಂಡವು 149 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 431 ರನ್ ಗಳಿಸಿತು. 67 ರನ್‌ಗಳ ಮುನ್ನಡೆ ಸಾಧಿಸಿದೆ. ಶತಕ ಗಳಿಸಿರುವ ದಿನೇಶ್ (ಬ್ಯಾಟಿಂಗ್ 118; 232ಎ, 4X0, 6X1) ಮತ್ತು ರಮೇಶ್ ಮೆಂಡಿಸ್ (ಬ್ಯಾಟಿಂಗ್ 7) ಕ್ರೀಸ್‌ನಲ್ಲಿದ್ದಾರೆ.

ಮೊದಲು ಬ್ಯಾಟಿಂಗ್ ಮಾಡಿದ್ದ ಆಸ್ಟ್ರೇಲಿಯಾ ತಂಡವು 110 ಓವರ್‌ಗಳಲ್ಲಿ 364 ಗಳಿಸಿತ್ತು. ಅದಕ್ಕುತ್ತರವಾಗಿ ಆತಿಥೇಯ ತಂಡದ ನಾಯಕ ದಿಮುತ ಕರುಣರತ್ನೆ, ಕುಶಾಲ ಮೆಂಡಿಸ್, ಏಂಜೆಲೊ ಮ್ಯಾಥ್ಯೂಸ್ ಮತ್ತು ಕಮಿಂದು ಮೆಂಡಿಸ್ ಅರ್ಧಶತಕಗಳನ್ನು ಹೊಡೆದರು. ಇದರಿಂದಾಗಿ ತಂಡವು ಮುನ್ನಡೆ ಸಾಧಿಸುವ ಹಾದಿ ಸುಲಭವಾಯಿತು.

ಶ್ರೀಲಂಕಾದ ಐದನೇ ಕ್ರಮಾಂಕದ ಬ್ಯಾಟರ್ ದಿನೇಶ್ ತಾಳ್ಮೆಯ ಬ್ಯಾಟಿಂಗ್ ಮುಂದೆ ಬೌಲರ್‌ಗಳ ಯೋಜನೆಗಳು ಫಲಿಸಲಿಲ್ಲ. ಸ್ವೀಪ್, ಡ್ರೈವ್‌ಗಳನ್ನು ಪ್ರಯೋಗಿಸಿದ ದಿನೇಶ್ ಚೆಂದದ ಆಟವಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 110 ಓವರ್‌ಗಳಲ್ಲಿ 364, ಶ್ರೀಲಂಕಾ: 149 ಓವರ್‌ಗಳಲ್ಲಿ 6ಕ್ಕೆ431 (ದಿಮುತ ಕರುಣರತ್ನೆ 86, ಕುಶಾಲ ಮೆಂಡಿಸ್ 85, ಏಂಜೆಲೊ ಮ್ಯಾಥ್ಯೂಸ್ 52, ದಿನೇಶ್ ಚಾಂಡಿಮಲ್ ಬ್ಯಾಟಿಂಗ್ 118, ಕಮಿಂದು ಮೆಂಡಿಸ್ 61, ಮಿಚೆಲ್ ಸ್ಟಾರ್ಕ್ 47ಕ್ಕೆ2, ನೇಥನ್ ಲಯನ್ 160ಕ್ಕೆ2, ಮಿಚೆಲ್ ಸ್ವೆಪ್ಸನ್ 90ಕ್ಕೆ2)


ದಿನೇಶ್ ಚಾಂಡಿಮಲ್– ಎಎಫ್‌ಪಿ ಚಿತ್ರ


ಆಸ್ಟ್ರಿಯಾದ ಸ್ಪೈಲ್‌ಬರ್ಗ್‌ನಲ್ಲಿ ಭಾನುವಾರ ಕೊನೆಗೊಂಡ ಆಸ್ಟ್ರಿಯನ್ ಎಫ್1 ಗ್ರ್ಯಾನ್‌ಪ್ರಿಯಲ್ಲಿ ಪ್ರಶಸ್ತಿ ಜಯಿಸಿದ ಫೆರಾರಿ ಚಾಲಕ, ಮೊನಾಕೊದ ಚಾರ್ಲ್ಸ್ ಲೆಕ್ಲರ್ಕ್ ಸಂಭ್ರಮ– ಎಎಫ್‌ಪಿ ಚಿತ್ರ